ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 10 ಗುರುವಾರ 2025

ಸಂಪುಟ: 45 | ಸಂಚಿಕೆ: 350 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಅದ್ಧೂರಿ ಶ್ರೀಕಂಠೇಶ್ವರ ಗೌತಮ ಪಂಚ ಮಹಾರಥೋತ್ಸವ

ನಂಜನಗೂಡು, ಏ.9– ದಕ್ಷಿಣಕಾಶಿ ಎಂದೇ ಪ್ರಸಿದ್ಧಿ ಪಡೆದಿರುವ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿಯ ಗೌತಮ ಪಂಚ ಮಹಾರಥೋತ್ಸವ ಬುಧವಾರ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ದೊಡ್ಡಜಾತ್ರೆ ಅಂಗವಾಗಿ ಬುಧವಾರ ಮುಂಜಾನೆ 2 ಗಂಟೆಯಿಂದಲೇ ದೇವಾಲಯದಲ್ಲಿ ಸ್ವಾಮಿಗೆ ಕ್ಷೀರಾಭಿಷೇಕ, ಫಲಪಂಚಾಮೃತಾಭಿಷೇಕ, ಮಹೋನ್ನತ ಪೂರ್ವಕ ಏಕದಶಾವರ ರುದ್ರಾಭಿಷೇಕ, ಪ್ರಾತಃಕಾಲದ ಪೂಜೆ ನಂತರ ಹೋಮ ಹವನಾದಿಗಳನ್ನು ನಡೆಸಲಾಯಿತು. ದೇವಾಲಯದ ರೂಢಿ–ಸಂಪ್ರದಾಯದಂತೆ ರಥದ ಬಳಿ ಬಲಿ ಪೂಜೆಯನ್ನು ನೆರವೇರಿಸಲಾಯಿತು. ನಂತರ ವಿಶೇಷ ರತ್ನ ಖಚಿತ ವಜ್ರ ವೈಢೂರ್ಯಗಳಿಂದ ಶೃಂಗರಿಸಿದ್ದ ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವಮೂರ್ತಿಯನ್ನು ವಿಶೇಷ ಹೂಗಳಿಂದ ಅಲಂಕರಿಸಲಾಗಿತ್ತು. ಅಲ್ಲದೇ ರಥಗಳನ್ನು ವಿವಿಧ ಬಗೆಯ ಹೂಗಳಿಂದ, ಬಣ್ಣದ ಬಟ್ಟೆಯ ಬಾವುಟಗಳಿಂದ ಸಿಂಗರಿಸಲಾಗಿತ್ತು.

ಉದಯಾತ್ಪೂರ್ವ 5 ರಿಂದ 5.40 ಗಂಟೆಯೊಳಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ದೇವಸ್ಥಾನದ ಪ್ರಧಾನ ಅರ್ಚಕ ಜೆ.ನಾಗಚಂದ್ರ ದೀಕ್ಷಿತ್ ಹಾಗೂ ಅರ್ಚಕ ವೃಂದ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಿದ ನಂತರ ಶ್ರೀಕಂಠೇಶ್ವರ ಉತ್ಸವಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು.

ಬೆಳಗ್ಗೆ 5.45ರ ವೇಳೆಗೆ ಶಾಸಕ ದರ್ಶನ್, ಮಾಜಿ ಶಾಸಕರಾದ ಹರ್ಷವರ್ಧನ್, ಕೇಶವಮೂರ್ತಿ,



ಗೌತಮ ಪಂಚ ಮಹಾರಥೋತ್ಸವದಲ್ಲಿ ಭಕ್ತ ಸಾಗರದ ಮಧ್ಯೆ ಶ್ರೀಕಂಠೇಶ್ವರಸ್ವಾಮಿ ರಥ(ಗೌತಮ ರಥ) ಸಾಗುತ್ತಿರುವ ಅತ್ಯದ್ಭುತ ನೋಟ.

ರಥೋತ್ಸವದ ಸೊಬಗು ಕಂಡು ಪುಳಕಿತರಾದ ಭಕ್ತ ಸಮೂಹ

ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಮತ್ತು ದೇವಾಲಯ ಕಾರ್ಯನಿರ್ವಹಣಾಧಿಕಾರಿ ಜಗದೀಶ್ ಇಡುಗಾಯಿ ಒಡೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಈ ವೇಳೆ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಲಕ್ಷಾಂತರ ಭಕ್ತರು ಜೈ ಶ್ರೀಕಂಠೇಶ್ವರ ಜಯಘೋಷ, ಉದ್ಘೋಷಗಳನ್ನು ಕೂಗಿ ಬೃಹತ್ ಗಾತ್ರದ ತೇರಿನ ಹಗ್ಗ ಹಿಡಿದು ಎಳೆಯುವ ಮೂಲಕ ಭಕ್ತಿ ಪರಾಕಾಷ್ಠೆ ಮೆರೆದರು. ಬೆಳಗ್ಗೆ 8ರ ವೇಳೆಗೆ ಗೌತಮ ರಥವು ಯಾವುದೇ ಅಡ್ಡಿ ಆತಂಕಗಳಿಲ್ಲದೆ ಸ್ವಸ್ಥಾನ ಸೇರಿತು. ಭಕ್ತರು ಚಪ್ಪಾಳೆ ತಟ್ಟಿ ಸ್ವಾಗತಿಸಿದರು.

ಮೊದಲು ಗಣಪತಿ ರಥ, ನಂತರ ಶ್ರೀಕಂಠೇಶ್ವರ ಸ್ವಾಮಿಯವರ ದೊಡ್ಡರಥ (ಗೌತಮ ರಥ), ನಂತರ ಸುಬ್ರಮಣ್ಯೇಶ್ವರ, ಚಂಡಿಕೇಶ್ವರಸ್ವಾಮಿ ಮತ್ತು ಕೊನೆಯಲ್ಲಿ ಶ್ರೀಪಾರ್ವತಮ್ಮನವರ ರಥ ಸೇರಿದಂತೆ ಐದು ರಥಗಳು ರಥಬೀದಿಯಲ್ಲಿ 1.5 ಕಿಮೀ ದೂರ ಕ್ರಮಿಸಿ ಯಾವುದೇ ಅಡ್ಡಿ ಆತಂಕವಿಲ್ಲದೆ ಬೆಳಗ್ಗೆ 9.40ರ ವೇಳೆಗೆ ಸ್ವಸ್ಥಾನ ತಲುಪಿದವು. ರಥಗಳು ಚಲಿಸುವಾಗ ರಸ್ತೆ ಇಕ್ಕೆಲಗಳಲ್ಲಿ ನೆರೆದಿದ್ದ ಲಕ್ಷಾಂತರ ಭಕ್ತರು ರಥಕ್ಕೆ ಹಣ್ಣು ಜವನ ಎಸೆದು ಹರಕೆ ತೀರಿಸಿದರು. ನವ–ವಧುವರರು ಇಷ್ಟಾರ್ಥಸಿದ್ಧಿಗಾಗಿ ಪ್ರಾರ್ಥಿಸಿದರು. ■6ನೇ ಪುಟಕ್ಕೆ

ಹರಿಹರಾನಂದ ಸ್ವಾಮಿ, ಮಲ್ಲಾಜಮ್ಮ ಸೇರಿ ಹಲವರಿಗೆ ಅಂಬೇಡ್ಕರ್ ಪ್ರಶಸ್ತಿ ■ಪುಟ–3

ಪೆರಿಫೆರಲ್ ರಿಂಗ್ ರಸ್ತೆ: ಡಿಪಿಆರ್‌ಗೆ ಮುಡಾದಿಂದ ಟೆಂಡರ್ ■ಪುಟ–7

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ 500 ಕೋಟಿ ಕಿಕ್‌ಬ್ಯಾಕ್ ಆರೋಪ

- ಮೊದಲ ಬಾರಿ ಸಿಎಂ ಆಗಿದ್ದಾಗ 8 ಗಣಿ ಗುತ್ತಿಗೆ ಹರಾಜು ಬದಲು, ಗುತ್ತಿಗೆ ನವೀಕರಿಸಿ ನೂರಾರು ಕೋಟಿ ಕಿಕ್‌ಬ್ಯಾಕ್ ಪಡೆದು ಸರ್ಕಾರಕ್ಕೆ ಭಾರಿ ನಷ್ಟ
- ಇದರ ವಿಚಾರಣೆಗೆ ಅನುಮತಿ ನೀಡುವಂತೆ ರಾಜ್ಯಪಾಲರು ಮೊರೆ ಹೋದ ರಾಮಮೂರ್ತಿಗೌಡ
- ಈ ಅವಧಿಯಲ್ಲಿ ಸಿಎಂ ಕುಟುಂಬದ ಆಸ್ತಿ ಗಣನೀಯ ಹೆಚ್ಚಳವಾಗಿರುವ ಮಾಹಿತಿ; ಸಾಲಿಸಿಟರ್ ಜನರಲ್ ಅಭಿಪ್ರಾಯ ಕೇಳಿದ ರಾಜ್ಯಪಾಲರು

ಬೆಂಗಳೂರು,ಏ.9(ಕೆಎಂಶಿ)–ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದಾಗ 8 ಗಣಿ ಗುತ್ತಿಗೆಗಳನ್ನು ಹರಾಜು ಮಾಡುವ ಬದಲು, ಗುತ್ತಿಗೆ ನವೀಕರಿಸಿ 500 ಕೋಟಿ ರೂ. ಕಿಕ್ ಬ್ಯಾಕ್ ಪಡೆದು ಸರ್ಕಾರಕ್ಕೆ 5000 ಕೋಟಿ ರೂ. ನಷ್ಟ ಉಂಟು ಮಾಡಿದ್ದು, ಈ ಬಗ್ಗೆ ವಿಚಾರಣೆಗೆ ಅನುಮತಿ ನೀಡುವಂತೆ ಸಾಮಾಜಿಕ ಕಾರ್ಯಕರ್ತ ರಾಮಮೂರ್ತಿಗೌಡ ಎಂಬುವರು ರಾಜ್ಯಪಾಲರಿಗೆ ದೂರು ನೀಡಿದ್ದಾರೆ.

ಇವರ ದೂರಿನ ಆಧಾರದ ಮೇಲೆ ರಾಜ ಭವನ ಕಾನೂನು ತಜ್ಞರೊಂದಿಗೆ ಸಮಾ ಲೋಚಿಸಿ ಮುಂದಿನ ಕ್ರಮಕ್ಕಾಗಿ ಸಾಲಿಸಿಟರ್ ಜನರಲ್ ಅವರ ಅಭಿಪ್ರಾಯ ಕೇಳಿದೆ.

ಮುಡಾ ಹಗರಣ: ಏ.15ಕ್ಕೆ ತೀರ್ಪು ಪುಟ–4

ರಾಮಗಢ್, ತುಮಕೂರು ಮಿನರಲ್ಸ್, ಕರ್ನಾಟಕ ಲಿಮ್ಕೊ, ಕಾರಿಗನೂರು ಮಿನರಲ್ಸ್ ಸೇರಿದಂತೆ 8 ಕಂಪನಿಗಳಿಗೆ ಗುತ್ತಿಗೆ ನವೀಕರಿಸಿ ಸರ್ಕಾರಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕೋಟ್ಯಾಂತರ ರೂ. ನಷ್ಟ ಉಂಟು ಮಾಡಿದ್ದಾರೆ. ಈ ಕಂಪನಿಗಳ ಗುತ್ತಿಗೆ ನವೀಕರಿಸಿದ ನಂತರ ಸಿದ್ದರಾಮಯ್ಯ ಕುಟುಂಬದ ಆಸ್ತಿ ಅದರ ಹಿಂದಿನ ವರ್ಷಕ್ಕಿಂತ ಗಣನೀಯ ವಾಗಿ ಹೆಚ್ಚಳವಾಗಿದೆ. ಇದರ ಮಾಹಿತಿಯನ್ನು ■6ನೇ ಪುಟಕ್ಕೆ



ಹುರುಳಿಲ್ಲದ ವಿಷಯಕ್ಕೆ ವಿಷ ತುಂಬುವ ಪ್ರಯತ್ನ!

ಬೆಂಗಳೂರು: ಗಣಿ ಗುತ್ತಿಗೆ ನವೀಕರಣದ ವಿಚಾರಕ್ಕೆ ಸಂಬಂಧಿಸಿದಂತೆ ಹಲವು ಗೊಂದಲಗಳನ್ನು ಸೃಷ್ಟಿಸುವ ಪ್ರಯತ್ನ ನಡೆದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಇಂತಹ ಅಪಪ್ರಚಾರಗಳು ನಾನು ಅಧಿಕಾರಕ್ಕೆ ಬಂದಾಗಿನಿಂದಲೂ ನಡೆದುಕೊಂಡು ಬರುತ್ತಿವೆ. ಕೆಲವು ದುಷ್ಟಶಕ್ತಿಗಳು ರಾಜಭವನ ವನ್ನು ತಪ್ಪುದಾರಿಗೆಳೆಯುವ ಕೆಲಸ ವನ್ನು ನಿರಂತರವಾಗಿ ಮಾಡುತ್ತಿವೆ ಎಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ. ಇಂದು ಮಾಧ್ಯಮಗಳಲ್ಲಿ ಪ್ರಕಟಗೊಂಡ 8 ಗಣಿ ಕಂಪೆನಿಗಳ ಕುರಿತಾಗಿ ಪ್ರಕಟಗೊಂಡ ಸುದ್ದಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳ ಪತ್ರಿಕಾ ಹೇಳಿಕೆ ಹೊರ ಬಿದ್ದಿದೆ. ■6ನೇ ಪುಟಕ್ಕೆ

ವಾಲ್ಮೀಕಿ ನಿಗಮ ಹಗರಣ: ನಾಗೇಂದ್ರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ರಾಜ್ಯಪಾಲರು



ಬೆಂಗಳೂರು: ಕರ್ನಾಟಕ ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಬಿ.ನಾಗೇಂದ್ರ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿದ್ದಾರೆ. ಈ ಪ್ರಕರಣ ಸಂಬಂಧ ನಾಗೇಂದ್ರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಇಡಿ ಮನವಿ ಮಾಡಿತ್ತು. ಅದರಂತೆ ಇಂದು (ಏಪ್ರಿಲ್ 9) ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ನಾಗೇಂದ್ರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ. ಇದರಿಂದ ನಾಗೇಂದ್ರಗೆ ಮತ್ತೆ ಸಂಕಷ್ಟ ಎದುರಾದಂತಾಗಿದೆ. ಕರ್ನಾಟಕ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಭ್ರಷ್ಟಾಚಾರ ■6ನೇ ಪುಟಕ್ಕೆ

ಚೆಕ್‌ಬೌನ್ಸ್ ಕೇಸ್‌ನಲ್ಲಿ ನಾಗೇಂದ್ರಗೆ ಶಿಕ್ಷೆ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿನ ಅಕ್ರಮ ಹಣ ವರ್ಗಾವಣೆ ಕೇಸ್‌ನ ಆರೋಪಿ, ಮಾಜಿ ಸಚಿವ ಬಿ.ನಾಗೇಂದ್ರಗೆ ಚೆಕ್‌ಬೌನ್ಸ್ ಪ್ರಕರಣದಲ್ಲಿ ಶಿಕ್ಷೆ ವಿಧಿಸಲಾಗಿದೆ. ಈ ಪ್ರಕರಣದಲ್ಲಿ ಬಿ.ನಾಗೇಂದ್ರ ಸೇರಿದಂತೆ ಮೂವರು ಆರೋಪಿಗಳು 1 ಕೋಟಿ 25 ಲಕ್ಷ ರೂ. ದಂಡ ಪಾವತಿಸುವಂತೆ ನ್ಯಾಯಾಲಯ ಆದೇಶಿಸಿದೆ. ಒಂದು ವೇಳೆ ದಂಡ ಪಾವತಿಸದಿದ್ದರೆ ಒಂದು ವರ್ಷ ಸೆರೆವಾಸ ಅನುಭವಿಸಬೇಕೆಂದು 42ನೇ ಎಸಿಜೆಎಂ ನ್ಯಾಯಾಧೀಶರಾದ ಕೆ.ಎನ್.ಶಿವಕುಮಾರ್ ಬುಧವಾರ ಆದೇಶ ಹೊರಡಿಸಿದ್ದಾರೆ.

ಏನಿದು ಪ್ರಕರಣ: ದೂರುದಾರ ವಿಎಸ್‌ಎಲ್ ಸ್ಟೀಲ್ಸ್ ಲಿಮಿಟೆಡ್, ಮಾಜಿ ಸಚಿವ ಬಿ.ನಾಗೇಂದ್ರ ಹಾಗೂ ಅನಿಲ್ ರಾಜಶೇಖರ್ ■6ನೇ ಪುಟಕ್ಕೆ

ಶೇ.50:50ರ ಅನುಪಾತದಡಿ ಕಂಡ ಕಂಡವರಿಗೆ ನಿವೇಶನ ಹಂಚಿಕೆ ಹಗರಣದ ತನಿಖೆ ನಡುವೆಯೂ ಮುಡಾದಲ್ಲಿ ಪೌತಿ ಖಾತೆ ಕರ್ಮಕಾಂಡ ಬಯಲು; ಲೂಟಿ ರುಚಿ ಕಂಡವರು ಅದನ್ನು ಬಿಟ್ಟಾರೆಯೇ...! ಆಯುಕ್ತರು, ಕಾರ್ಯದರ್ಶಿ ಅನುಮೋದನೆ ಪಡೆಯದೇ

ನಕಲಿ ದಾಖಲೆ ಸೃಷ್ಟಿಸಿ ಮಾಡೆಲ್ ಹೌಸ್‌ಗೆ ಪೌತಿ ಖಾತೆ ನೀಡಿಕೆ

ಮುಡಾ ಕಚೇರಿ ವ್ಯವಸ್ಥಾಪಕ ಸೋಮಸುಂದ್ರು ಅಮಾನತು

- ವಿಶೇಷ ತಹಶೀಲ್ದಾರ್ ಕೆ.ವಿ.ರಾಜಶೇಖರ್ ವಿರುದ್ಧವೂ ಶಿಸ್ತು ಕ್ರಮಕ್ಕೆ ಶಿಫಾರಸ್ಸು
- ಆರ್‌ಟಿಐ ಕಾರ್ಯಕರ್ತ ಬಿ.ಎನ್.ನಾಗೇಂದ್ರ ದೂರಿನನ್ವಯ ಅಕ್ರಮ ಬಯಲು



ನಕಲಿ ದಾಖಲೆ ಸೃಷ್ಟಿಸಿ ಮಂಜೂರು ಮಾಡಿಕೊಟ್ಟಿರುವ ಮೈಸೂರಿನ ಗೋಕುಲಂ 3ನೇ ಹಂತದ ಮಾಡೆಲ್ ಹೌಸ್ ಸಂಖ್ಯೆ 867.

● ಎಸ್.ಟಿ.ರವಿಕುಮಾರ್

ಮೈಸೂರು, ಏ.9–ಶೇ.50:50ರ ಅನುಪಾತದಡಿ ಅಕ್ರಮವಾಗಿ ಸಾವಿರಾರು ನಿವೇಶನಗಳನ್ನು ಪರಭಾರೆ ಮಾಡಿರುವ ಬೃಹತ್ ಹಗರಣದ ತನಿಖೆ ನಡೆಯುತ್ತಿರುವ ಬೆನ್ನಲ್ಲೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಇದೀಗ ಪೌತಿ ಖಾತೆ ಕರ್ಮಕಾಂಡವೊಂದು ಬಯಲಾಗಿದೆ.



ಆಯುಕ್ತರು, ಕಾರ್ಯದರ್ಶಿಗಳ ಅನುಮೋದನೆಗೆ ಕಡತ ಕಳುಹಿಸದೇ ತಮ್ಮ ಹಂತದಲ್ಲೇ ನಕಲಿ ದಾಖಲೆ ಸೃಷ್ಟಿಸಿ ಮಾದರಿ ಮನೆಯ (ಮಾಡೆಲ್ ಹೌಸ್) ಪೌತಿ ಖಾತೆ ಮಾಡಿಕೊಟ್ಟು ಅಕ್ರಮವೆಸಗಿರುವ ಮುಡಾ ಕಚೇರಿ ವ್ಯವಸ್ಥಾಪಕ ಸೋಮಸುಂದ್ರುವನ್ನು, ಆಯುಕ್ತ ಎ.ಎನ್.ರಘುನಂದನ್ ಅವರು ಸೇವೆಯಿಂದ ಅಮಾನತು ಮಾಡಿ ಬುಧವಾರ ಆದೇಶ ಹೊರಡಿಸಿದ್ದಾರೆ.

ಅಲ್ಲದೇ, ಮುಡಾ ವಿಶೇಷ ತಹಶೀಲ್ದಾರ್ ಕೆ.ವಿ. ರಾಜಶೇಖರ್ ವಿರುದ್ಧವೂ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲಾಗಿದೆ. ಆರ್‌ಟಿಐ ಕಾರ್ಯಕರ್ತ ಬಿ.ಎನ್. ನಾಗೇಂದ್ರ ಅವರು ನೀಡಿದ್ದ ದೂರಿನನ್ವಯ ಪರಿಶೀಲಿಸಿದಾಗ ಅಕ್ರಮವೆಸಗಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಕಮಿಷ್ನರ್ ■6ನೇ ಪುಟಕ್ಕೆ

> ಮುಡಾದಲ್ಲಿ ಇಂತಹ ಪ್ರಕರಣಗಳು ಹಿಂದೆಲ್ಲಾ ಬಹಳಷ್ಟು ನಡೆದುಹೋಗಿವೆ. ಸರಿಯಾದ ತನಿಖೆ ಮಾಡಿದರೆ ನೂರಾರು ನಿವೇಶನ, ಮನೆ ಕಂಡ ಕಂಡವರ ಪಾಲಾಗಿರುವುದು ಬಯಲಾಗುತ್ತದೆ. ಇದಕ್ಕೆಲ್ಲಾ ಮುಡಾ ಸಿಬ್ಬಂದಿಗಳೇ ಕಾರಣ ಎಂಬ ದೂರು ಮೊದಲಿಂದಲೂ ಕೇಳಿ ಬರುತ್ತಲೇ ಇದೆ. ಇಂತಹ ಅಕ್ರಮದಲ್ಲಿ ತೊಡಗಿದವರು ಕೆಲವರು ಇನ್ನು ಸೇವೆಯಲ್ಲಿದ್ದರೆ, ಹಲವರು ನಿವೃತ್ತರಾಗಿದ್ದಾರೆ. ಬಹುತೇಕರು ಸ್ವಯಂ ನಿವೃತ್ತಿ ಪಡೆದಿದ್ದಾರೆ. ಇವರನ್ನು ವಿಚಾರಣೆಗೆ ಒಳಪಡಿಸುವುದು ಒಳ್ಳೆಯದು. ಆ ಕೆಲಸವನ್ನು ಮಾಡುವವರು ಯಾರು?

ಏ.14, ಮೈಸೂರಲ್ಲಿ ಅಂಬೇಡ್ಕರ್ ಜಯಂತ್ಯುತ್ಸವ ಮೆರವಣಿಗೆ



ಮೈಸೂರು,ಏ.9(ಜಿಎ)–ಆದಿ ಕರ್ನಾಟಕ ಮಹಾಸಂಸ್ಥೆ, ಅಶೋಕ ಪುರಂನ ದೊಡ್ಡ ಗರಡಿ, ಚಿಕ್ಕ ಗರಡಿ ಹಾಗೂ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಏ.14 ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವ ಮೆರವಣಿಗೆಯನ್ನು ಆಯೋಜಿಸಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮೆರವಣಿಗೆಗೆ ಅಶೋಕಪುರಂನ ಅಂಬೇಡ್ಕರ್ ಉದ್ಯಾನವನದಿಂದ ಚಾಲನೆ ನೀಡಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್, ಶಾಸಕರಾದ ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಲಿದ್ದಾರೆ. ಮೆರವಣಿಗೆಯ ಅಧ್ಯಕ್ಷತೆಯನ್ನು ಆದಿ ಕರ್ನಾಟಕ ಮಹಾಸಂಸ್ಥೆಯ ಅಧ್ಯಕ್ಷ ಪಿ.ಸಿದ್ದರಾಜು ವಹಿಸಲಿದ್ದಾರೆ.

ಅಶೋಕಪುರಂನ ಅಂಬೇಡ್ಕರ್ ಉದ್ಯಾನವನದಿಂದ ಆರಂಭವಾಗುವ ಮೆರವಣಿಗೆಯು ವಿವಿಧ ಕಲಾತಂಡಗಳೊಂದಿಗೆ ಅಶೋಕ ಪುರಂನ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ನಂತರ ಅಶೋಕ ವೃತ್ತ ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಬಸವೇಶ್ವರ ವೃತ್ತದ ಮೂಲಕ ಸಾಗಿ ಸಯ್ಯಾಜಿರಾವ್ ರಸ್ತೆಯಿಂದ ಕೆ.ಆರ್. ವೃತ್ತದ ಮೂಲಕ ಪುರಭವನ ತಲುಪಿ, ಮುಂಭಾಗವಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಮೆರವಣಿಗೆ ಮುಕ್ತಾಯವಾಗಲಿದೆ. ಈ ಮೆರವಣಿಗೆಗೆ ಮೈಸೂರು ಜಿಲ್ಲೆಯಿಂದ 50 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಆದಿ ಕರ್ನಾಟಕ ಮಹಾಸಂಸ್ಥೆಯ ಅಧ್ಯಕ್ಷ ಪಿ.ಸಿದ್ದರಾಜು, ಉಪಾಧ್ಯಕ್ಷ ಶಿವಸ್ವಾಮಿ, ಪ್ರಧಾನ ಕಾರ್ಯದರ್ಶಿ ಡಿ.ರಾಜು, ದೊಡ್ಡ ಗರಡಿ ಅಧ್ಯಕ್ಷ ಆರ್.ಸಿ.ಮಹೇಶ್, ಕಾರ್ಯದರ್ಶಿ ಎಸ್.ದೊರೆಸ್ವಾಮಿ, ಚಿಕ್ಕಗರಡಿ ಅಧ್ಯಕ್ಷ ಬಿ.ನಾಗರಾಜು, ಉಪಾಧ್ಯಕ್ಷ ಶಿವಕುಮಾರ್, ಖಜಾಂಚಿ ಎಸ್.ಕುಮಾರ್ ಉಪಸ್ಥಿತರಿದ್ದರು.

ಶ್ರೀ ರಾಮನವಮಿ ಆಚರಣೆ...



ಮೈಸೂರಿನ ಚಾಮುಂಡಿಪುರಂನಲ್ಲಿರುವ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ವತಿಯಿಂದ ಶ್ರೀ ರಾಮನವಮಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಚಾ.ನಗರ ಜಿಲ್ಲಾ ಹಾಡಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯ: ಎಲ್ಲಾ ಅಡೆತಡೆಗೆ ಪರಿಹಾರ

■ ಸೆಸ್ಕ್ ಅಧ್ಯಕ್ಷರೂ ಆದ ಶಾಸಕ ರಮೇಶ್ ಬಂಡಿಸಿದ್ದೇಗೌಡ ಭರವಸೆ ■ ಚಾಮರಾಜನಗರ ಡಿಸಿ ಶಿಲ್ಪನಾಗ್‌ರ ಮಹತ್ವಾಕಾಂಕ್ಷಿ ಯೋಜನೆ ಜಾರಿಗೆ ನೆರವು



ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ನಡೆದ ಚಾಮರಾಜನಗರ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ (ಸೆಸ್ಕ್) ಅಧ್ಯಕ್ಷರೂ ಆಗಿರುವ ಶಾಸಕ ರಮೇಶ್ ಬಂಡಿಸಿದ್ದೇಗೌಡ ಮಾತನಾಡಿದರು. ಚಿತ್ರದಲ್ಲಿ ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾನಾಗ್, ಸೆಸ್ಕ್ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್‌ರಾಜು, ಸೆಸ್ಕ್ ಮುಖ್ಯ ಆರ್ಥಿಕ ಅಧಿಕಾರಿ ಜಿ.ರೇಣುಕಾ ಇದ್ದಾರೆ.

ಮೈಸೂರು,ಏ.9(ಜಿಎ)–ಚಾಮರಾಜನಗರ ಜಿಲ್ಲೆಯ ಹಾಡಿಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಯಾವುದೇ ಸಮಸ್ಯೆ ಉಂಟಾದರೂ ಸರ್ಕಾರದ ಮಟ್ಟದಲ್ಲಿ ಮಾತುಕತೆ ನಡೆಸಿ ಬಗೆಹರಿಸುವುದಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ (ಸೆಸ್ಕ್) ಅಧ್ಯಕ್ಷರೂ ಆಗಿರುವ ಶಾಸಕ ರಮೇಶ್ ಬಂಡಿಸಿದ್ದೇಗೌಡ ಹೇಳಿದ್ದಾರೆ.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ನಡೆದ ಚಾಮರಾಜನಗರ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, "ಜಿಲ್ಲೆಯ ಹಾಡಿಗಳಿಗೆ ವಿದ್ಯುತ್ ಪೂರೈಸಲು ಅಗತ್ಯವಿರುವ ಕೆಲಸವನ್ನು ಅಧಿಕಾರಿಗಳು ಕೂಡಲೇ ಆರಂಭಿಸಬೇಕು. ಆನಂತರದಲ್ಲಿ ಯಾವುದೇ ಅಡೆತಡೆಗಳು ಅಥವಾ ಸಮಸ್ಯೆ ಉಂಟಾದಲ್ಲಿ ಖುದ್ದಾಗಿ ನಾನೇ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸರ್ಕಾರದ ಹಂತದಲ್ಲಿ ಮಾತುಕತೆ ನಡೆಸಿ ಅನುಮತಿ ಕೊಡಿಸುತ್ತೇನೆ ಎಂದು ಭರವಸೆ ನೀಡಿದರು.

ಇದಕ್ಕೂ ಮುನ್ನ ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ಜಿಲ್ಲೆಯ ವ್ಯಾಪ್ತಿಯಲ್ಲಿ 31 ಹಾಡಿಗಳಿವೆ. ಇವುಗಳಿಗೆ ವಿದ್ಯುತ್ ಪೂರೈಕೆ ಮಾಡುವ ನಿಟ್ಟಿನಲ್ಲಿ ಸೆಸ್ಕ್ ವತಿಯಿಂದ ಸ್ಪಂದನೆ ಸಿಕ್ಕಿದೆ. 31 ಹಾಡಿಗಳ 2000 ಕುಟುಂಬಕ್ಕೆ ವಿದ್ಯುತ್ ಪೂರೈಸಲು ಸರ್ಕಾರ 42 ಕೋಟಿ ರೂ.ಗಳನ್ನು ಖರ್ಚು ಮಾಡುವುದು ತೀರಾ ವಿರಳ. ಆದರೆ ಮುಖ್ಯಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಯಾವುದೇ ವಿಳಂಬ ಮಾಡದೆ, ಮೂಲಭೂತ ಹಕ್ಕು ಎಂದು ಪರಿಗಣಿಸಿ ವಿದ್ಯುತ್ ಪೂರೈಸಲು ಒಪ್ಪಿಗೆ ನೀಡಿದರು. ಆದರೆ, ಹಾಡಿಗಳಿಗೆ ವಿದ್ಯುತ್ ಪೂರೈಕೆ ಮಾಡಲು ಜಿಲ್ಲೆಯ ಹೆಚ್ಚಿನ ಭೂ ಪ್ರದೇಶ ಅರಣ್ಯ ಇಲಾಖೆಗೆ ಸೇರಿರುವುದು ದೊಡ್ಡ ಸವಾಲಾಗಿದೆ. ಅದಕ್ಕೆ ಅಗತ್ಯ ಕ್ರಮ ವಹಿಸಲಾಗುವುದು ಎಂದರು.

ಜಿಲ್ಲೆಯ ಶೇ.52ರಷ್ಟು ಭೂಪ್ರದೇಶ ಅರಣ್ಯ ಪ್ರದೇಶದಿಂದ ಕೂಡಿರುವ ಕಾರಣ ಅಭಿವೃದ್ಧಿ ಕೆಲಸಗಳಿಗೆ ಅಡ್ಡಿಯಾಗುತ್ತಿದೆ. ಹೀಗಾಗಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಅರಣ್ಯ ಇಲಾಖೆ ವತಿಯಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕಿದೆ. ಆದರೂ ಮಲೆ ಮಹದೇಶ್ವರ ಬೆಟ್ಟ ವ್ಯಾಪ್ತಿಯ ಪಾಲಾರ್ ಹಾಡಿಗೆ ವಿದ್ಯುತ್ ಸಂಪರ್ಕ ನೀಡಿರುವುದು ನಮಗೆ ಸಿಕ್ಕಿರುವ ಬಹುದೊಡ್ಡ ಯಶಸ್ಸು. ಈಗ ಉಳಿದ ಹಾಡಿಗಳಿಗೂ ವಿದ್ಯುತ್ ಪೂರೈಕೆ ಮಾಡುವ ನಿಟ್ಟಿನಲ್ಲಿ ಮುಂದಿನ ಕ್ರಮವನ್ನು ಕೈಗೊಳ್ಳಬೇಕಿದೆ. ಇದಕ್ಕಾಗಿ ಮುಂದಿನ ಮೂರು ತಿಂಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಬೇಕಿದ್ದು, ಇದಕ್ಕಾಗಿ ಜಿಲ್ಲಾಡಳಿತದಿಂದ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಉಳಿದಂತೆ ಜಿಲ್ಲೆಯಲ್ಲಿ ಗೃಹಜ್ಯೋತಿ, ಗಂಗಾ ಕಲ್ಯಾಣ, ಕುಸುಮ್–ಬಿ, ಕುಸುಮ್–ಸಿ ಯೋಜನೆಗಳ ಅನುಷ್ಠಾನ ಸೇರಿದಂತೆ ಸೆಸ್ಕ್ ವತಿಯಿಂದ ಕೈಗೊಳ್ಳಲಾಗಿರುವ ಕಾರ್ಯಕ್ರಮಗಳು ಹಾಗೂ ಇತರೆ ಕೆಲಸಗಳ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಯಲ್ಲಿ ಸೆಸ್ಕ್ ಮುಖ್ಯ ಆರ್ಥಿಕ ಅಧಿಕಾರಿ ಜಿ.ರೇಣುಕಾ, ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ ಶಾಖೆ) ಶರಣಮ್ಮ ಎಸ್.ಜಂಗಿನ್, ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ. ಸಂ) ಬಿ.ಆರ್. ರೂಪ, ಮುಖ್ಯ ಪ್ರಧಾನ ವ್ಯವಸ್ಥಾಪಕರು (ಆಂತರಿಕ ಪರಿಶೋಧನೆ) ಲಿಂಗರಾಜಮ್ಮ, ಪ್ರಧಾನ ವ್ಯವಸ್ಥಾಪಕರು(ಖರೀದಿ) ಎಲ್.ಲೋಕೇಶ್, ಚಾಮರಾಜನಗರ–ಕೊಡಗು ಜಿಲ್ಲೆಗಳ ಅಧೀಕ್ಷಕ ಇಂಜಿನಿಯರ್(ವಿ) ಸೋಮಶೇಖರ್ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕೂಡಲೇ ಕೆಲಸ ಆರಂಭಿಸಿ

ಮೈಸೂರು: ಜಿಲ್ಲೆಯ ಹಾಡಿಗಳಿಗೆ ವಿದ್ಯುತ್ ಪೂರೈಕೆ ಮಾಡುವ ನಿಟ್ಟಿನಲ್ಲಿ ಕಾರ್ಯ ಮುಂದುವರಿಸುವಂತೆ ಸೆಸ್ಕ್ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್‌ರಾಜು ನಿಗಮದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಈಗಾಗಲೇ ಅರಣ್ಯ ಇಲಾಖೆ ಅಧಿಕಾರಿಗಳ ಜೊತೆಗೆ ಮಾತುಕತೆ ನಡೆಸಲಾಗಿದೆ. ಯಾವುದೇ ಸಮಸ್ಯೆ ಆದಲ್ಲಿ ನಿಗಮದ ಅಧ್ಯಕ್ಷರು, ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೆ ಅದನ್ನು ಸರಿಪಡಿಸುತ್ತಾರೆ. ಹೀಗಾಗಿ ಯೋಜನೆಗೆ ಸಂಬಂಧಿಸಿದಂತೆ ಕಾಮಗಾರಿ ಮುಂದುವರಿಸಿ ಎಂದು ತಿಳಿಸಿದರು.

ಗ್ರಾಹಕರು ಹಾಗೂ ರೈತರಿಗೆ ಉತ್ತಮ ಸೇವೆ ನೀಡುವ ನಿಟ್ಟಿನಲ್ಲಿ ಫೀಡರ್ ನಿರ್ವಹಣೆ ಅಭಿಯಾನ, ಟ್ರಾನ್ಸ್‌ಫಾರ್ಮರ್ ನಿರ್ವಹಣೆ ಅಭಿಯಾನವನ್ನು ನಿರಂತರವಾಗಿ ಮಾಡಲಾಗುತ್ತಿದೆ. ಜೊತೆಗೆ ರೈತರಿಗೆ ಸಮರ್ಪಕ ವಿದ್ಯುತ್ ವ್ಯವಸ್ಥೆ ಹಾಗೂ ಪರಿವರ್ತಕಗಳನ್ನು ನೀಡಲು ಕ್ರಮವಹಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಒಳ ಮೀಸಲಾತಿ ಸಂಬಂಧ ಸಮೀಕ್ಷೆ

ಮನೆ ಮನೆ ಸಮೀಕ್ಷೆ ವೇಳೆ ಆದಿ ದ್ರಾವಿಡ ಮಾದಿಗ ಎಂದು ನಮೂದಿಸಲು ಮನವಿ

ಮೈಸೂರು,ಏ.9(ಜಿಎ)– ಕರ್ನಾಟಕದಲ್ಲಿ ಒಳ ಮೀಸಲಾತಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ಸಮೀಕ್ಷೆ ನಡೆಸಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಸರ್ಕಾರಿ ಅಧಿಕಾರಿಗಳು ಮಾದಿಗರ ಸಮೀಕ್ಷೆ ನಡೆಸಲು ಮನೆ ಮನೆಗೆ ಬಂದ ಸಂದರ್ಭದಲ್ಲಿ ನಮ್ಮ ಸಮುದಾಯದ ನಾಗರಿಕರು ಆದಿ ದ್ರಾವಿಡ ಮಾದಿಗ ಎಂದು ನಮೂದಿಸಬೇಕೆಂದು ರಾಜ್ಯ ಡಾ.ಬಿ.ಆರ್ ಅಂಬೇಡ್ಕರ್ ಆದಿ ದ್ರಾವಿಡ (ಪೌರಕಾರ್ಮಿಕ) ಯುವಕರ ಅಭಿವೃದ್ಧಿ ಮಹಾಸಂಘ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಹಾಸಂಘದ ಗೌರವಾಧ್ಯಕ್ಷ ಎನ್.ಮಾರ ಈ ವಿಷಯ ತಿಳಿಸಿ, ಆದಿ ದ್ರಾವಿಡ ಸಮಾಜ ಸುಮಾರು 40 ವರ್ಷಗಳಿಂದಲೂ ಯಾವುದೇ ಸರ್ಕಾರಗಳಿಂದ ಮೀಸಲಾತಿ ಸಿಗದೆ ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯದಲ್ಲೂ ಸಾಮಾಜಿಕವಾಗಿ ದುರ್ಬಲರಾಗಿದ್ದಾರೆ. ಕಷ್ಟಪಟ್ಟು ಉನ್ನತ ಶಿಕ್ಷಣ ಪಡೆದ ಸಮಾಜದ ವಿದ್ಯಾವಂತರೂ ಮೀಸಲಾತಿ ಸಿಗದೇ, ಯಾವುದೇ ಸರ್ಕಾರಿ ಉದ್ಯೋಗಗಳು ಸಿಗದೇ, ಉದ್ಯೋಗ ವಂಚಿತರಾಗಿ ಸ್ವಚ್ಛತಾ ಕೆಲಸ ಹಾಗೂ ಕೂಲಿ ಕೆಲಸಗಳನ್ನು ಆಧರಿಸಿ ಬದುಕುವಂತಾಗಿದೆ. ಕರ್ನಾಟಕದಲ್ಲಿ ಆದಿ ದ್ರಾವಿಡ ಜನಾಂಗದವರು ಸುಮಾರು 6 ಲಕ್ಷ ಜನರಿದ್ದಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಅನೇಕ ದಿನಗಳಿಂದ ಎಲ್ಲಾ ಮಾದಿಗ ಜನಾಂಗಕ್ಕೆ ಒಳ ಮೀಸಲಾತಿ ಸಿಗಲೇ ಬೇಕು ಎಂದು ಪಟ್ಟು ಹಿಡಿದು ಮಾದಿಗರ ಸಮೀಕ್ಷೆ ನಡೆಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಅವರ ಮನವಿಯನ್ನು ಪುರಸ್ಕರಿಸಿರುವ ಸರ್ಕಾರ ಮಾದಿಗ ಸಮುದಾಯದ ಸಮೀಕ್ಷೆ ನಡೆಸಲು ಮುಂದಾಗಿದೆ ಎಂದರು. ಗೋಷ್ಠಿಯಲ್ಲಿ ಮಹಾಸಂಘ ರಾಜ್ಯಾಧ್ಯಕ್ಷ ಶಿವಶ್ರೀನಿವಾಸ, ಸಭಾಧ್ಯಕ್ಷ ರಾಮಯ್ಯ, ಉಪಸಭಾಧ್ಯಕ್ಷ ಸನ್‌ಬೋರ್, ಗೌರವ ಕಾರ್ಯದರ್ಶಿ ಕೆ.ನಂಜಪ್ಪಬಸವನ ಗುಡಿ, ಕಾರ್ಯಾಧ್ಯಕ್ಷ ರಂಗಸ್ವಾಮಿ, ಅಧ್ಯಕ್ಷ ಮಂಚಯ್ಯ ಇದ್ದರು.

ಸಿದ್ದರಾಜುಗೆ ಹುಟ್ಟುಹಬ್ಬದ ಶುಭಾಶಯ...



ಮರಟಿಕ್ಯಾತನಹಳ್ಳಿ ಗ್ರಾಮದ ಜೆಡಿಎಸ್ ಮುಖಂಡರೂ ಆದ ಜಿ.ಟಿ.ದೇವೇಗೌಡರ ಆಪ್ತ ವಕೀಲರಾದ ಸಿದ್ದರಾಜು ಅವರ ಹುಟ್ಟುಹಬ್ಬವನ್ನು ಅವರ ಸ್ನೇಹಿತರು ಕೇಕ್ ಕತ್ತರಿಸಿ, ಸಿಹಿ ತಿನಿಸುವ ಮೂಲಕ ಆಚರಿಸಿದರು. ಈ ಸಂದರ್ಭದಲ್ಲಿ ಟಿಎಪಿಸಿಎಂಎಸ್ ಸದಸ್ಯ ಚಂದ್ರಶೇಖರ್, 44ನೇ ವಾರ್ಡ್‌ನ ಜೆಡಿಎಸ್ ಮುಖಂಡರಾದ ಸುರೇಶ್, ಆನಂದ್, ಕೇಬಲ್ ರವಿ, ರಾಜು, ಶಂಭೇಗೌಡ, ಶಿವು, ಟೆಂಟ್ ರವಿ, ಶಶಿಧರ್, ಮಂಜು ಕಾಳಪ್ಪ, ಲೋಕೇಶ್ ಇನ್ನಿತರರು ಉಪಸ್ಥಿತರಿದ್ದರು.

ಏ.13, ಮೈಸೂರಲ್ಲಿ ಮ್ಯಾರಥಾನ್ ಓಟ

ಮೈಸೂರು, ಏ.9(ಜಿಎ)–ಮೈಸೂರ್ ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್‌ನ ದಶಮಾನೋತ್ಸವದ ಅಂಗವಾಗಿ ಏ.13ರಂದು ಮ್ಯಾರಥಾನ್ ಓಟ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಂಶುಪಾಲ ಎಂ.ಎಸ್.ಪುಟ್ಟಸ್ವಾಮಿ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 6 ಗಂಟೆಗೆ ಮೈಸೂರು ಅರಮನೆ ಮುಂಭಾಗವಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಮ್ಯಾರಥಾನ್ ಆರಂಭವಾಗಲಿದ್ದು, ಮುಖ್ಯ ಅತಿಥಿಗಳಾಗಿ ಪೊಲೀಸ್ ಅಧೀಕ್ಷಕ ವಿಷ್ಣುವರ್ಧನ್, ಖೋ–ಖೋ ಪಟು ಚೈತ್ರ ಆಗಮಿಸಲಿದ್ದಾರೆ ಎಂದರು.

ಪುರುಷ, ಮಹಿಳೆ ವಿಭಾಗದಲ್ಲಿ ಮ್ಯಾರಥಾನ್ ನಡೆಯಲಿದ್ದು, ಪ್ರಥಮ ಸ್ಥಾನಕ್ಕೆ 10 ಸಾವಿರ ರೂ., ದ್ವಿತೀಯ 5 ಸಾವಿರ ರೂ., ಹಾಗೂ ತೃತೀಯ ಬಹುಮಾನವಾಗಿ 3 ಸಾವಿರ ರೂ., ಪ್ರಮಾಣ ಪತ್ರ, ಪದಕ, ಟಿ.ಶರ್ಟ್ ನೀಡಲಾಗುತ್ತದೆ. ಮಾಹಿತಿಗಾಗಿ 9743349231 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಚೇತನ್, ಸುಮಂತ್, ಜಾನಕಿ ರೆಡ್ಡಿ, ಹರ್ಷಿತ ಉಪಸ್ಥಿತರಿದ್ದರು.

ಇಂದಿನಿಂದ ಏ.20ರವರೆಗೆ ಮೈಸೂರಿನ ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಏ.9– ದೇವನೂರು ಮತ್ತು ರಾಜೀವ್‌ನಗರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಏ.10ರಿಂದ 20ರವರೆಗೆ ಮಹದೇವಪುರ ರಸ್ತೆ, ಎಜೆ ಬ್ಲಾಕ್, ಸತ್ಯನಗರ, ಉದಯಗಿರಿ, ಮಹಮ್ಮದಿಯಾ ಮಸ್ಜಿದ್, ಶಾಂತಿನಗರ ಕೆಇಬಿ ಕಾಲೋನಿ, ಭಾರತ್‌ನಗರ, ಲಿಡ್ಕರ್ ಕಾಲೋನಿ, ಹಂಚ್ಯ ಸಾತಗಳ್ಳಿ ಎ ಜೋನ್, ರಾಜೀವನಗರ 1ನೇ, 2ನೇ ಮತ್ತು 3ನೇಹಂತ, ಅಲ್‌ಬದರ್ ಮಸ್ಜಿದ್ ವೃತ್ತ, ಕ್ರಿಶ್ಚಿಯನ್ ಕಾಲೋನಿ, ಮುನೇಶ್ವರನಗರ, ಈಡನ್ ಗಾರ್ಡನ್, ನಾರಾಯಣ ಆಸ್ಪತ್ರೆ, RTO-55, ಗುಪ್ತಾ ಸ್ಟೋರ್, ಶಿವಣ್ಣ ಸರ್ಕಲ್, ಮಾದೇಗೌಡ ಸರ್ಕಲ್ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಇಂದಿನಿಂದ ಪುಟಾಣಿ ಪರ್‌ಪಂಚ ಬೇಸಿಗೆ ಶಿಬಿರ

ಮೈಸೂರು: ಮೈಸೂರಿನ ಶ್ರೀಗುರು ಕಲಾ ಶಾಲೆ ವತಿಯಿಂದ ಏ.10ರಿಂದ ಮೇ 1ರವರೆಗೆ ಪುಟಾಣಿ ಪರ್‌ಪಂಚ ಮಕ್ಕಳ ಬೇಸಿಗೆ ಶಿಬಿರ ಆಯೋಜಿಸಲಾಗಿದೆ.

ಮೈಸೂರಿನ ಕುವೆಂಪುನಗರದ ವಾಸವಿ ವಿದ್ಯಾನಿಕೇತನದಲ್ಲಿ ಏರ್ಪಡಿಸಿರುವ ಶಿಬಿರದಲ್ಲಿ ನಾಟಕ, ರಂಗಾಟಗಳು, ಚಿತ್ರಕಲೆ, ಸಾಧಕರೊಂದಿಗೆ ಸಂವಾದ, ಪ್ರಕೃತಿ ವೀಕ್ಷಣೆ, ಕರಕುಶಲ ವಿನ್ಯಾಸ ಸೇರಿದಂತೆ ವಿವಿಧ ರೀತಿಯ ಕಲಾ ಪ್ರಕಾರಗಳ ತರಬೇತಿ ನೀಡಲಾಗುತ್ತದೆ. ಮಾಹಿತಿಗಾಗಿ 9980794690 ಸಂಪರ್ಕಿಸಬಹುದು.

ಭ್ರಷ್ಟಾಚಾರ ಮುಕ್ತ ಚುನಾವಣೆ ಬಗ್ಗೆ ಜಾಗೃತಿ



ಬಾಗಲಕೋಟೆ ಜಿಲ್ಲೆ ನವನಗರ ನಿವಾಸಿ ನಾಗರಾಜ್ ಕುಲಕುಟಗರ ಮೈಸೂರಿನ ಪುರಭವನದಲ್ಲಿ ಅರಿವು ಮೂಡಿಸಿದರು.

ಮೈಸೂರು, ಏ.9(ಜಿಎ)–ಭ್ರಷ್ಟಾಚಾರ ಮುಕ್ತ ಚುನಾವಣೆ ಬಗ್ಗೆ ಜಾಗೃತಿ ಮೂಡಿಸಲು ಬಾಗಲಕೋಟೆ ಜಿಲ್ಲೆ ನವ ನಗರ ನಿವಾಸಿ ನಾಗರಾಜ್ ಕುಲಕುಟಗರ ವಿಧಾನ ಸೌಧ ಮುಂಭಾಗದಿಂದ ಜಾಗೃತಿ ಪಾದಯಾತ್ರೆ ಆರಂಭಿಸಿದ್ದು, ಮೈಸೂರಿನ ಪುರಭವನದ ಆವರಣದಲ್ಲಿ ಕುಳಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು. ನಾಗರಾಜ್ ಅವರು ಕಳೆದ ಲೋಕಸಭೆ, ವಿಧಾನ ಸಭೆಯಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದರು. ಆ ಸಮಯದಲ್ಲಿ ರಾಜಕಾರಣಿಗಳು ಮತಕ್ಕಾಗಿ ಹಣ ಹಂಚುತ್ತಿರುವುದನ್ನು ಕಂಡು, ವೃತ್ತಿಗೆ ರಾಜಿ ನಾಮೆ ನೀಡಿ ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ಪಾದಯಾತ್ರೆ ಆರಂಭಿಸಿದರು. ಫೆ16ರಂದು ಬೆಂಗಳೂರಿನ ವಿಧಾನ ಸಭೆ ಮುಂಭಾಗದಿಂದ ಪಾದಯಾತ್ರೆ ಆರಂಭಿಸಿದ್ದು, 6 ಜಿಲ್ಲೆ ಕ್ರಮಿಸಿದ್ದಾರೆ.

ನಿತ್ಯ 15ರಿಂದ 20 ಕಿ.ಮೀ ಕ್ರಮಿಸುತ್ತೇನೆ. ಜನರಿಗೆ ಪರ್ಯಾಯ ರಾಜಕಾರಣದ ಅರಿವು ಮೂಡಿಸುತ್ತಿದ್ದು, ಸ್ವಚ್ಛ ರಾಜಕಾರಣದ ಕುರಿತು ಮಾಹಿತಿ ನೀಡುತ್ತಿದ್ದೇನೆ. ಮೂರು ಹಂತಗಳಲ್ಲಿ ಈ ಆಂದೋಲನ ನಡೆಸಲಿದ್ದೇನೆ ಎಂದು ನಾಗರಾಜ್ ಕುಲಕುಟಗರ ತಿಳಿಸಿದರು.

ನಿಧನ

ಕೆ.ದಯಾನಂದ



ಮೈಸೂರು, ಏ.9–ಮೈಸೂರಿನ ಗೋಕುಲಂ 2ನೇ ಹಂತದ ಆದಿಪಂಪ ರಸ್ತೆಯಲ್ಲಿರುವ ಮಾತಾ ಮಂದಿರದ ಜ್ಯೋತಿಷಿ, ಮಂಚೇಗೌಡನಕೊಪ್ಪಲಿನ ನಿವಾಸಿ ಲೇ.ಕೃಷ್ಣಮೂರ್ತಿ ಅವರ ಪುತ್ರ ಕೆ.ದಯಾನಂದ್(57) ಅವರು ಬುಧವಾರ ಮಧ್ಯಾಹ್ನ ಹೃದಯಾಘಾತದಿಂದ ನಿಧನರಾದರು. ಮೃತರು ತಾಯಿ ಪ್ರಮೀಳಮ್ಮ, ಪತ್ನಿ ವೀಣಾ, ಪುತ್ರ ಗುರುಕಿರಣ್ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಏ.10) ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮಹಬೂಬ್ ಖಾನ್ @ ಬಾಬು ಭಾಯ್




ಮೈಸೂರಿನ ಬನ್ನಿಮಂಟಪದ ಮೆ॥ ಸ್ಟಾರ್ ಫ್ಲೋರ್ ಮಿಲ್ ಮಾಲೀಕರಾದ ಮಹಬೂಬ್ ಖಾನ್ @ ಬಾಬು ಭಾಯ್ (70) ಬುಧವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಮೊಮ್ಮಕ್ಕಳು, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಟಿಪ್ಪು ಸರ್ಕಲ್ ಹಿಂಭಾಗವಿರುವ ಮುಸ್ಲಿಮರ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಎನ್.ಚಂದ್ರಮಣಿ



ಮೈಸೂರಿನ ಒಲಂಪಿಯಾ ಟಾಕೀಸ್ ಎದುರು, ಮನೆ ನಂ.1658, 'ಲಕ್ಷ್ಮಿ ನಿಲಯ'ದ ನಿವಾಸಿ ದಿವಂಗತ ಲೇಟ್ ಸೂರ್ಯನಾರಾಯಣ್ ಅವರ ಪತ್ನಿ ಶ್ರೀಮತಿ ಎನ್.ಚಂದ್ರಮಣಿ (74) ಬುಧವಾರ ಬೆಳಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಓರ್ವ ಪುತ್ರಿ, ಅಳಿಯ, ಇಬ್ಬರು ಮೊಮ್ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.04.2025 ಗುರುವಾರ, ಮಳೆ ನಕ್ಷತ್ರ: ರೇವತಿ 31.03.2025 ರಿಂದ 12.04.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗಳು, ಕುತ್ತಿಗೆ ಹಾಗೂ ಬೆನ್ನುನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಅಧಿಕ ರಕ್ತದೊತ್ತಡ ಮತ್ತು ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್ :** ಕರ್ನಾಟಕ ಸಾಂಸ್ಕೃತಿಕ ವೈಭವ ಕಾರ್ಯಕ್ರಮ, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ಗಂಟೆಗೆ.

■ **ಶ್ರೀ ಗೋಕುಲ ಸಾಂಸ್ಕೃತಿಕ ವೇದಿಕೆ :** ಡಾ. ಎಂ. ಲೀಲಾವತಿ ಪ್ರಶಸ್ತಿ, ಕಲಾವಿದರ ಅಭಿನಂದನಾ ಸಮಾರಂಭ, ಕರೋಕೆ ಗಾಯನ, ಉದ್ಘಾಟನೆ : ಚಾ.ನಗರ ನಗರಸಭೆ ಮಾಜಿ ಅಧ್ಯಕ್ಷೆ ಶ್ರೀಮತಿ ಚಿನ್ನಮ್ಮ, ಮುಖ್ಯ ಅತಿಥಿಗಳು : ಸಹಾಯಕ ಪ್ರಾಧ್ಯಾಪಕ ಡಾ. ಎ.ಆರ್. ಪ್ರಕೃತಿ, ಚಲನಚಿತ್ರ ನಿರ್ಮಾಪಕ ಎ.ಎಂ. ಬಾಬುನಾಯ್ಡು, ಚಾ.ನಗರ ಕೃಷಿ ಇಲಾಖೆ ಅಧೀಕ್ಷಕ ಎಂ.ಭಾಸ್ಕರ್, ಗುತ್ತಿಗೆದಾರ ಎಂ.ಬಿ. ನಾರಾಯಣ ಸ್ವಾಮಿ, ಅಧ್ಯಕ್ಷತೆ : ಸುಗಮ ಸಂಗೀತ ಕಲಾವಿದ ಜಿ.ಡಿ. ರಾಜಗೋಪಾಲ್ ಹೆಚ್.ಡಿ. ಕೋಟೆ, ಸ್ಥಳ: ರೋಟರಿ ಸೆಂಟರ್, ಎ.ಸಿ. ಹಾಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಆಪ್ಟಿಕೇರ್ :** ಉಚಿತ ವಾಕ್ ಮತ್ತು ಶ್ರವಣ ತಪಾಸಣಾ ಶಿಬಿರ, ಸ್ಥಳ: ಆಪ್ಟಿಕೇರ್ ಆಸ್ಪತ್ರೆ, ಅಗ್ರಹಾರ, ಬೆಳಗ್ಗೆ 11 ರಿಂದ.

■ **ಅರಳಿಕಟ್ಟೆ ಶ್ರೀ ರಾಮ ದೇವಸ್ಥಾನ ಧಾರ್ಮಿಕ ಮತ್ತು ದಾನದತ್ತಿ :** ಶ್ರೀರಾಮನವಮಿ, ಸಂಜೆ 6.30 ರಿಂದ ವಿದ್ಯಾರಣ್ಯಪುರಂನ ಶ್ರೀ ಸ್ಕಂದ ಭಜನಾ ಮಂಡಳಿಯಿಂದ ಭಜನೆ, ಸ್ಥಳ: ದೇವಸ್ಥಾನದ ಆವರಣ, ಚಾಮರಾಜಪುರಂ.

■ **ವಸುಂಧರಾ ಪ್ರದರ್ಶಕ ಕಲೆಗಳ ಸಂಸ್ಥೆ :** ಶ್ರೀಮತಿ ಸಾಧನಾ ಜೋಯಿಸ್ ಹಾಗೂ ಶ್ರೀ ಸತ್ಯನಾರಾಯಣ ಜೋಯಿಸ್ ಅವರ ಪುತ್ರಿ ವಿದುಷಿ ಶ್ರೀಮತಿ ನಮ್ರತಾ ಜೋಯಿಸ್ ಅವರಿಂದ ಭರತನಾಟ್ಯ ರಂಗಪ್ರವೇಶ, ಉದ್ಘಾಟನೆ : ಕರ್ನಾಟಕ ಕಲಾಶ್ರೀ ಡಾ. ರಾ.ಸ. ನಂದಕುಮಾರ್, ಮುಖ್ಯ ಅತಿಥಿಗಳು : ಡಾ. ಎಂ. ಸುಶೀಲ ಅರಸ್, ನೂಪುರ ಕಲಾವಿದರು ಟ್ರಸ್ಟ್ ಕಲಾ ನಿರ್ದೇಶಕ ಪ್ರೊ. ಕೆ. ರಾಮಮೂರ್ತಿರಾವ್, ಗುರುವಂದನೆ : ಗುರು ಡಾ. ವಸುಂಧರಾ ದೊರೆಸ್ವಾಮಿ, ಸ್ಥಳ: ಗಾನಭಾರತಿ ರಮಾಗೋವಿಂದ ಕಲಾವೇದಿಕೆ, ಕುವೆಂಪುನಗರ, ಸಂಜೆ 5.30 ರಿಂದ.

■ **ಶ್ರೀ ಸೀತಾರಾಮ ದೇವಾಲಯ:** ಶ್ರೀ ರಾಮನವಮಿ, ನೃತ್ಯತಿ ಕಲಾಶಾಲೆ ಮೈಸೂರು ಅವರಿಂದ ಭರತನಾಟ್ಯ ಪ್ರಸ್ತುತಿ, ರಾಮಕೃಷ್ಣನಗರದ ಸವಿಗಾನ ಸಂಗೀತ ಶಾಲೆ ಅವರಿಂದ ದೇವರನಾಮ, ಸ್ಥಳ: ಶ್ರೀ ಸೀತಾರಾಮ ದೇವಾಲಯ, ಸಿದ್ಧಾರ್ಥನಗರ, ಸಂಜೆ 6 ರಿಂದ.

■ **ಶ್ರೀ ರಾಮಾಭ್ಯುದಯ ಮಹಾಸಭಾ:** ಶ್ರೀ ರಾಮೋತ್ಸವ, ವಿದ್ವಾನ್ ವಿಜಯ್ ಶಿವ ಮತ್ತು ವಿದ್ವಾನ್ ಪ್ರಭಾತ್ ಗೋಕಲೆ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ರಾಮಚಂದ್ರನ್–ಪಿಟೀಲು, ವಿದ್ವಾನ್ ಎನ್.ಸಿ. ಭಾರದ್ವಾಜ್–ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜಂ–ಘಟಂ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30ಕ್ಕೆ.

■ **ಶ್ರೀರಾಮ ಸೇವಾ ಮಂಡಲಿ:** ಶ್ರೀ ರಾಮೋತ್ಸವ, ವಿದ್ವಾನ್ ಅಮಿತ್ ನಾಡಿಗ್ ಮತ್ತು ವೃಂದದವರಿಂದ ವೇಣುವಾದನ, ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.

■ **ಶ್ರೀರಾಮ ಮಂದಿರ :** ಶ್ರೀ ರಾಮೋತ್ಸವ, ಬೆಳಗ್ಗೆ 9ಕ್ಕೆ ಬೃಹಸ್ಪತಿ ಗ್ರಹ ಹೋಮ, ಸಂಜೆ 6.30ಕ್ಕೆ ವಿದ್ವಾನ್ ಡಾ. ಹೆಚ್.ಎಸ್. ತಾಂಡವಮೂರ್ತಿ ಮತ್ತು ಶಿಷ್ಯ ವೃಂದದವರಿಂದ ಪಂಚ ಪಿಟೀಲು ವಾದನ, ಸ್ಥಳ: ಶ್ರೀ ರಾಮಮಂದಿರ, ಜಯನಗರ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಸೇವಾಯಾನ ಟ್ರಸ್ಟ್ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಸೇವಾಯಾನ ಸಂಸ್ಥೆ ಆವರಣ, ವಿಜಯನಗರ 4ನೇ ಹಂತ, ಸಂಜೆ 4 ರಿಂದ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ :** 55ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ, ಮುಖ್ಯ ಅತಿಥಿಗಳು : ಶ್ರೀ ಕೃಷ್ಣಗಾನ ಸಭಾ ಅಧ್ಯಕ್ಷ ಶ್ರೀಧರರಾಜೇ ಅರಸ್, ಸಮಾಜ ಸೇವಕ ಡಾ. ಕೆ ರಘುರಾಮ್ ವಾಜಪೇಯಿ ಸಂಗೀತ ಶಾಸ್ತ್ರಜ್ಞರಾದ ವಿದ್ವಾನ್ ವಿ ನಂಜುಂಡಸ್ವಾಮಿ, ಪ್ರಾಧ್ಯಾಪಕರಾದ ಹೆಚ್.ಎಸ್.ಉಮಾದೇವಿ, ಡಾ.ವಿ ರಂಗನಾಥ್, ಶ್ರೀಮತಿ ನಂದಿನಿ, ಮೈಸೂರು ರಂಗನಾಥ್, ಬೆಂಗಳೂರಿನ ವಿದುಷಿ ಭಾನುಪ್ರಿಯ ರಾಕೇಶ್, ವಿದುಷಿ ಶೀಲ ಚಂದ್ರಶೇಖರ್, ವಿದುಷಿ ಅಪರ್ಣ ವಿನೋದ್ ಮೆನನ್, ಮೈಸೂರಿನ ಕಲಾರ್ಪಣಾ ಶಿಷ್ಯ ನೃತ್ಯ ತಂಡಗಳಿಂದ ಭರತನಾಟ್ಯ ನೃತ್ಯ ಕಾರ್ಯಕ್ರಮ, ಸ್ಥಳ: ಕಲೆಮನೆ ಸಭಾಂಗಣ, ಸಂಜೆ 4 ರಿಂದ.

■ **ಗಂಧರ್ವ ಗಾನ ಕಲಾವೃಂದ :** ಕನ್ನಡ ಮತ್ತು ಹಿಂದಿ ಚಿತ್ರಗೀತೆಗಳ ಕರೋಕೆ ಗಾಯನ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಪದ್ಮಪಾಣಿ ಲಲಿತಕಲಾ ಅಕಾಡೆಮಿ :** ಗೋವಿಂದಸ್ವಾಮಿ ಗುಂಡಾಪುರ ಅವರ ಗುಡಿಸಲ ಜ್ಯೋತಿ ಪುಸ್ತಕ ಲೋಕಾರ್ಪಣೆ ಸಮಾರಂಭ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪುಸ್ತಕ ಬಿಡುಗಡೆ : ಹಿರಿಯ ಸಾಹಿತಿ ಡಾ. ಅರವಿಂದ ಮಾಲಗತ್ತಿ, ಉಪಸ್ಥಿತರು : ಪ್ರಗತಿಪರ ಚಿಂತಕ ಬಸವರಾಜು ದೇವನೂರು, ಸಾಹಿತಿ ಶಂಕನಪುರ ಮಹದೇವ, ಗೋವಿಂದಸ್ವಾಮಿ ಗುಂಡಾಪುರ, ಸ್ಥಳ: ಬಿ.ವಿ. ಕಾರಂತ ರಂಗಚಾವಡಿ, ರಂಗಾಯಣ ಆವರಣ, ಸಂಜೆ 5.30ಕ್ಕೆ.

■ **ಶ್ರೀ ಮಹಾವೀರ ಸೇವಾ ಸಂಸ್ಥಾನ್ :** 1008 ಭಗವಾನ್ ಶ್ರೀ ಮಹಾವೀರ ತೀರ್ಥಂಕರರ ಜಯಂತಿ ಮಹೋತ್ಸವ, ಶ್ರೀ ಮಹಾವೀರ ಅಹಿಂಸಾ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಶ್ರೀ ಸಿದ್ಧಾಂತಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಪ್ರಶಸ್ತಿ ಪುರಸ್ಕೃತರು : ಎಂ.ಎಂ. ನಿಖಿಲೇಶ್, ಅಧ್ಯಕ್ಷತೆ : ಶ್ರೀ ದಿಗಂಬರ ಜೈನ ಸಮಾಜದ ಅಧ್ಯಕ್ಷ ಎಂ.ಆರ್. ಸುನೀಲ್ ಕುಮಾರ್, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕ ಎಲ್. ನಾಗೇಂದ್ರ, ಶ್ರೀಮತಿ ಪದ್ಮಧನ್ಯಕುಮಾರ್, ಎಂ.ಎ. ಸುಧೀರ್ ಕುಮಾರ್, ಸ್ಥಳ: ಎಂ.ಎಲ್. ವರ್ಧಮಾನಯ್ಯ ಸ್ಮಾರಕ ಭವನ, ಚಂದ್ರಗುಪ್ತ ರಸ್ತೆ, ಸಂಜೆ 7ಕ್ಕೆ.

ಕೆ.ಆರ್.ನಗರದಲ್ಲಿಂದು

■ **ಶ್ರೀರಾಮ ಸೇವಾ ಸಮಿತಿ ಕೆ.ಆರ್.ನಗರ:** ಶ್ರೀ ರಾಮೋತ್ಸವ, ವಿದ್ವಾನ್ ಎಸ್.ಆರ್. ಪ್ರಶಾಂತ್ ಮತ್ತು ವೃಂದದವರಿಂದ ಹಾಡುಗಾರಿಕೆ, ಸ್ಥಳ: ಶ್ರೀರಾಮ ಸೇವಾ ಸಮಿತಿ, ಕೆ.ಆರ್.ನಗರ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊಫೆಸರ್ ಸಿ.ನಾಗಣ್ಣ, ನಿರ್ಮಾಣ–ಜಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ. ಸಿ.ಎ. ಶ್ರೀಧರ್–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು, ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಸಂಪದಾ. ಜೆ. ಆಶೀಹಾಳ್, 2.40 ಕನ್ನಡ ಚಿತ್ರಗೀತೆಗಳು, 4.00 ಹಳ್ಳಿಹಾಡು, 4.30 ರಸಮಂಜರಿ, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಕಬ್ಬು ಹಾಗೂ ಭತ್ತದ ಬೇಸಾಯ ಮತ್ತು ಮಾರಾಟ ಕುರಿತು ಸಂವಾದ. ಭಾಗವಹಿಸುತ್ತಾರೆ–ಮದ್ದೂರು ತಾಲೂಕು ಕೊಪ್ಪ ಗ್ರಾಮದ ವಿಶ್ವೇಶ್ವರಯ್ಯ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷ ಎನ್.ಟಿ. ಪುಟ್ಟಸ್ವಾಮಿ ಹಾಗೂ ನಿರ್ದೇಶಕರಾದ ಹೆಚ್. ಎನ್. ರಮೇಶ್, ಪ್ರಸ್ತುತಿ: ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ– ಮಂಡ್ಯ ಜಿಲ್ಲೆ ಚಿನಕುರಳಿಯ ಎಸ್.ಟಿ.ಜಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ (ಭಾಗ – 1), 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಎನ್. ವಿಜಯಶಿವ – ಹಾಡುಗಾರಿಕೆ, 10.00 ನಾಟಕ, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

ಸೇಠ್ ಮೋಹನ್‌ದಾಸ್ ತುಳಸಿದಾಸ್ ಆಸ್ಪತ್ರೆಗೆ ಗುಣಾಂಬ ಮೆಟರ್ನಿಟಿ ಅಂಡ್ ಚೈಲ್ಡ್ ವೆಲ್ಫೇರ್ ಟ್ರಸ್ಟ್‌ನಿಂದ

ರೇಡಿಯೆಂಟ್ ವಾರ್ಮರ್ ಕೊಡುಗೆ

ಮೈಸೂರು, ಏ.9(ಎಂಕೆ)– ಮೈಸೂರಿನ ಸೇಠ್ ಮೋಹನ್‌ದಾಸ್ ತುಳಸಿದಾಸ್ ತಾಯಿ ಮತ್ತು ಮಕ್ಕಳ ಆಸ್ಪತ್ರೆ(ಎಸ್‌ಎಂಟಿ)ಯ ನವಜಾತ ಶಿಶುಗಳ ತೀವ್ರ ನಿಗಾ ಘಟಕ(ಎನ್‌ಐಸಿಯು)ಕ್ಕೆ ಗುಣಾಂಬ ಮೆಟರ್ನಿಟಿ ಅಂಡ್ ಚೈಲ್ಡ್ ವೆಲ್ಫೇರ್ ಟ್ರಸ್ಟ್ ವತಿಯಿಂದ ಮಾನಿಟರ್ ಸಹಿತ 5 ರೇಡಿಯೆಂಟ್ ವಾರ್ಮರ್‌ಗಳನ್ನು ಹಸ್ತಾಂತರಿಸಲಾಯಿತು.

ಆಸ್ಪತ್ರೆಗೆ ಬುಧವಾರ ಭೇಟಿ ನೀಡಿದ ಗುಣಾಂಬ ಮೆಟರ್ನಿಟಿ ಅಂಡ್ ಚೈಲ್ಡ್ ವೆಲ್ಫೇರ್ ಟ್ರಸ್ಟ್ ಅಧ್ಯಕ್ಷರಾದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ನವಜಾತ ಶಿಶುಗಳ ಆರೈಕೆಗಾಗಿ ಬಳಸುವ ರೇಡಿಯೆಂಟ್ ವಾರ್ಮರ್(ಬೆಚ್ಚಗಿರುವ ಉಪಕರಣಗಳು)ಗಳನ್ನು ಹಸ್ತಾಂತರಿಸಿದರು.

ಬಳಿಕ ಮಾತನಾಡಿದ ಅವರು, ಮಕ್ಕಳು ಹುಟ್ಟಿದಾಗ ಎದುರಾಗುವ ಸಮಸ್ಯೆಗಳ ನಿವಾರಣೆಗೆ ರೇಡಿಯಂಟ್ ವಾರ್ಮರ್‌ಗಳ ಅಗತ್ಯವಿದ್ದು, ಆಸ್ಪತ್ರೆಗೆ ಅಗತ್ಯ ಇರುವಷ್ಟು ಬೇಬಿ ವಾರ್ಮರ್‌ಗಳನ್ನು ಟ್ರಸ್ಟ್ ವತಿಯಿಂದ ನೀಡಿದ್ದೇವೆ. ಮುಂದಿನ ದಿನಗಳಲ್ಲಿಯೂ ತಾಯಿ ಮತ್ತು ಮಕ್ಕಳ ಚಿಕಿತ್ಸೆಗೆ ಏನಾದರೂ ಸವಲತ್ತುಗಳು ಬೇಕು ಎಂಬುದನ್ನು ತಿಳಿಸಿದರೆ, ಟ್ರಸ್ಟ್ ವತಿಯಿಂದ ನೀಡಲಾಗುವುದು. ಆಸ್ಪತ್ರೆಗೆ ಬರುವ ಎಲ್ಲಾ ತಾಯಿ ಮತ್ತು ಮಕ್ಕಳಿಗೆ ಒಳ್ಳೆಯ ಚಿಕಿತ್ಸೆ ಲಭಿಸಬೇಕು ಎಂಬುದು ಟ್ರಸ್ಟ್ ಉದ್ದೇಶ ಎಂದರು.

ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಮಾತಾಡಿ, ಗುಣಾಂಬ ಮೆಟರ್ನಿಟಿ ಅಂಡ್ ಚೈಲ್ಡ್ ವೆಲ್ಫೇರ್ ಟ್ರಸ್ಟ್ ವತಿಯಿಂದ ನೀಡುತ್ತಿರುವ ಸಹಕಾರಕ್ಕೆ ಮೈಸೂರು ಜಿಲ್ಲಾಡಳಿತ ಧನ್ಯವಾದ ತಿಳಿಸಲಿದೆ. ಕಳೆದ ವಾರವಷ್ಟೇ ಚೆಲುವಾಂಬ ಆಸ್ಪತ್ರೆಗೆ 10 ಬೇಬಿ ವಾರ್ಮರ್‌ಗಳನ್ನು ಕೊಡುಗೆಯಾಗಿ ನೀಡಿದ್ದರು. ಅದೇ ರೀತಿ ತಮ್ಮ ಸೇವಾ ಕಾರ್ಯವನ್ನು ಮುಂದುವರೆಸಿದ್ದಾರೆ. ನಮ್ಮ ಆಸ್ಪತ್ರೆಗಳಲ್ಲಿಯೂ ಸಾಕಷ್ಟು ಬೇಡಿಕೆ ಇದ್ದು, ನವಜಾತ ಶಿಶುಗಳಿಗೆ ಸಾಕಷ್ಟು ಅನುಕೂಲವಾಗಲಿದೆ. ಮೈಸೂರು ಸಂಸ್ಥಾನವು ಆರೋಗ್ಯ ಕ್ಷೇತ್ರ ಮಾತ್ರವಲ್ಲದೆ ಎಲ್ಲಾ ಕ್ಷೇತ್ರಕ್ಕೂ ಅಪಾರ ಕೊಡುಗೆ ನೀಡಿದ್ದು, ರಾಜವಂಶಸ್ಥರು ಇಂದಿಗೂ ತಮ್ಮ ಸೇವಾ ಕಾರ್ಯವನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ ಎಂದು ಅಭಿನಂದಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಮಾತನಾಡಿ, ಆರೋಗ್ಯ ಇಲಾಖೆಯು ಸಮುದಾಯ ಮಟ್ಟದಲ್ಲಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನದ ಜೊತೆಗೆ ಕ್ಲಿನಿಕಲ್ ಸೇವೆಯನ್ನು ನೀಡುತ್ತಿದೆ. 35 ಲಕ್ಷಕ್ಕೂ ಅಧಿಕ ಜನಸಂಖ್ಯೆಯುಳ್ಳ ಮೈಸೂರು ಜಿಲ್ಲೆಯ ಮನೆ ಮನೆಗಳಿಗೆ ಭೇಟಿ ನೀಡಿ ರಾಷ್ಟ್ರೀಯ ಆರೋಗ್ಯ ಕುರಿತು ಅರಿವು ಮತ್ತು ಜಾಗೃತಿ ಮೂಡಿಸಲಾಗುತ್ತಿದೆ. ಅಲ್ಲದೆ ಜಿಲ್ಲೆಯಲ್ಲಿರುವ 628 ಸರ್ಕಾರಿ (ಎಲ್ಲಾ ಬಗೆಯ ಆರೋಗ್ಯ ಕೇಂದ್ರಗಳು) ಆರೋಗ್ಯ ಕೇಂದ್ರಗಳಿದ್ದು, ವೈದ್ಯಕೀಯ ಸೇವೆಯನ್ನು ನೀಡಲಾಗುತ್ತಿದೆ ಎಂದು ವಿವರಿಸಿದರು.

ಮಕ್ಕಳ ಮರಣ ಪ್ರಮಾಣವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಬೇಬಿ ವಾರ್ಮರ್‌ಗಳು ಅತ್ಯಂತ ಅವಶ್ಯವಿದ್ದು, ಈ ನಿಟ್ಟಿನಲ್ಲಿ ಎಸ್‌ಎಂಟಿ ಆಸ್ಪತ್ರೆಗೆ ಗುಣಾಂಬ ಟ್ರಸ್ಟ್ ವತಿಯಿಂದ 5 ಬೇಬಿ ವಾರ್ಮರ್‌ಗಳ ನೀಡಿರುವುದಕ್ಕೆ ಧನ್ಯವಾದ ತಿಳಿಸುತ್ತೇವೆ. ಆರಂಭದಲ್ಲಿ 20–25 ಹೆರಿಗೆಗಳಿಂದ ಆರಂಭವಾದ ಎಸ್‌ಎಂಟಿ ಆಸ್ಪತ್ರೆಯಲ್ಲಿ ಈಗ ವರ್ಷಕ್ಕೆ ಸರಾಸರಿ 140–150 ಹೆರಿಗೆಗಳನ್ನು ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಗುಣಮಟ್ಟದ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಎಸ್‌ಎಂಟಿ ಆಸ್ಪತ್ರೆ ಕಾರ್ಯ ನಿರ್ವಹಿಸಲಿದೆ ಎಂದು ಭರವಸೆ ನೀಡಿದರು.

ಗುಣಾಂಬ ಮೆಟರ್ನಿಟಿ ಅಂಡ್ ಚೈಲ್ಡ್ ವೆಲ್ಫೇರ್ ಟ್ರಸ್ಟ್ ಸದಸ್ಯರಾದ ಶ್ರೀಮತಿ ತೇಜಸ್ವಿ, ಅಜಿತ್ ಕುಮಾರ್ ರಾಜೇ ಅರಸ್, ಅನಂತ ವರ್ಧನ್, ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಅಧಿಕಾರಿ ಡಾ.ಮೊಹಮ್ಮದ್ ಸಿರಾಜ್ ಅಹಮದ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನಾಗರಾಜು, ಜಿಲ್ಲಾ ಕಾಲರಾ ನಿಯಂತ್ರಾಣಧಿಕಾರಿ ಡಾ.ಪುಟ್ಟತಾಯಮ್ಮ, ಎಸ್‌ಎಂಟಿ ಆಡಳಿತಾಧಿಕಾರಿ ಡಾ.ಅನುರಾಧ, ಸರ್ವೇಕ್ಷಣಾ ಘಟಕದ ಡಾ.ಅರ್ಚನ, ಶುಶ್ರೂಷಕಿ ಅಧಿಕಾರಿ ಅಶ್ವಿನಿ ಮತ್ತಿತರರಿದ್ದರು.

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹಸ್ತಾಂತರ



ಮೈಸೂರಿನ ಸೇಠ್ ಮೋಹನ್‌ದಾಸ್ ತುಳಸಿದಾಸ್ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಗುಣಾಂಬ ಮೆಟರ್ನಿಟಿ ಅಂಡ್ ಚೈಲ್ಡ್ ವೆಲ್ಫೇರ್ ಟ್ರಸ್ಟ್ ವತಿಯಿಂದ ಮಾನಿಟರ್ ಸಹಿತ 5 ರೇಡಿಯೆಂಟ್ ವಾರ್ಮರ್‌ಗಳನ್ನು ಟ್ರಸ್ಟ್ ಅಧ್ಯಕ್ಷರಾದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹಸ್ತಾಂತರಿಸಿದರು. ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಮತ್ತಿತರರಿದ್ದರು.

ಶ್ರೀ ರಾಮನವಮಿ ಪ್ರಯುಕ್ತ ಪಾನಕ, ಮಜ್ಜಿಗೆ ವಿತರಣೆ



ಮೈಸೂರಿನ ಸದ್ವಿದ್ಯಾ ವೃತ್ತದಲ್ಲಿರುವ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ರಾಮನವಮಿ ಪ್ರಯುಕ್ತ ವಿಶೇಷ ಪೂಜೆ ಮತ್ತು ಪಾನಕ, ಮಜ್ಜಿಗೆ ಹಾಗೂ ಕೋಸಂಬರಿ ವಿತರಿಸಲಾಯಿತು. ಈ ವೇಳೆ ಮಾಜಿ ಸಂಸದ ಪ್ರತಾಪ್ ಸಿಂಹ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ರಾ.ಪರಮೇಶಗೌಡ, ಶ್ರೀನಿವಾಸ್, ಕಿರಣ್, ಸಂದೇಶ್, ವಿನೋದ್, ಸಂಜಯ್, ಶ್ರವಣ್ ಮಾಲಿ, ಪ್ರಮೋದ್ ಗೌಡ, ವಿಜಯ್, ಶ್ರೀಲಕ್ಷ್ಮಿ, ಸುರೇಂದ್ರ ಇತರರು ಉಪಸ್ಥಿತರಿದ್ದರು.

ಏ.16, 17ರಂದು ಮೈಸೂರಿನ 38 ಕೇಂದ್ರಗಳಲ್ಲಿ ಯುಜಿ–ಸಿಇಟಿ

ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ

ಮೈಸೂರು,ಏ.9(ಪಿಎಂ)– ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಏ.16 ಮತ್ತು 17ರಂದು ಮೈಸೂರು ನಗರದ 38 ಕೇಂದ್ರಗಳಲ್ಲಿ 2025ನೇ ಸಾಲಿನ ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ (ಯುಜಿ–ಸಿಇಟಿ) ನಡೆಯಲಿದ್ದು, ಸದರಿ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀ. ವ್ಯಾಪ್ತಿಯಲ್ಲಿ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಆದೇಶ ಹೊರಡಿಸಿದ್ದಾರೆ.

ಪರೀಕ್ಷೆಗಳನ್ನು ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಹಾಗೂ ಅಹಿತಕರ ಘಟನೆಗಳು ನಡಯದಂತೆ ತಡೆಯಲು ನಿಷೇಧಾಜ್ಞೆ ಜಾರಿಗೊಳಿಸ ಲಾಗಿದೆ. ಈ ಪ್ರದೇಶಗಳಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು. ಜೊತೆಗೆ ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯ ಬಾರದು. ಅಲ್ಲದೆ, ಪರೀಕ್ಷಾ ಕೇಂದ್ರಗಳ ಹತ್ತಿರದಲ್ಲಿರುವ ಎಲ್ಲಾ ಜೆರಾಕ್ಸ್, ಬ್ರೌಸಿಂಗ್, ಸೈಬರ್ ಕೇಂದ್ರಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚಬೇಕೆಂದು ಆದೇಶದಲ್ಲಿ ತಿಳಿಸಲಾಗಿದೆ.

'ಹತ್ಯೆ'ಗೀಡಾದ ಪತ್ನಿ ಜೀವಂತವಾಗಿರುವ ಪ್ರಕರಣ

ನಾಯಿ–ನರಿಗಳು ತಿಂದ ಶವದ ಮೇಲಿನ ಬಟ್ಟೆ ನಾಜೂಕಾಗಿರಲು ಸಾಧ್ಯವೇ; ಶವ ಸಿಕ್ಕ ಭೂಮಿ ಮಾಲೀಕನಿಂದ ಖಾಲಿ ಪೇಪರ್‌ಗೆ ಸಹಿ!

- ಪೊಲೀಸರ ನಾನಾ ಎಡವಟ್ಟುಗಳ ಕೋರ್ಟ್ ಗಮನಕ್ಕೆ ತಂದ ವಕೀಲ ಪಾಂಡು ಪೂಜಾರಿ
- ಎಫ್‌ಎಸ್‌ಎಲ್‌ಗೆ ದೇಹದ ಅಂಗಾಂಗ ಕಳಿಸುವಾಗ ನಮೂದಿಸಿದ್ದು 'ಅಣ್ಣೇಗೌಡ' ಹೆಸರು!
- ಕೋರ್ಟ್‌ಗೆ ತಪ್ಪು ಮಾಹಿತಿ ನೀಡಿದ ಪೊಲೀಸರ ವಿರುದ್ಧ FIRಗೆ ಸುರೇಶ್ ಪರ ವಕೀಲರ ಮನವಿ



ಸುರೇಶ್ ಮತ್ತು ಮಲ್ಲಿಗೆ ದಂಪತಿ.

ಮೈಸೂರು, ಏ.9– ಪತ್ನಿಯನ್ನು ಕೊಲೆ ಮಾಡಿದ ಆರೋಪದ ಮೇರೆಗೆ ಎರಡು ವರ್ಷ ಜೈಲು ವಾಸ ಅನುಭವಿಸಿದ್ದ ಕೊಡಗಿನ ಅಮಾಯಕ ಸುರೇಶ್ ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ಇಲ್ಲಿನ ನ್ಯಾಯಾಲಯದಲ್ಲಿ ಅಚ್ಚರಿಯ ಹಾಗೂ ಪೊಲೀಸರು ಮಾಡಿರುವ ಎಡವಟ್ಟು ಬಯಲಾಗಿದೆ.

ಅಲ್ಲದೇ ಸುರೇಶ್ ಪರ ವಕೀಲ ಪಾಂಡು ಪೂಜಾರಿ ಅವರು, ತಮ್ಮ ಕಕ್ಷಿದಾರನ ವಿರುದ್ಧ ನ್ಯಾಯಾಲಯಕ್ಕೆ ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿಯೊಂದಿಗೆ ಆರೋಪ ಪಟ್ಟಿ ಸಲ್ಲಿಸಿರುವ ಪೊಲೀಸ್ ಅಧಿಕಾರಿಗಳ ವಿರುದ್ಧ ಐಪಿಸಿ–211 (ಬಿಎನ್‌ಎಸ್–248ಬಿ) ಅಡಿ ಪ್ರಕರಣ ದಾಖಲಿಸಬೇಕೆಂದು ನ್ಯಾಯಾಧೀಶರಿಗೆ ಮನವಿ ಸಲ್ಲಿಸಿದರು.



ಪಾಂಡು ಪೂಜಾರಿ

ಆಗಿದ್ದಿಷ್ಟು: ಈ ಪ್ರಕರಣದ ವಿಚಾರಣೆಯು ನ್ಯಾಯಾಲಯದಲ್ಲಿ ಏ.17ಕ್ಕೆ ಬರಬೇಕಿತ್ತು. ಆದರೆ ಇಂದು ವಕೀಲ ಪಾಂಡು ಪೂಜಾರಿ ಅವರು ಹಠಾತ್ತನೆ ನ್ಯಾಯಾಲಯಕ್ಕೆ ಹಾಜರಾಗಿ ಅಡ್ವಾನ್ಸ್ ಅರ್ಜಿ ಸಲ್ಲಿಸಿ, ಈ ಪ್ರಕರಣದಲ್ಲಿ ಬಲಿ ಪಶು ಆಗಿರುವ ತಮ್ಮ ಕಕ್ಷಿದಾರ ಸುರೇಶ್‌ನ ಪತ್ನಿ ಮಲ್ಲಿಗೆಯ ಹೇಳಿಕೆಯನ್ನು ಸಾಕ್ಷ್ಯವನ್ನಾಗಿ ದಾಖಲಿಸಬೇಕು ಎಂದು ಮನವಿ ಮಾಡಿದರು.

ವಿಚಾರಣೆಯು ಏ.17ಕ್ಕೆ ಇರುವುದರಿಂದ ಹಾಗೂ ಪ್ರಕರಣದ ಬಗ್ಗೆ ಅಂದು ಮೈಸೂರು ಎಸ್ಪಿಯವರು ನ್ಯಾಯಾಲಯಕ್ಕೆ ವರದಿ ಸಲ್ಲಿಸಲಿದ್ದು, ಆನಂತರ ಬೇಕಾದರೂ ಮಲ್ಲಿಗೆಯ ಸಾಕ್ಷ್ಯ ದಾಖಲಿಸಬಹುದಲ್ಲಾ ಎಂದು ನ್ಯಾಯಾಧೀಶರು ಪ್ರಶ್ನಿಸಿದಾಗ ವಕೀಲರು, ಆಕೆಯನ್ನು ಇಂದಿನವರೆಗೆ ವಿಜಯನಗರದಲ್ಲಿರುವ ಮಹಿಳಾ ಸಾಂತ್ವನ ಕ್ಷೇತ್ರದಲ್ಲಿ ಇರಿಸಲಾಗಿದೆ. ಅಲ್ಲಿಂದ ಆಕೆ ಮನೆಗೆ ಹೋಗಿಬಿಟ್ಟರೆ ಕರೆತಂದು ಸಾಕ್ಷ್ಯ ದಾಖಲಿಸುವುದು ಸ್ವಲ್ಪ ಕಷ್ಟವಾಗಬಹುದು. ಅಲ್ಲದೇ ಪ್ರಮುಖವಾದ ಕೆಲ ವಿಚಾರಗಳನ್ನು ನ್ಯಾಯಾಲಯದ ಗಮನಕ್ಕೆ ತರಬೇಕಾಗಿದೆ ಎಂದು ಮನವರಿಕೆ ಮಾಡಿದರು.

ನ್ಯಾಯಾಧೀಶರ ಆದೇಶದ ಮೇರೆಗೆ ಮಲ್ಲಿಗೆಯನ್ನು, ಬೈಲುಕುಪ್ಪೆ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ ಆಕೆ ಪತಿ ಮನೆಯಿಂದ ಎಲ್ಲಿಗೆ, ಯಾರೊಂದಿಗೆ ಹೋಗಿದ್ದಳು? ಇಷ್ಟು ದಿನ ಎಲ್ಲಿದ್ದಳು? ಸೇರಿದಂತೆ ಎಲ್ಲಾ ವಿವರಗಳನ್ನು ಕೇಳಿ ಸಾಕ್ಷ್ಯವನ್ನಾಗಿ ದಾಖಲು ಮಾಡಿಕೊಳ್ಳಲಾಯಿತು.

ನಂತರ ವಕೀಲ ಪಾಂಡು ಪೂಜಾರಿಯವರು, ಈ ಪ್ರಕರಣದಲ್ಲಿ ಪೊಲೀಸರು ವಶಪಡಿಸಿಕೊಂಡು ನ್ಯಾಯಾಲಯಕ್ಕೆ ನೀಡಿರುವ ಉಡುಪುಗಳ ಪ್ರದರ್ಶನವಾಗಬೇಕೆಂದು ಕೋರಿದರು. ಆ ವೇಳೆ ಸೀಲ್ ಮಾಡಿದ ಉಡುಪುಗಳನ್ನು ತೆಗೆದು ಮಲ್ಲಿಗೆಗೆ ತೋರಿಸಲಾಯಿತು. ಈ ಹಿಂದೆ ಉಡುಪುಗಳ ಫೋಟೋ ನೋಡಿ ಅವು ನನ್ನದಲ್ಲ ಎಂದು ತಿಳಿಸಿದ್ದ ಮಲ್ಲಿಗೆ, ಇಂದೂ ಕೂಡ ಅದನ್ನೇ ಪುನರುಚ್ಚರಿಸಿದರು.

ಯಾರೀ ಅಣ್ಣೇಗೌಡ!: ಮತ್ತೆ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ವೈದ್ಯರು ಸಂಗ್ರಹಿಸಿಕೊಟ್ಟಿದ್ದ ಮೃತೆಯ ದೇಹದ ಕೆಲವು ವಸ್ತುಗಳನ್ನು ಎಫ್‌ಎಸ್‌ಎಲ್‌ಗೆ ಕಳುಹಿಸುವ ವೇಳೆ ತ್ರಿನೇತ್ರ ಎಂಬ ಪೇದೆಗೆ ರಹದಾರಿ ನೀಡಲಾಗಿದೆ. ಈ ರಹದಾರಿಯಲ್ಲಿ ಯುಡಿಆರ್ ಸಂಖ್ಯೆ 33/2020ರ ಪ್ರಕರಣದಲ್ಲಿ ಅಣ್ಣೇಗೌಡರ ಬಾಬ್ತು ವಿಸರಾ ಮತ್ತು ದಾಖಲಾತಿಗಳನ್ನು ಎಫ್‌ಎಸ್‌ಎಲ್‌ಗೆ ಕೊಟ್ಟು ಸ್ವೀಕೃತಿ ಪಡೆದು ಬರುವಂತೆ ಅಧಿಕೃತವಾಗಿ ಸೂಚಿಸಲಾಗಿದೆ ಎಂದು ಹೇಳಿದ ವಕೀಲರು, ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯದಲ್ಲಿ ಮಾರ್ಕ್ ಮಾಡಿಸಿದರು.

ಖಾಲಿ ಕಾಗದಗಳಿಗೆ ಸಹಿ: ಈ ಪ್ರಕರಣದಲ್ಲಿ ಈ ಹಿಂದೆಯೇ ಸಾಕ್ಷ್ಯ ನುಡಿದಿದ್ದ ಶಾನುಭೋಗನಹಳ್ಳಿ ಗ್ರಾಮದ ರೈತ ಎಸ್.ಎಸ್.ನಟೇಶ್ ಅವರು, ತಾವು ತಮ್ಮ ಜಮೀನಿನಲ್ಲಿ ಯಾವುದೇ ಶವವನ್ನಾಗಲೀ, ಬೇರೇನನ್ನೂ ನೋಡಿಲ್ಲ. ಪೊಲೀಸರಿಗೆ ದೂರನ್ನೂ ಕೊಟ್ಟಿಲ್ಲ. ಪೊಲೀಸರೇ ತಮ್ಮ ಬಳಿ ಖಾಲಿ ಕಾಗದಗಳಿಗೆ ಸಹಿ ಮಾಡಿಸಿಕೊಂಡಿದ್ದರು ಎಂದು ನೀಡಿದ ಹೇಳಿಕೆಯನ್ನು ವಕೀಲರು ಉಲ್ಲೇಖಿಸಿದರು.

ಅಂತಿಮವಾಗಿ ಪ್ರಕರಣದಲ್ಲಿ ಪೊಲೀಸರು ಸಂಪೂರ್ಣವಾಗಿ ನ್ಯಾಯಾಲಯಕ್ಕೆ ಉದ್ದೇಶಪೂರ್ವಕವಾಗಿ ನನ್ನ ಕಕ್ಷಿದಾರನ ವಿರುದ್ಧ ತಪ್ಪು ಮಾಹಿತಿ ನೀಡಿ, ನ್ಯಾಯಾಲಯವನ್ನೇ ವಂಚಿಸಿದ್ದಾರೆ. ಕಾನೂನು ಪ್ರಕಾರ ಈ ಪ್ರಕರಣದ ತನಿಖೆ ನಡೆಸಿ, ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ ಎಲ್ಲಾ ಪೊಲೀಸರು ಐಪಿಸಿ–211 (ಬಿಎನ್‌ಎಸ್–248–ಬಿ) ಅಡಿ ಆರೋಪಿಗಳಾಗಿದ್ದು, ಅವರ ವಿರುದ್ಧ ಈ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಬೇಕೆಂದು ಮನವಿ ಮಾಡಿದರು.

ಈ ಎಲ್ಲಾ ವಿಚಾರಗಳ ಬಗ್ಗೆಯೂ ತಮ್ಮ ಆದೇಶದಲ್ಲಿ ಉಲ್ಲೇಖಿಸಲಾಗುತ್ತದೆ ಎಂದು ನ್ಯಾಯಾಧೀಶರು ಈ ಸಂದರ್ಭದಲ್ಲಿ ವಕೀಲ ಪಾಂಡು ಪೂಜಾರಿ ಅವರಿಗೆ ತಿಳಿಸಿದರು. ಕೊಡಗಿನ ಸುರೇಶ ಎಂಬಾತ ತನ್ನ ಪತ್ನಿಯನ್ನು ಕೊಲೆ ಮಾಡಿದ್ದಾನೆ ಎಂದು ಬೆಟ್ಟದಪುರ ಠಾಣೆ ಪೊಲೀಸರಿಂದ ಬಂಧಿಸಲ್ಪಟ್ಟು, 2 ವರ್ಷ ಕಾಲ ಜೈಲುವಾಸ ಅನುಭವಿಸಿ, ಜಾಮೀನಿನ ಮೇಲೆ ಹೊರಬಂದಿದ್ದಾನೆ. ಆದರೆ ಆತನ ಪತ್ನಿ ಮಲ್ಲಿಗೆ ಇತ್ತೀಚೆಗೆ ಮಡಿಕೇರಿಯ ಹೋಟೆಲ್‌ವೊಂದರಲ್ಲಿ ಪ್ರತ್ಯಕ್ಷವಾಗಿದ್ದು, ಆಕೆಯನ್ನು ಸುರೇಶ್‌ನ ಸ್ನೇಹಿತರು ಮಡಿಕೇರಿ ಟೌನ್ ಠಾಣೆ ಪೊಲೀಸರಿಗೆ ಒಪ್ಪಿಸಿದ್ದರು. ನಂತರ ವಕೀಲ ಪಾಂಡು ಪೂಜಾರಿ ಕೋರಿಕೆ ಮೇರೆಗೆ ಅವರ ಗುರುಗಳಾದ ರಾಘವೇಂದ್ರ ಅವರ ಮೂಲಕ ನ್ಯಾಯಾಲಯಕ್ಕೆ ಅಡ್ವಾನ್ಸ್ ಅರ್ಜಿ ಸಲ್ಲಿಸಿದ ಪರಿಣಾಮ ನ್ಯಾಯಾಧೀಶರ ಆದೇಶದ ಮೇರೆಗೆ ಬೆಟ್ಟದಪುರ ಪೊಲೀಸರು ಮಲ್ಲಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಈ ವೇಳೆ ನ್ಯಾಯಾಧೀಶರು ಈ ಪ್ರಕರಣದ ತನಿಖೆಯಲ್ಲಿ ಆಗಿರುವ ಅನಾಹುತದ ಬಗ್ಗೆ ತನಿಖೆ ನಡೆಸಿ ಏ.17ರೊಳಗೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕೆಂದು ಮೈಸೂರು ಜಿಲ್ಲಾ ಎಸ್ಪಿ ವಿಷ್ಣುವರ್ಧನ್ ಅವರಿಗೆ ಆದೇಶಿಸಿದ್ದನ್ನು ಸ್ಮರಿಸಬಹುದು.

ಅಸ್ಥಿಪಂಜರದಲ್ಲಿ ನಾಜೂಕಾದ ವಸ್ತ್ರ

ಇದಾಗುತ್ತಿದ್ದಂತೆಯೇ ವಕೀಲ ಪಾಂಡು ಪೂಜಾರಿ ಅವರು ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಯುಡಿಆರ್ ಸಂಖ್ಯೆ 36/2020ಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಪೊಲೀಸರು ಸಲ್ಲಿಸಿದ್ದ ವರದಿಯನ್ನು ಉಲ್ಲೇಖಿಸಿ, ಸದರಿ ವರದಿಯಲ್ಲಿ ಶವವು ಕೊಳೆತು ದುರ್ನಾತ ಬರುತ್ತಿದ್ದು, ಶವದ ಮಾಂಸ ಖಂಡಗಳನ್ನೆಲ್ಲಾ ನಾಯಿ, ಇತರ ಕಾಡುಪ್ರಾಣಿಗಳು ತಿಂದಿದ್ದು, ಸೊಂಟ ಮತ್ತು ಬೆನ್ನಿನ ಭಾಗದಲ್ಲಿ ಮಾತ್ರ ಸ್ವಲ್ಪ ಮಾಂಸ ಖಂಡವಿದ್ದು, ಮೃತೆಯ ತಲೆಬುರುಡೆಯೊಂದಿಗೆ ಮೂಳೆಗಳು ಪೊದೆಯಲ್ಲಿ ಬಿದ್ದಿರುವುದು ಕಂಡು ಬಂತು ಎಂಬುದನ್ನು ಓದಿ ಹೇಳಿದರು. ತಮ್ಮ ವಾದ ಮುಂದುವರೆಸಿದ ಅವರು, ಈಗ ನಾವು ನೋಡಿದ ಮೃತೆಯ ಎಲ್ಲಾ ಉಡುಪುಗಳಿಗೂ ಯಾವುದೇ ರೀತಿಯ ಹಾನಿಯಾಗಿಲ್ಲ. ಅಂದರೆ ನಾಯಿ–ನರಿ ಹಾಗೂ ಕಾಡುಪ್ರಾಣಿಗಳು ಉಡುಪನ್ನು ಸುರಕ್ಷಿತವಾಗಿ ಕಳಚಿ ನಂತರ ಶವವನ್ನು ಭಕ್ಷಿಸಿದೆಯೇ ಎಂದು ಪ್ರಶ್ನಿಸಿದರಲ್ಲದೇ, ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಈ ಯಾವುದೇ ಬಟ್ಟೆಗಳು ಮೃತೆಯ ಬಟ್ಟೆಗಳಲ್ಲ. ಬದಲಾಗಿ ಪೊಲೀಸರು ತಪ್ಪಾದ ವಸ್ತುಗಳನ್ನು ಹಾಜರುಪಡಿಸಿ ನ್ಯಾಯಾಲಯವನ್ನು ವಂಚಿಸಿದ್ದಾರೆ ಎಂದರು.

ದ್ವಿತೀಯ ಪಿಯುಸಿಯಲ್ಲಿ ಚಿರಾಗ್‌ಗೆ 550 ಅಂಕ

ಮಂಡ್ಯ, ಏ.9– ಚಿನಕುರಳಿಯ ಎಸ್‌ಜಿಟಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ಕೆ.ಚಿರಾಗ್ ದ್ವಿತೀಯ ಪಿಯುಸಿಯಲ್ಲಿ 550 ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ಚನ್ನಪಟ್ಟಣ ಪೊಲೀಸ್ ತರಬೇತಿ ಶಾಲೆಯ ಡಿವೈಎಸ್‌ಪಿ ಸಿ.ಕಿರಣ್ ಕುಮಾರ್ ಮತ್ತು ಗೀತಾ ದಂಪತಿ ಪುತ್ರ



ಅವಳಿ ಸಹೋದರಿಯರ ಸಾಧನೆ

ಮೈಸೂರು, ಏ.9(ಎಂಕೆ)– ಪ್ರಸಕ್ತ ಸಾಲಿನ ದ್ವಿತೀಯ ಪಿಯು ವಿಜ್ಞಾನ ವಿಭಾಗದ ಅವಳಿ ಸಹೋದರಿಯರಾದ ರೋಹಿಣಿ 553(ಶೇ.92.16), ರೇಣುಕ 493(ಶೇ.82.16) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಮೈಸೂರಿನ ಅಗ್ರಹಾರ ನಿವಾಸಿ ಟಿ.ಕೃಷ್ಣ ಮತ್ತು ರೇಷ್ಮೆ ಇಲಾಖೆ ಮ್ಯಾನೇಜರ್ ಶ್ರೀಮತಿ ಮಣಿ ದಂಪತಿಯ ಅವಳಿ ಪುತ್ರಿರಾದ ಇಬ್ಬರು, ಬೆಂಗಳೂರಿನ ಕೆ.ಕೆ ಪಿಯು ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.



ರೋಹಿಣಿ



ರೇಣುಕ

ಯುವರಾಜ ಕಾಲೇಜಿನಲ್ಲಿ ಪ್ರವೇಶ ಆರಂಭ

ಮೈಸೂರು: ಮೈಸೂರಿನ ಯುವರಾಜ ಕಾಲೇಜಿನಲ್ಲಿ 2025–26ನೇ ಸಾಲಿನ ಬಿಎಸ್ಸಿ, ಬಿಸಿಎಗೆ ಪ್ರವೇಶಾತಿ ಆರಂಭವಾಗಿದೆ. ಏ.15 ರಿಂದ ನೇರವಾಗಿ ಪ್ರವೇಶ ನೀಡಲಾಗುವುದು. ಪಿಯುಸಿಯಲ್ಲಿ ಶೇ.75 ಅಂಕ ಪಡೆದವರಿಗೆ ಪ್ರಥಮ ಬಿಎಸ್ಸಿಗೂ ಹಾಗೂ ಶೇ.90 ಅಂಕ ಪಡೆದವರಿಗೆ ಬಿಸಿಎಗೂ ನೇರ ಪ್ರವೇಶ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ

ಮೈಸೂರು, ಏ.9(ಎಂಕೆ)– ದ್ವಿತೀಯ ಪಿಯುಸಿ ಪರೀಕ್ಷೆ ವಿಜ್ಞಾನ ವಿಭಾಗದಲ್ಲಿ ಪ್ರಮತಿ ಪಿಯು ಕಾಲೇಜಿನ ಆರ್. ಧನ್ಯಶ್ರೀ 549 (ಶೇ.92) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡದಲ್ಲಿ 100ಕ್ಕೆ 96, ಇಂಗ್ಲಿಷ್ 90, ಭೌತಶಾಸ್ತ್ರ–89, ರಸಾಯನ ಶಾಸ್ತ್ರ–92, ಗಣಿತಶಾಸ್ತ್ರ–86 ಹಾಗೂ ಜೀವಶಾಸ್ತ್ರದಲ್ಲಿ 96 ಅಂಕ ಗಳಿಸಿದ್ದಾರೆ. ಈಕೆ ಹಿನಕಲ್ ನಿವಾಸಿ, ಕಲಾವಿದ ರಂಗಸ್ವಾಮಿ ಹಾಗೂ ಸೌಮ್ಯ ದಂಪತಿ ಪುತ್ರಿ.



ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಗೆ ಹರಿಹರಾನಂದಸ್ವಾಮಿ, ಮಲ್ಲಾಜಮ್ಮ ಸೇರಿ 15 ಮಂದಿ ಆಯ್ಕೆ



ಹರಿಹರಾನಂದಸ್ವಾಮಿ



ಮಲ್ಲಾಜಮ್ಮ

ಮೈಸೂರು, ಏ.9(ಎಂಕೆ)– ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ನೀಡುವ 2023, 2024 ಮತ್ತು 2025ನೇ ಸಾಲಿನ ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿಗೆ ಮೈಸೂರಿನ ಸಮಾಜ ಸೇವಕ ಹರಿಹರಾನಂದಸ್ವಾಮಿ (ಹರಿಹರ ಆನಂದಸ್ವಾಮಿ) ಸೇರಿದಂತೆ 15 ಮಂದಿ ಸಾಧಕರನ್ನು ಆಯ್ಕೆ ಮಾಡಲಾಗಿದೆ.

2023ನೇ ಸಾಲಿನಲ್ಲಿ ಮೈಸೂರಿನ ಸಮಾಜ ಸೇವಕ ಹರಿಹರಾನಂದಸ್ವಾಮಿ, ಪತ್ರಿಕೋದ್ಯಮ ವಿಭಾಗದಿಂದ ಇಂದೂಧರ ಹೊನ್ನಾಪುರ, 2024ನೇ ಸಾಲಿನಲ್ಲಿ ಮಂಡ್ಯದ ಸಮಾಜ ಸೇವಕಿ ಮಲ್ಲಾಜಮ್ಮ, 2025ನೇ ಸಾಲಿನಲ್ಲಿ ಚಾಮರಾಜನಗರದ ಜನಪದ ಕಲಾವಿದೆ ಹೊನ್ನೂರು ಗೌರಮ್ಮ, ಹಾಸನ ದಲಿತ ಹೋರಾಟಗಾರ ಈರಪ್ಪ ಆಯ್ಕೆಯಾಗಿದ್ದಾರೆ.

ಮೂಲತಃ ಮೈಸೂರಿನ ಕೆ.ಆರ್.ನಗರ ತಾಲೂಕಿನ ಬ್ಯಾಡರಹಳ್ಳಿಯವರಾದ ಹರಿಹರ ಆನಂದಸ್ವಾಮಿ ಹುಣಸೂರು ತಾಲೂಕಿನ ರತ್ನಪುರಿ ಗ್ರಾಮದಲ್ಲಿ ನೆಲೆಸಿದ್ದು, ಯುವರಾಜ ಕಾಲೇಜಿನಲ್ಲಿ ಬಿ.ಎಸ್ಸಿ ಪದವಿ ಪಡೆದು ಕೃಷಿ ಜೊತೆಗೆ ಚಳುವಳಿಯಲ್ಲಿ ಮುಂಚೂಣಿ ನಾಯಕರಾಗಿ ಸೇವೆ ಸಲ್ಲಿಸಿದ್ದಾರೆ. ಬಸವಲಿಂಗಪ್ಪನವರ ಭೂಸಾ ಚಳುವಳಿಯಿಂದ ಪ್ರೇರಣೆಗೊಂಡು, ಸ್ಥಾಪನೆಯಾದ ದಲಿತ ಸಂಘರ್ಷ ಸಮಿತಿಯಲ್ಲಿ ಜಿಲ್ಲಾ ಸಂಚಾಲಕರಾಗಿ, ವಿಭಾಗೀಯ ಸಂಚಾಲಕರಾಗಿ, ಕರ್ನಾಟಕ ರಾಜ್ಯ ಸಂಘಟನಾ ಸಂಚಾಲಕರಾಗಿ ಸೇವೆ ಸಲ್ಲಿಸಿರುವ ಇವರ ಕುರಿತಾಗಿ ಜೀವನ ಚರಿತ್ರೆ 'ಅಂತರ್ಯ' ಕೃತಿ ಮುದ್ರಣಕ್ಕೆ ಸಿದ್ಧಗೊಳ್ಳುತ್ತಿದೆ. ಇವರ ಲೇಖನವಿರುವ 'ಅವಲೋಕನ' ಎಂಬ ದಲಿತ ಚಳುವಳಿಯ ಹುಟ್ಟು ಬೆಳವಣಿಗೆ ಕುರಿತು ಕೃತಿ ಸಿದ್ಧಗೊಳ್ಳುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯವು ಇವರ ಸಾಮಾಜಿಕ ಸೇವೆಯನ್ನು ಪರಿಗಣಿಸಿ 'ಸಾಮಾಜಿಕ ಸೇವಾ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಒಳಮೀಸಲಾತಿ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಬೇಕಾದ ವಿಚಾರವೇ ವಿನಃ ಯಾವುದೇ ಸಂಘರ್ಷಕ್ಕೆ ಎಡೆಮಾಡಿಕೊಡದೇ ಜಾರಿಗೆ ತರಬೇಕೆಂದು ಪ್ರತಿಪಾದಿಸಿರುವ ಹರಿಹರ ಆನಂದಸ್ವಾಮಿ ಅವರ ಸಾಮಾಜಿಕ ಸೇವೆಗಾಗಿ ಡಾ.ಬಿ.ಆರ್. ಅಂಬೇಡ್ಕರ್‌ರವರ ಜಯಂತಿಯ ಪ್ರಯುಕ್ತ ಕರ್ನಾಟಕ ರಾಜ್ಯ ಸರ್ಕಾರ ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಅಂಬೇಡ್ಕರ್(ಏ.14) ಜಯಂತಿ ದಿನದಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗಂಡ– ಹೆಂಡತಿ ಮಲಗಲು ಹೋಗುವ ಮುನ್ನ ವಿವಿಧ ದೇಶಗಳಲ್ಲಿ ಪರಸ್ಪರ ವಿನಿಮಯ ಮಾಡಿಕೊಳ್ಳುವ ವಿಧಾನ

ಅಮೆರಿಕ : ಗುಡ್‌ನೈಟ್ ಡಾರ್ಲಿಂಗ್

ಜಪಾನ್ : ಗುಡ್‌ನೈಟ್ ಮೈ ಲವ್

ರಷ್ಯಾ : ಸ್ವೀಟ್ ಡ್ರೀಮ್ ಡಾರ್ಲಿಂಗ್

ಭಾರತ : ಸಿಲಿಂಡರ್ ಆಫ್ ಮಾಡಿದ್ದೀಯಾ? ದೋಸೆ ಹಿಟ್ಟು ಫ್ರಿಜ್‌ನಲ್ಲಿ ಇಟ್ಟಿದ್ರಾ? ಬಾತ್ ರೂಂ ಲೈಟ್ ಆಫ್ ಮಾಡಿದ್ರಾ! ಸರಿ ಬಿದ್ಕೋ...!

ಮೈಸೂರು ಮಿತ್ರ

ಗುರುವಾರ, 10 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ದೀಪದ ಬೆಳಕಿನಲ್ಲಿ ಒಬ್ಬಾತ ಗೀತೆಯನ್ನು ಓದಬಲ್ಲ. ಮತ್ತೊಬ್ಬಾತ ಕಳ್ಳತನ ಮಾಡಬಲ್ಲ. ಅದು ದೀಪದ ತಪ್ಪಲ್ಲ, ಮನುಷ್ಯನ ಗುಣದ ತಪ್ಪು. – ಸಂತ ಕಬೀರರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತತ್ವದಲ್ಲಿ ಸತ್ವ ಹುಡುಕು, ವ್ಯಥೆಯಲ್ಲಿ ಕಥೆ ಹುಡುಕು.

ನಿಮ್ಮ ಪತ್ರಗಳು

ಶುದ್ಧ ಕುಡಿಯುವ ನೀರಿನ ಘಟಕ ದುರಸ್ತಿಗೊಳಿಸಿ



ಮಾನ್ಯರೆ,

ಮೈಸೂರು ತಾಲೂಕು ವರುಣ ಹೋಬಳಿ, ಭುಗತಗಳ್ಳಿ ಗ್ರಾಮದಿಂದ ಚಿಕ್ಕಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯ ಪಕ್ಕದ ಟ್ರಾನ್ಸ್‌ಫಾರ್ಮರ್ ಹತ್ತಿರ ಸುಮಾರು 6 ವರ್ಷಗಳ ಹಿಂದೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಗ್ರಾಮದ ಜನರ ಆರೋಗ್ಯದ ದೃಷ್ಟಿಯಿಂದ, ಜನರ ಅನುಕೂಲಕ್ಕಾಗಿ ಹಾಗೂ ಎಲ್ಲರಿಗೂ ಶುದ್ಧ ಕುಡಿಯುವ ನೀರು ಸಿಗಲೆಂದು ಸರ್ಕಾರದ ವತಿಯಿಂದ ಸುಮಾರು 10 ರಿಂದ 12 ಲಕ್ಷದವರೆಗೆ ಖರ್ಚು ಮಾಡಿ ಸ್ಥಾಪನೆ ಮಾಡಲಾಗಿದೆ.

ಆದರೆ ಸಂಬಂಧಪಟ್ಟ ಇಲಾಖೆಯಿಂದ ಟೆಂಡರ್ ಪಡೆದಿರುವ ಗುತ್ತಿಗೆದಾರರು ಸರಿಯಾಗಿ ನಿರ್ವಹಣೆ ಮಾಡದೆ ಸರ್ಕಾರಕ್ಕೆ ಆರ್ಥಿಕ ನಷ್ಟವನ್ನು ಉಂಟು ಮಾಡಿದ್ದಾರೆ. ಈಗ ಅದು ಕೆಟ್ಟು ನಿಂತಿದೆ. ಕೆಟ್ಟುಹೋಗಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ರಿಪೇರಿ ಮಾಡಿಸಿ, ಗ್ರಾಮೀಣ ಪ್ರದೇಶದ ಜನತೆಗೆ ಶುದ್ಧ ಕುಡಿಯುವ ನೀರು ತೊಂದರೆಯಾಗದ ರೀತಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಖುದ್ದಾಗಿ ಭೇಟಿ ನೀಡಿ ಸ್ಥಳ ಪರಿಶೀಲಿಸಿ ಅತೀ ತುರ್ತಾಗಿ ದುರಸ್ತಿಗೊಳಿಸಬೇಕು. ಇಲ್ಲವೆ ಸೂಕ್ತವಾದ ಸ್ಥಳದಲ್ಲಿ ಮರುಸ್ಥಾಪನೆ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ.

–ಎಸ್. ನೀಲಿಸಿದ್ದಯ್ಯ, ಭುಗತಹಳ್ಳಿ, ಮೈಸೂರು ತಾ.

ಬಂಡೀಪುರದಲ್ಲಿ ರಾತ್ರಿ ಸಂಚಾರಕ್ಕೆ ಅವಕಾಶ ಬೇಡ

ಮಾನ್ಯರೆ,

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕು ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ 200ಕ್ಕೂ ಹೆಚ್ಚು ಜಾತಿಯ ಪಕ್ಷಿಗಳು ಮತ್ತು ಅಷ್ಟೇ ಸಂಖ್ಯೆಯ ಸಸ್ತನಿಗಳು ಮತ್ತು ಸರೀಸೃಪಗಳಿವೆ. ಇದು ಒಂದು ಕಾಲದಲ್ಲಿ ಮೈಸೂರು ಸಾಮ್ರಾಜ್ಯದ ಮಹಾರಾಜರು ಬೇಟೆಯಾಡುವ ಖಾಸಗಿ ಮೀಸಲು ಪ್ರದೇಶವಾಗಿತ್ತು. ಆದರೆ 1973ರಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಎಂದು ಗುರುತಿಸಲಾಗಿದೆ.

ದೇಶದ ಅತ್ಯಂತ ಪ್ರಸಿದ್ಧ ಹುಲಿ ಮೀಸಲು ಅರಣ್ಯಗಳಲ್ಲಿ ಬಂಡೀಪುರವೂ ಒಂದಾಗಿದೆ. 'ರಾಯಲ್ ಬೆಂಗಾಲ್ ಟೈಗರ್' ಎಂಬ ಭಾರತೀಯ ಹುಲಿ ಇಲ್ಲಿ ಹೆಚ್ಚಾಗಿ ಕಾಣಬಹುದು. ಆನೆಗಳು, ಚಿರತೆಗಳು, ಕರಡಿಗಳಿವೆ. ಇನ್ನೂ ಕೆಲವು ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ಸಾವಿರಾರು ಪಾಣಿಗಳಿವೆ. ಆದರೆ ಮನುಷ್ಯರ ದಾಳಿಗೆ ಇವೆಲ್ಲವೂ ನಾಶವಾಗುತ್ತಿವೆ. ಇನ್ನೆರಡು ಮೂರು ವರ್ಷಗಳಲ್ಲೇ ಅಳಿವಿನಂಚಿನಲ್ಲಿರುವ ಅದೆಷ್ಟೋ ಪ್ರಾಣಿ, ಪಕ್ಷಿ, ಸಸ್ಯ ಸಂಕುಲ ಸಂಪೂರ್ಣವಾಗಿ ಮರೆಯಾಗುವ ಸಾಧ್ಯತೆಯಿದೆ. ರಾತ್ರಿ ವಾಹನ ಸಂಚಾರಕ್ಕೆ ಅವಕಾಶವಿದ್ದ ವೇಳೆ ಅದೆಷ್ಟೋ ಪ್ರಾಣಿಗಳು ಬಲಿಯಾಗಿವೆ. ಇದೀಗ ಮತ್ತೆ ಜನರ ಲಾಭಕ್ಕಾಗಿ ಅದೇ ತಪ್ಪೆಸಗಿದರೆ ಹಲವು ಅಪರೂಪದ ಜೀವಿಗಳು ಮರೆಯಾಗಬಹುದು. ದಯವಿಟ್ಟು ಸರ್ಕಾರ ರಾತ್ರಿ ಸಂಚಾರಕ್ಕೆ ಅವಕಾಶ ಕೊಡಬಾರದೆಂದು ನಮ್ಮ ಮನವಿ.

–ಮಹಾಂತೇಶ್ ಬಳ್ಳೂರುಹುಂಡಿ, ನಂಜನಗೂಡು ತಾ.

ಸ್ವಚ್ಛ ಮೈಸೂರು

ಮಾನ್ಯರೆ,

ಮೈಸೂರಿನ ರಸ್ತೆಗಳು ಬೆಳಗ್ಗೆ ಜನರು ಏಳುವ ಮೊದಲೇ ಸ್ವಚ್ಛವಾಗುತ್ತಿದ್ದವು. ಇದು ಅರವತ್ತು ವರ್ಷಗಳ ಹಿಂದೆ ನಾವು ನೋಡಿದ ಪಾಲಿಕೆಯ ಸಿಬ್ಬಂದಿಯ ಕೆಲಸ. ನಗರ ಬೆಳೆದಿದೆ ನಿಜ. ಸಿಬ್ಬಂದಿಯೂ ಹೆಚ್ಚಾಗಿದ್ದಾರೆ. ಕಸ ಹಾಕುವವರೂ ಹೆಚ್ಚಾಗಿದ್ದಾರೆ. ನಗರದ ಸೌಂದರ್ಯಕ್ಕೆ ಉರುಳಾಗಿರುವುದು ಚೆಸ್ಕಾಂನಂತಹ ಸಂಸ್ಥೆಗಳೇ ! ಇವರನ್ನು ಯಾರೂ ಪ್ರಶ್ನಿಸಲಾರರೇ?



ಪಾಲಿಕೆಯು ತ್ಯಾಜ್ಯವನ್ನು ಹಾಕುವ ಚೆಸ್ಕ್ ಮೇಲೆ ದಂಡವನ್ನೇಕೆ ಹಾಕಬಾರದು?

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.

ದಿಢೀರ್ ತ್ಯಾಜ್ಯ ಸೃಷ್ಟಿ!

ಮಾನ್ಯರೆ,

ಪ್ರವೇಶ ಪರೀಕ್ಷೆಗಳು, ಪಿಯುಸಿ ಪರೀಕ್ಷೆಗಳು (NEET, CET, COMED-K, ಮುಂತಾದವು) ಬಂತೂ ಅಂದರೆ ನಗರದಲ್ಲಿ ಇರುವ ಪರೀಕ್ಷಾ ಕೇಂದ್ರಗಳ ಸಮೀಪದಲ್ಲಿ ನೂರಾರು ಪದವಿ ಪೂರ್ವ ಕಾಲೇಜುಗಳ, ಪಾಠ–ಹೇಳಿಕೊಡುವ (Allen/Akash/Base ಮುಂತಾದವು) ಬಳಗದವರು ವಿದ್ಯಾರ್ಥಿಗಳನ್ನು (ಅಭ್ಯರ್ಥಿಗಳನ್ನು) ತಮ್ಮ ತಮ್ಮ ಟ್ಯುಟೋರಿಯಲ್ ಕೇಂದ್ರಗಳತ್ತ ಆಕರ್ಷಿಸುವ ಸಲುವಾಗಿ ವರ್ಣಮಯ ಜಾಹೀರಾತು ಚೀಟಿಗಳು, ಬುಕ್‌ಲೆಟ್‌ಗಳು, ಬ್ರೋಷರುಗಳನ್ನು ಪರೀಕ್ಷೆಗೆ ಬಂದಂತಹ ಯುವಜನರಿಗೆ 'ಕೇಜಿಗಟ್ಟಲೆ' ಕಾಗದಗಳ ರೂಪದ ಹೊರೆಯನ್ನು ವಿತರಿಸುತ್ತಾರೆ. ಆ ಅಭ್ಯರ್ಥಿ, ಮಕ್ಕಳು ಏನು ಮಾಡುತ್ತವೆ ನೋಡಿ. ಆ ಮಾಹಿತಿ ಚೀಟಿಗಳನ್ನು ಬಿಡಿಸಿಯೂ ನೋಡರು. ಅಲ್ಲಿಯೆ ರಸ್ತೆಗೋ ಚರಂಡಿಗೋ ತೂದು ಎಸೆದು ಬಿಡುವರು! ಅವುಗಳಲ್ಲಿ ಆಸಕ್ತಿ ಅವರಿಗೆ ಹುಟ್ಟುವುದೇ ಇಲ್ಲಾ. ಇದು ಮಹಾ–ದಂಡವಲ್ಲವೇ?

ಇದರಿಂದ ತೊಂದರೆಯಾಗುವುದು ಮಹಾನಗರ ಪಾಲಿಕೆಯ ಸಿಬ್ಬಂದಿಗೆ. ನೋಡ ನೋಡುತ್ತಲೇ ಕಸದ ಗುಪ್ಪೆಯಾಗುವ ಆ ಕಾಗದ–ತ್ಯಾಜ್ಯಗಳ ಜವಾಬ್ದಾರಿ ಮಹಾನಗರ ಪಾಲಿಕೆಯ ಮೇಲೆ! (ಒಂದು ಮುಖ್ಯ ಪ್ರವೇಶ ಪರೀಕ್ಷೆ, "NEET/ನೀಟ್" ಎಂಬುದು ಮುಂಬರುವ ಮೇ ತಿಂಗಳ 4ರಂದು ಜರುಗಲಿದೆ. ಆಗ ವೀಕ್ಷಿಸಬಹುದು ದಿಢೀರ್–ತ್ಯಾಜ್ಯ–ಉತ್ಪತ್ತಿ). ಪಾಲಿಕೆಯ ಆಯುಕ್ತರು ಈ ಕುರಿತು ಚಿಂತಿಸಬೇಕು. ಈ ಪರಿಯ ಚೀಟಿ,ಬುಕ್ಕುಗಳನ್ನು ಹಂಚುವುದನ್ನು 'ಆಜ್ಞೆಯ' ಮೂಲಕ ನಿಷೇಧಿಸಬಹುದೆ ಎಂದು ಆಲೋಚಿಸಬೇಕೆಂದು ಕೋರುತ್ತೇನೆ. (ಅವರ ಸಿಬ್ಬಂದಿಯ ಮೇಲೆ ಕಾಯಕದ ಹೊರೆ ತಗ್ಗೀತು!) ಕಾಗದ ವಿತರಣೆಯ ಬದಲು, ಸದ್ದು ಮಾಡದ "ಪ್ರಮೋಷನ್–ವಾಹನಗಳನ್ನು" ನಿಲ್ಲಿಸಿಕೊಂಡು, ಬರಿಯ ಬಣ್ಣಬಣ್ಣದ (ಡಿಜಿಟಲ್–ವಿಡಿಯೋ) ಫಲಕಗಳನ್ನು ಪ್ರದರ್ಶಿಸಲು ಅನುಮತಿ ನೀಡಬಹುದಷ್ಟೆ.

–ಡಿ.ವಿ.ಎಂ ಪ್ರಕಾಶ್, ಗೋಕುಲ ರಸ್ತೆ, ಮೈಸೂರು

ಮಂಥನ



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಅಗ್ನಿಪರೀಕ್ಷೆಯಲ್ಲೂ ಗೆದ್ದು ಬೀಗಿದ ಭಾಗೀರಥಿಯರು



ಅಸೀಮ ಚಟರ್ಜಿ



ರಾಜೇಶ್ವರಿ ಚಟರ್ಜಿ



ಟೆಸ್ಸಿ ಥಾಮಸ್



ಸುನೀತಾ ವಿಲಿಯಮ್ಸ್



ಡಾ. ಶ್ರೀದೇವಿಅನ್ನಪೂರ್ಣ ಸಿಂಗ್

(ಮಾರ್ಚ್ 20ರ ಸಂಚಿಕೆಯಿಂದ)

ಇಂದು ಭಾರತದಲ್ಲಿ ಮಹಿಳಾ ವಿಜ್ಞಾನಿ ಎಂದು ಹುಡುಕಿದರೆ ನಮಗೆ ಒಂದಷ್ಟು ಹೆಸರುಗಳು ದೊರೆಯುತ್ತವೆ. ಹಲವು ಮೊದಲುಗಳನ್ನು ಸಾಧಿಸಿದ ಸಾಧಕಿಯರ ಪಟ್ಟಿ ಓದುತ್ತಾ ಹೋದರೆ, ಭಾರತದ ಉಜ್ವಲ ಭವಿಷ್ಯ ಕಣ್ಣಮುಂದೆ ತೆರೆದಿಟ್ಟಂತಾಗುತ್ತದೆ. ಅಮೆರಿಕೆಯಲ್ಲಿ ವೈದ್ಯಕೀಯ ಶಿಕ್ಷಣ ಪಡೆದು ಮೊದಲ ಡಾಕ್ಟರ್ ಎನಿಸಿದ **ಆನಂದಿ ಗೋಪಾಲ ಜೋಶಿ,** ಮೊದಲ ಪದ್ಮ ಪ್ರಶಸ್ತಿ ಪುರಸ್ಕೃತ ಜಾನಕಿ ಅಮ್ಮಾಳ್, ವಿಜ್ಞಾನದಲ್ಲಿ ಮೊದಲು ಪಿಎಚ್.ಡಿ ಪಡೆದ **ಕಮಲಾ ಸೊಹ್ನಿ** ಸಿ.ವಿ.ರಾಮನ್‌ರಿಂದ ವಿಮೆನ್ ಆರ್ ನಾಟ್ ಫಾರ್ ರಿಸರ್ಚ್ ಸಂಶೋಧನಾ ವಿದ್ಯಾರ್ಥಿಯಾಗಲು ತಿರಸ್ಕರಿಸಪಟ್ಟವರು. ನಂತರ ಅವರ ಪ್ರಖರ ಬುದ್ಧಿಗೆ ರಾಮನ್‌ರೇ ಬೆರಗಾದರು. ಗಿಡದ ಪ್ರತೀ ಅಂಗಾಂಶದಲ್ಲಿ ಸೈಟೊಕ್ರೋಮ್ ಸಿ ಎಂಬ ಎನ್ಜೈಮ್ ಇದ್ದು ಅದು ಗಿಡಗಳ ಆಕ್ಸಿಡೇಶನ್‌ಗೆ ಸಹಾಯಕ ಎಂಬ ಮಹತ್ತರ ಶೋಧನೆ ಮಾಡುತ್ತಾರೆ. ಇನ್ನೊಂದು ಗ್ರೇಟ್ ಅನಿಸೋ ವಿಷಯ ಅಂದರೆ, ಕೇಂಬ್ರಿಜ್ ವಿವಿ ಇವರ ಕೇವಲ 40 ಪುಟಗಳ ಸಂಶೋಧನಾ ಲೇಖನಕ್ಕೆ ಪಿಎಚ್.ಡಿ ಪ್ರದಾನ ಮಾಡುತ್ತದೆ. ಅಲ್ಲಿಗೆ ಅವರ ಸಾಮರ್ಥ್ಯಕ್ಕೆ ಇನ್ನೇನು ಹೆಚ್ಚಿನ ವಿವರಣೆ ಬೇಡವೆನಿಸುತ್ತದೆ.

ಅಸೀಮ ಚಟರ್ಜಿ, 1944ರಲ್ಲಿಯೇ ಡಿ.ಎಸ್ಸಿ ಪದವಿ ಪಡೆದ ಮೊದಲ ಮಹಿಳೆ. ಮಲೇರಿಯಾ ಮತ್ತು ಮೂರ್ಛೆರೋಗಕ್ಕೆ ಮದ್ದು ಕಂಡುಹಿಡಿಯುವ ದಿಸೆಯಲ್ಲಿ ಇವರ ಸಂಶೋಧನೆ ಅಪೂರ್ವವಾದುದು. ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ಇವರು ರಾಜ್ಯಸಭೆಯ ಸದಸ್ಯರಾಗಿದ್ದವರು. ನಮ್ಮ ಕರ್ನಾಟಕದ ಮೊದಲ ಇಂಜಿನಿಯರ್ ರಾಜೇಶ್ವರಿ ಚಟರ್ಜಿ, ಕರ್ನಾಟಕದಲ್ಲಿ ಪದವೀಧರರಾದ ಮೊದಲ ಮಹಿಳೆಯ ಬ್ಯಾಚ್‌ನಲ್ಲಿ ಒಬ್ಬರಾದ ಕಮಲಾ ದಾಸಪ್ಪನವರ ಮೊಮ್ಮಗಳು. ಏರ್ಕ್ರಾಫ್ಟ್ ಮತ್ತು ಸ್ಪೇಸ್ಕ್ರಾಫ್ಟ್‌ಗಳಲ್ಲಿನ ಆಂಟೆನಾಗಳ ಕುರಿತ ಅವರ ಸಂಶೋಧನೆ ಅತ್ಯುಪಯೋಗಿಯಾದದ್ದು. ಇದೇ ಮೈಸೂರಿನಲ್ಲಿ ಅವರು ಎಂಎಸ್ಸಿ ಮಾಡಿದ್ದು. ಮೊದಲ ಟೆಸ್ಟ್ ಟ್ಯೂಬ್ ಮಗುವಿನ ಜನನಕ್ಕೆ ಕಾರಣರಾದ ಡಾ.ಇಂದಿರಾ ಹಿಂದೂಜ, ಅಂಟಾರ್ಟಿಕಾದಲ್ಲಿ ಸಂಶೋಧನೆ ಕೈಗೊಂಡ ಮೊದಲ ಭಾರತೀಯ ಮಹಿಳೆ ಅದಿತಿ ಪಂತ್ ಹೀಗೆ. ಇವರೆಲ್ಲರ ಸಾಧನೆಗಳು ನಮಗೆ ಓದುವುದಕ್ಕೆ ಸಿಗುತ್ತದೆ. ಶುಭಾ ತೋಲೆ ನರವಿಜ್ಞಾನದಲ್ಲಿ, ಎಲ್ಲ ಕಾಲದಲ್ಲೂ ಬಳಸಬಹುದಾದ ಬೀಜಗಳ ಅಭಿವೃದ್ಧಿಯಲ್ಲಿ ಗುರುತರ ಸಂಶೋಧನೆ ಮಾಡಿದ ಪರಮ್ ಜೀತ್ ಖುರಾನ, ಪೋಲಾರ್ ವುಮನ್ ಎಂದು ಕರೆಯಲ್ಪಡುವ ಮಂಗಳ ಮಣಿ, ನ್ಯಾಷನಲ್ ಸೈನ್ಸ್ ಅಕಾಡೆಮಿಯ ಮೊದಲ ಮಹಿಳಾ ಅಧ್ಯಕ್ಷೆ ಚಂದ್ರಿಮಾ ಸಹಾ, ಹೀಗೆ ಪಟ್ಟಿ ಬೆಳೆಯುವುದನ್ನು ನೋಡಲು ಸಂತಸವೆನಿಸುತ್ತದೆ.

ಮಂಗಲ್ ಯಾನ್ ಯೋಜನೆಯ ಸಫಲತೆಯಲ್ಲಿ ಅಸೀಮ ಶ್ರಮವಹಿಸಿದ, ರಾಕೆಟ್ ವುಮನ್ ಎಂದು ಕರೆಯಲ್ಪಡುವ ರಿತು ಕರಿಧಾಲ್, ನಂದಿನಿ ಹರಿನಾಥ್, ಅನುರಾಧ.ಟಿ.ಕೆ, ಮೌಮಿತಾ ದತ್ತಾ ಮತ್ತು ವಿ.ಆರ್. ಲಲಿತಾಂಬಿಕ ಅವರು ಅಂದು ಯಶಸ್ವಿ ಉಡ್ಡಯನದ ನಂತರ ತಮ್ಮ ಇನ್ನೂ ಅನೇಕ ಮಹಿಳಾ ಸಹೋದ್ಯೋಗಿಗಳೊಂದಿಗೆ ಸಂಭ್ರಮಪಟ್ಟಿದ್ದಕ್ಕಂತೂ ನಾವೆಲ್ಲರೂ ಸಾಕ್ಷಿಯಾಗಿದ್ದೇವೆ. MEN ARE FROM MARS AMD WOMEN FROM VENUS ಅಂತಿದ್ದ ಹೇಳಿಕೆ ಈಗ ಬದಲಾಗಿ, MARS WOMEN ಎಂದು ತಾವೆಲ್ಲಾ ಕರೆಯಲ್ಪಡುತ್ತಿರುವುದನ್ನು ರಾಕೆಟ್ ವುಮನ್ ಎಂದು ಕರೆಯಲ್ಪಡುವ ರಿತು ಕರಿಧಾಲ್ ಹೆಮ್ಮೆಯಿಂದ ಹೇಳುತ್ತಿದ್ದರೆ ನಾವು ಖುಶಿಯಿಂದ ಕುಣಿದಾಡುವ ಹಾಗಾಗುತ್ತದೆ.

ಇಸ್ರೋ ಮಹಿಳಾ ಅಧ್ಯಕ್ಷೆಯನ್ನು ಹೇಗೆ ನೋಡಿಲ್ಲವೋ ಹಾಗೆಯೇ, ಅಲ್ಲಿ ಯಾವ ಯೋಜನೆಯನ್ನೂ ಮಹಿಳೆಯರು ಮುನ್ನಡೆಸಿದ ಉದಾಹರಣೆಯೂ ಇರಲಿಲ್ಲ. ಆದರೆ ಈಗ ಚಂದ್ರಯಾನ್ 2 ಅನ್ನು ಮುತಯ್ಯಾ ವನಿತಾ ನಿರ್ದೇಶಿಸುತ್ತಿದ್ದರೆ ರಿತು ಮಿಶನ್ ಡೈರೆಕ್ಟರ್ ಆಗಿದ್ದಾರೆ. FIRST EVER!

ಮಿಸೈಲ್ ವುಮನ್ ಎಂದು ಕರೆಯಲ್ಪಡುವ ಟೆಸ್ಸಿ ಥಾಮಸ್, ಕಲಾಮ್‌ರಿಂದಲೇ ಶಹಬ್ಬಾಸ್ ಎನ್ನಿಸಿಕೊಂಡವರು.

ಮತ್ತೆ ನಾವುಗಳು ಸಕ್ರಿಯವಾಗಿ ಕೆಲಸ ಮಾಡುತ್ತಿರುವ ಮಹಿಳಾ ವಿಜ್ಞಾನಿಗಳು ಇಷ್ಟೇ, ಬೆರಳೆಣಿಕೆಯವರಷ್ಟೇ ಏನೋ ಅಂತಾ ನಿರ್ಧಾರಕ್ಕೆ ಬರುವುದು ಬೇಡ. ಭಾರತೀಯ ವಿಜ್ಞಾನ ಅಕಾಡೆಮಿ, ಲೀಲಾವತೀಸ್ ಡಾಟರ್ಸ್ ಎಂಬ ಪುಸ್ತಕವನ್ನು 2008ರಲ್ಲಿ ಹೊರತಂದಿದೆ. ರೋಹಿಣಿ ಗೋಡ್ಬೋಲೆ ಮತ್ತು ರಾಮ್ ರಾಮಸ್ವಾಮಿ ಅವರ ಸಂಪಾದಕತ್ವದಲ್ಲಿ ಹೊರಬಂದಿರುವ 388 ಪುಟಗಳ ಈ ಬೃಹತ್ ಪುಸ್ತಕದಲ್ಲಿ 100 ಮಹಿಳಾ ವಿಜ್ಞಾನಿಗಳ ಪರಿಚಯ ಲೇಖನಗಳಿವೆ. ಪುಸ್ತಕ ಓದುತ್ತಾ ಹೋದಂತೆ, ಒಬ್ಬೊಬ್ಬರ ಸಾಧನೆಯ ಪರಿಚಯ ಆಗುತ್ತಿದ್ದಂತೆ, ಆಶ್ಚರ್ಯವೆನಿಸುತ್ತದೆ. ಇಷ್ಟು ಜನ ಸಾಧಕಿಯರು ನಮ್ಮ ಮಧ್ಯೆ ಇದ್ದಾರೆಯೇ ಎಂದು. ಅವರೆಲ್ಲರ ಬಗ್ಗೆಯೂ ಹೇಳಬೇಕು ಎಂದು ಖಂಡಿತವಾಗಿ ಓದಿದ ಮೇಲೆ ನನಗನ್ನಿಸಿತು. ಸಾಧ್ಯವಿಲ್ಲದ್ದರಿಂದ ಕೆಲವರ ಬಗ್ಗೆ ಹೇಳುತ್ತೇನೆ.

> ಇಂದು ಎಲ್ಲ ಕ್ಷೇತ್ರಗಳ ತರಹ ಮಹಿಳೆ ವಿಜ್ಞಾನ ಕ್ಷೇತ್ರದಲ್ಲೂ ತನ್ನ ಛಾಪನ್ನು ಮೂಡಿಸಿದ್ದಾಳೆ. ದೊಡ್ಡ ದೊಡ್ಡ ಯೋಜನೆಗಳಲ್ಲಿ ತನ್ನ ಮಹತ್ತರವಾದ ಕೊಡುಗೆಗಳನ್ನು ನೀಡುತ್ತಾ ಬಂದಿದ್ದಾಳೆ. ಇಂದಿನ ತನ್ನ ಯಶಸ್ವೀ ದಿನಗಳನ್ನು ನೋಡುವುದಕ್ಕೆ ಆಕೆ ಕ್ರಮಿಸಿದ ಹಾದಿ ಸುಲಭದ್ದಾಗಿರಲಿಲ್ಲ. ಪುರುಷ ಪ್ರಧಾನವಾದ ಸಮಾಜದಿಂದ ಪ್ರಬಲವಾದ ವಿರೋಧವನ್ನು ಆಕೆ ಎದುರಿಸಬೇಕಾಗಿದ್ದು, ಇತಿಹಾಸದಲ್ಲಿನ ಕಪ್ಪು ಅಧ್ಯಾಯವೆಂದೇ ಹೇಳಬಹುದು.

ಇವರೆಲ್ಲರೂ ಮಹತ್ವದ ಸಂಶೋಧನೆಗಳನ್ನು ಮಾಡಿದ್ದಾರೆ ಅಥವಾ ಮಹತ್ತರ ಸಂಶೋಧನೆಗಳ ಯಶಸ್ಸಿನ ಅವಿಭಾಜ್ಯ ಅಂಗವಾಗಿದ್ದಾರೆ. ಬಿಂದು ಎ.ಬಾಂಬಾ ಹೇಳುತ್ತಾರೆ, MEN WERE LEADERS AND WOMEN WERE REPRESENTATIVES ಅಂತಾ.

ಹಾಗೇಯೆ, ಪುರುಷ ವಿಜ್ಞಾನಿಯ ಪ್ರಭೆಯಲ್ಲಿ ಇವರುಗಳು ಕಳೆದು ಹೋಗಿರುವುದೇ ಹೆಚ್ಚು ಈ ಪುಸ್ತಕ ಓದಿದರೆ, ಡಿ.ಎನ್.ಎ ಸ್ಟಕ್ಚರ್ ಮೇಲೆ ಸಂಶೋಧನೆ ಮಾಡಿದ ಮಂಜು ಬನ್ಸಲ್ ಸರಳಾ.ಕೆ.ಸುಬ್ಬರಾವ್ ಸಿಗುತ್ತಾರೆ. ಮಾನ್ಸೂನ್ ಎಂದರೆ, ಸಮುದ್ರದ ಮೇಲಿನಿಂದ ಬೀಸುವ ಗಾಳಿಯಷ್ಟೇ ಅಲ್ಲ, ಪ್ರತೀಬಾರಿ ಮಾನ್ಸೂನ್ ಹೆಚ್ಚು ಕಡಿಮೆ ಆಗುವುದಕ್ಕೆ ಸಾಗರದ ಮೇಲಿನ ಮೋಡಗಳ ಸಾಂದ್ರತೆ ಕಾರಣ ಎಂದು ಕಂಡುಹಿಡಿದ ಮಾನ್ಸೂನ್ ತಜ್ಞೆ, ಸುಲೋಚನಾ ಗಾಡ್ಗೀಳರ ಪರಿಚಯವಾಗುತ್ತದೆ.

1992ರಲ್ಲಿ, ಉಭಯವಾಸಿಗಳಲ್ಲಿ ಬಾಲ ಹೇಗೆ ಕಾಲುಗಳಾಗಿ ಮಾರ್ಪಟ್ಟು ವಿಕಾಸ ಹೊಂದಿದೆ ಎಂಬ ಸಂಶೋಧನೆಗೆ ಪದ್ಮಶ್ರೀ ಪಡೆದ ಮೊಹಾಂತಿ ಹೆಜಮಾಡಿ ಬಗ್ಗೆ ತಿಳಿಯಬಹುದು. ಇವತ್ತಿನ ದಿನ ನಾವು ಕ್ಯಾಪ್ಸೂಲ್‌ಗಳನ್ನು ಬಳಸುತ್ತೇವೆ. ಅವುಗಳ ತಯಾರಿಕೆಗೆ ಅಗತ್ಯವಾಗಿದ್ದ ಜೈವಿಕವಾಗಿ ಕರಗಬಲ್ಲ ಪಾಲಿಮರ್‌ಗಳ ಬಗ್ಗೆ ಸಂಶೋಧನೆ ಮಾಡಿದ, ವಿ.ಕಲ್ಪಾಕಂ ತಾವು ಹೇಗೆ ಮೈಸೂರಿನ ಜೆಸಿಇ ಕಾಲೇಜಿನಲ್ಲಿ ಪಾಲಿಮರ್ ಸೈನ್ಸ್ ಲ್ಯಾಬ್ ಸ್ಥಾಪಿಸಿದೆವು ಎಂದು ತಮ್ಮ ಮೈಸೂರಿನ ನಂಟನ್ನು ನೆನೆಯುತ್ತಾರೆ.

ಚಿಪ್ಪು, ಹೊಟ್ಟು ಸಗಣಿ, ಕಟ್ಟಿಗೆಗಳನ್ನು ಹೆಚ್ಚು ಹೊಗೆ ಉಂಟು ಮಾಡದ ಹಾಗೆ ಇದ್ದಲಾಗಿ ಪರಿವರ್ತಿಸಿ, ಹಳ್ಳಿಯ ಹೆಣ್ಣು ಮಕ್ಕಳ ಶ್ವಾಸಕೋಶದ ರಕ್ಷಣೆ ಮಾಡಬಹುದು ಎಂದು ಯಶಸ್ವಿಯಾಗಿ ಸಂಶೋಧಿಸಿದ ತಂಡದಲ್ಲಿದ್ದ ಪ್ರಿಯದರ್ಶಿನಿ ಕರ್ವೆಯವರ ಅನುಭವವಿದೆ.

ತಂಬಾಕು ಹೆಚ್ಚು ಉಪಯೋಗಿಸುವವರು ಕ್ಯಾನ್ಸರ್‌ಗೆ ತುತ್ತಾಗಲು ಕಾರಣ, ಅವರಲ್ಲಿ ತಂಬಾಕು ಸೇವನೆಯಿಂದ GSTM1 ಎಂಬ ಕ್ಯಾನ್ಸರ್‌ಕಾರಕಗಳನ್ನು ನಾಶಪಡಿಸುವ ಜೀನ್ DESTROY ಆಗುವುದೇ ಕಾರಣ ಎಂಬ ಹೊಸ ವಿಷಯವನ್ನು ತಿಳಿಯಪಡಿಸಿದ ರಜನಿ ಎ.ಬಿಸೆ ಅವರ ನುಡಿಗಳಿವೆ.

1978ರಲ್ಲಿ ಯಂಗ್ ಅಚೀವರ್ ಅವಾರ್ಡ್ ಪಡೆದ ಬಯೋಕೆಮಿಸ್ಟ್ ರೇಣು ಖನ್ನಾ ಚೋಪ್ರಾ ದ್ಯುತಿಸಂಶ್ಲೇಷಣೆಯ ಬಗ್ಗೆ ವಿಸ್ತೃತ ಅಧ್ಯಯನ ಕೈಗೊಂಡವರು. ಬಿರುಬೇಸಿಗೆಯಲ್ಲಿ ಮತ್ತು ಬರದಂತಹ ಪರಿಸ್ಥಿತಿಯಲ್ಲಿ ಗಿಡಗಳ ವರ್ತನೆ ಹೇಗಿರುತ್ತದೆ ಎಂದು ಅವರು ಕೈಗೊಂಡ ಸಂಶೋಧನೆಯ ಫಲಿತಾಂಶಗಳು ವಿಜ್ಞಾನ ಜಗತ್ತಿಗೆ ಅಮೂಲ್ಯವಾದುವು.

ಕುಷ್ಠರೋಗಕ್ಕೆ ಲಸಿಕೆ ಕಂಡುಹಿಡಿಯುವ ತಂಡದಲ್ಲಿ ತಮ್ಮ ಅಮೂಲ್ಯ ಸೇವೆ ಸಲ್ಲಿಸಿದ ಇಮ್ಯೂನಾಲಜಿಸ್ಟ್ ಶುಭದ ಚಿಪ್ಲುನ್ಕರ್, ರೋಟಾ ವೈರಸ್ ಹೇಗೆ ಮಕ್ಕಳಲ್ಲಿ ಡಯೇರಿಯಾಗೆ ಕಾರಣವಾಗುತ್ತದೆ ಎಂದು ಕಂಡುಹಿಡಿದ ಮಿನ್ನಿ.ಎಮ್.ಮಥನ್, ICMRನ ಮೊದಲ ಮಹಿಳಾ ಡೈರೆಕ್ಟರ್ ಜನರಲ್, ಕನ್ನಡದವರಾದ ಜಿ.ವಿ.ಸತ್ಯವತಿ ಇವರೆಲ್ಲರ ಜೀವನದ ಪುಟಗಳು ಓದುಗರಿಗೆ ನೀಡುವ ಸ್ಫೂರ್ತಿ ಅನನ್ಯ. ಗಣಿತ ಕ್ಷೇತ್ರದ ಸಾಧಕಿಯರಾದ ಶೋಭನಾ ನರಸಿಂಹನ್, ಮಂಗಳಾ ನಾರ್ಲೀಕರ್, ಆರ್.ಪರಿಮಳ, ಸುಜಾತ ರಾಮದೊರೈ, ರೇಣುಕಾ ರವೀಂದ್ರನ್ ಇವರುಗಳ ಬಗ್ಗೆ ಓದಿದರೆ ಗಣಿತವೂ ಪ್ರಿಯವೆನಿಸ ತೊಡಗುತ್ತದೆ. ಆಸ್ಟ್ರೋ ಫಿಸಿಕ್ಸ್‌ನಲ್ಲಿ ಅಪರೂಪದ ಸಾಧನೆ ಮಾಡಿದ ಪ್ರಜ್ವಲಾ ಶಾಸ್ತ್ರಿ ಅವರ ಅವರ ಮಾತುಗಳಿವೆ.

ಹೇಳುತ್ತಾ ಹೋದರೆ ನಿಜಕ್ಕೂ ನಿಲ್ಲದ ಪಟ್ಟಿ ಇದು. ಈ ಪುಸ್ತಕ 2008ರಲ್ಲಿ ಬಂದದ್ದು. ಖಂಡಿತವಾಗಿ ಇನ್ನೂ 100 ಅಥವಾ ಅದಕ್ಕೂ ಹೆಚ್ಚಿನ ಸಾಧಕಿಯರು ಸರತಿಯಲ್ಲಿದ್ದಾರೆ ಅನ್ನಿಸುತ್ತದೆ LEELAVTHI'S DAUGHTER'S ಪುಸ್ತಕದ ಪ್ರತೀ ಅಧ್ಯಾಯವೂ, I WAS FORTUNATE TO BE BORN IN THE FAMILY WHERE MY PARENTS WERE SUPPORTIVE, BELONG TO A FAMILY WHERE MY IN LAWS ANF HUSBAND WAS SUPPORTIVE ಎಂದೇ ಶುರುವಾಗುತ್ತದೆ. ಬಹುಶಃ ಇದು ಬದಲಾದ ಸಮಾಜದ, ಪುರುಷರ ಮಾನಸಿಕತೆಗೆ ಹಿಡಿದ ಕನ್ನಡಿ.

ತಮ್ಮ ತಮ್ಮ ವೈಯಕ್ತಿಕ ಕಾರಣಗಳಿಗಾಗಿ ಸಂಶೋಧನೆಯನ್ನು ನಿಲ್ಲಿಸಿದ ಮಹಿಳೆಯರನ್ನು ಮತ್ತೆ ವಾಹಿನಿಗೆ, MAIN STREAM SCIENCE. ಸೇರಿಸಿಕೊಳ್ಳುವ ಪ್ರಯತ್ನವನ್ನೂ ಸರ್ಕಾರ ಮಾಡುತ್ತಿದೆ. ಅಂತಹಾ ಯುವ 100 ಸಾಧಕಿಯರ ಪರಿಚಯ ಕೈಪಿಡಿಯನ್ನು 100 SUCCESS STORIES FROM WOMEN SCIENTISTS SCHEME (WOS-C) ಸರ್ಕಾರದ DEPARTMENT OF SCIENCE AND TECHNOLOGY ತಂದಿದೆ. ಸ್ಟಾರ್ಟ್‌ಅಪ್‌ಗಳ ಮೂಲಕ ಹೊಸ ಆವಿಷ್ಕಾರ ಮಾಡಿದವರ ದೊಡ್ಡ ಪಟ್ಟಿಯೇ ಅಲ್ಲಿದೆ. SCIENTIST'S POOL CREATION ಇವೆಲ್ಲಾ ಪ್ರಯತ್ನಗಳು ಖಂಡಿತವಾಗಿ ಆಶಾ ಭಾವನೆಯನ್ನು ಮೂಡಿಸುವಂತವು.

ಇವರಲ್ಲದೆ, ನಮ್ಮ ಮೈಸೂರಿನಲ್ಲಿರುವ ಸಿ.ಎಫ್.ಟಿ.ಆರ್.ಐನ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಯಶಸ್ವೀ ವಿಜ್ಞಾನಿ. ಕ್ಯಾನ್ಸರ್ ಚಿಕಿತ್ಸೆಯ ಕ್ಷೇತ್ರದಲ್ಲಿ ಹಲವು ಸಂಶೋಧನೆ ಕೈಗೊಂಡಿರುವ ಡಾ.ಸಮುದ್ಯತಾ, ದಿವ್ಯಾ ಪ್ರಸನ್ನಕುಮಾರ್, ಮಕ್ಕಳಲ್ಲಿ ಜೆನೆಟಿಕ್ಸ್ ವಾರಿಯೇಷನ್ಸ್ ಬಗ್ಗೆ ಸಂಶೋಧನೆ ಮಾಡುತ್ತಿರುವ ಅಖಿಲಾ ಪ್ರಶಾಂತ್, ದೀಪಾ ಭಟ್ ಮೈಸೂರಿನವರೇ. ನಾವೆಲ್ಲಾ ಮೆಚ್ಚುವ ಕನ್ನಡದ ಪ್ರಬುದ್ಧ ಕತೆಗಾರ್ತಿ ನೇಮಿಚಂದ್ರ ಎಚ್.ಎ.ಎಲ್ ನಲ್ಲಿ ಏರ್ ಕ್ರಾಫ್ಟ್ ರಿಸರ್ಚ್ ಸೆಂಟರ್‌ನ ಪ್ರಮುಖ ವಿಜ್ಞಾನಿ.

ಹಿಂದೊಮ್ಮೆ ಓದಿದ್ದ ನೆನಪು. ನಾಸಾದಲ್ಲಿ ಮಹಿಳಾ ವಿಜ್ಞಾನಿಗಳನ್ನು ತುಂಬಾ ಕೀಳಾಗಿ ನಡೆಸಿಕೊಳ್ಳುತ್ತಿದ್ದರಂತೆ. ನಾಸಾದ ಬೃಹತ್ ಕಟ್ಟಡಗಳಲ್ಲಿ ಒಂದು ಕಟ್ಟಡದಲ್ಲಿ ಮಾತ್ರ ಹೆಂಗಸರ ಶೌಚಾಲಯವಿದ್ದಿದ್ದು. ಮಹಿಳಾ ವಿಜ್ಞಾನಿಗಳು ಕೆಲಸ ಮಾಡುತ್ತಿದ್ದ ಸ್ಥಳದಿಂದ ಅಲ್ಲಿಗೆ ಹೋಗಿ ಬರಲೇ ಅರ್ಧ ಗಂಟೆ ಹಿಡಿಯುತ್ತಿತ್ತು. ಅದೆಷ್ಟು ಉಡಾಫೆ ಇದ್ದಿರಬಹುದು. ಬಹಳ ವರ್ಷಗಳ ನಂತರ ಪರಿಸ್ಥಿತಿ ಸುಧಾರಿಸಿತು. ಈಗ ನಾಸಾ ಅಂತರಿಕ್ಷದಲ್ಲಿ ಸ್ಪೇಸ್ ಕ್ರಾಫ್ಟ್‌ಗಳಲ್ಲಿ ಮಹಿಳೆಯರು ಬಳಸಲು ಅನುಕೂಲವಾಗುವಂತಹ ಶೌಚಾಲಯವನ್ನು 23 ಮಿಲಿಯನ್ ಡಾಲರ್ ಖರ್ಚು ಮಾಡಿ ತಯಾರಿಸಿದೆ. ಬದಲಾವಣೆಯ ಪರ್ವ ಪ್ರಾರಂಭವಾಗಿದೆ ಎನ್ನಲು ಈ ಉದಾಹರಣೆ ಸಾಕಲ್ಲವೇ?

ಕ್ವಾಂಟಮ್ ಕ್ರಿಸ್ಟಲ್‌ನ ವಿಜ್ಞಾನಿ ರಾಧಾ ರಮಣಂ ತಮ್ಮ ಸಂಶೋಧನಾ ಗೈಡ್ ಹೇಳಿದ್ದನ್ನು ಹೀಗೆ ಹೇಳುತ್ತಾರೆ,

AS A WOMAN PHYSICIST, YOU WILL NEED TO RPODUCE TWICE AS MUCH WORK AS A MAN TO GET HALF THE RECOGNITION. THE PREJUDICE AND CHAUVANISM OF MANY MEN TOWARDS WOMEN IS APPALING.

ಒಟ್ಟಿನಲ್ಲಿ ಮಹಿಳಾ ವಿಜ್ಞಾನಿಗಳ ಬಗ್ಗೆ ಮಾತನಾಡುವುದು ತುಂಬಾ ಸಂತಸದ ವಿಚಾರ. ಸ್ಫೂರ್ತಿ ತುಂಬುವಂತಹ ಎಪಿಸೋಡ್. ಚರಿತ್ರೆಯನ್ನು ಸೃಷ್ಟಿಸುವಂತಹ ಹಲವಾರು ಪೊಟೆನ್ಷಿಯಲ್ ಮಹಿಳಾ ವಿಜ್ಞಾನಿಗಳು ನಮ್ಮ ನಡುವೆಯೇ ಇದ್ದಾರೆ. 10 ತಿಂಗಳುಗಳ ಕಾಲ ಅಂತರಿಕ್ಷದಲ್ಲಿ ಅಕ್ಷರಶಃ ಸಿಕ್ಕಿಹಾಕಿಕೊಂಡು ಈಗ ಸುರಕ್ಷಿತವಾಗಿ ಯಶಸ್ವಿಯಾಗಿ ಮರಳಿರುವ ಸುನೀತಾ ವಿಲಿಯಮ್ಸ್ ಮಹಿಳಾ ವಿಜ್ಞಾನಿಗಳಿಗೆ ಮಾತ್ರವಲ್ಲ ಪ್ರತಿ ಮಹಿಳೆಗೂ ಸ್ಫೂರ್ತಿ. ಅವರ ಸಂತತಿ ಇನ್ನೂ ಹೆಚ್ಚಾಗಲಿ ಎನ್ನುವುದಷ್ಟೇ ನಮ್ಮೆಲ್ಲರ ಹಾರೈಕೆಯಾಗಬೇಕು.

ಪತ್ನಿ ಕೊಲೆ ಮಾಡದಿದ್ದರೂ ಪತಿಗೆ ಶಿಕ್ಷೆ; ಪೊಲೀಸ್ ಅಧಿಕಾರಿಗಳ ಮೇಲೆ ಎಫ್‌ಐಆರ್‌ಗೆ ಆಗ್ರಹಿಸಿ ಎಸ್‌ಪಿ ಕಚೇರಿ ಮುಂದೆ ಪ್ರತಿಭಟನೆ

ಮೈಸೂರು,ಏ.9(ಜಿಎ)–ಪತ್ನಿ ಕೊಲೆ ಮಾಡದಿದ್ದರೂ ನಿರಪರಾಧಿ ಪತಿಗೆ ಶಿಕ್ಷೆ ಕೊಡಿಸಿದ್ದ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್, ತನಿಖಾಧಿಕಾರಿ, ಕುಶಾಲನಗರ ಠಾಣೆಯ ಇನ್ಸ್‌ಪೆಕ್ಟರ್ ವಿರುದ್ಧ ಎಫ್‌ಐಆರ್ ದಾಖಲಿಸಿ ಬಂಧಿಸಬೇಕೆಂದು ಒತ್ತಾಯಿಸಿ ಭ್ರಷ್ಟಾಚಾರ ನಿರ್ಮೂಲನ ಸಮಿತಿ ಎಸ್‌ಪಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿತು.



ನಿರಪರಾಧಿಗೆ ಶಿಕ್ಷೆ ಕೊಡಿಸಿದ್ದ ಪೊಲೀಸರ ವಿರುದ್ಧ ಎಫ್‌ಐಆರ್ ದಾಖಲಿಸಿ ಬಂಧಿಸಬೇಕೆಂದು ಒತ್ತಾಯಿಸಿ ಭ್ರಷ್ಟಾಚಾರ ನಿರ್ಮೂಲನ ಸಮಿತಿ ವತಿಯಿಂದ ಎಸ್ ಪಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಭ್ರಷ್ಟಾಚಾರ, ಅಕ್ರಮಗಳಲ್ಲಿ ಭಾಗಿಯಾದ ಪೊಲೀಸರು ಆದಿವಾಸಿ ಜನಾಂಗದ ಸುರೇಶ್‌ನನ್ನು ಕೊಲೆ ಪ್ರಕರಣದಲ್ಲಿ ಸಿಲುಕಿಸಿದ್ದಾರೆ. ಇನ್ಸ್‌ಪೆಕ್ಟರ್ ಬಿ.ಜಿ. ಪ್ರಕಾಶ್, ಎಎಸ್‌ಐ ಸೋಮಶೇಖರ್, ಸಿಬ್ಬಂದಿಗಳಾದ ಜಿತೇಂದ್ರಕುಮಾರ, ಎಂ.ಪ್ರಕಾಶ್, ಮುಖೇಶ್‌ಕುಮಾರ್ ಸುರೇಶನಿಗೆ ಸಂಬಂಧವಿಲ್ಲದ ಸುಳ್ಳು ಕೊಲೆ ಪ್ರಕರಣದಲ್ಲಿ ಸಿಲುಕಿಸಿ, ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ 2 ವರ್ಷ ಶಿಕ್ಷೆ ಅನುಭವಿಸುವಂತೆ ಮಾಡಿದ್ದಾರೆ. ತಮ್ಮ ಸ್ವಾರ್ಥ ಸಾಧನೆ, ಭ್ರಷ್ಟಾಚಾರದ ಕಾರಣಕ್ಕೆ ನಿರಪರಾಧಿಗೆ ಶಿಕ್ಷೆ ಕೊಡಿಸಿರುವ ಪೊಲೀಸರು ನ್ಯಾಯಾಂಗ ವ್ಯವಸ್ಥೆ ತಲೆತಗ್ಗಿಸುವಂತೆ ಮಾಡಿದ್ದಾರೆ ಎಂದು ಕಿಡಿಕಾರಿದರು.

ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಪ್ರಕಾಶ್ ಕರ್ತವ್ಯ ನಿಷ್ಠೆ ಕುರಿತು ತನಿಖೆ ನಡೆಸಬೇಕು. ಬೆಟ್ಟದಪುರ ವ್ಯಾಪ್ತಿಯಲ್ಲಿ ಪತ್ತೆಯಾದ ಅಸ್ಥಿಪಂಜರ ಯಾರದ್ದೆಂದು ಪತ್ತೆ ಹಚ್ಚಬೇಕು. ವಿಚಾರಣಾ ವೇಳೆ ಕೋರ್ಟ್‌ಗೆ ಸುಳ್ಳು ಹೇಳಿ ವಂಚಿಸಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಸುರೇಶ್ ತನ್ನ ಹೆಂಡತಿಯನ್ನು ಕೊಲೆ ಮಾಡಿಲ್ಲದಿದ್ದರೂ ಆಕೆಯ ಪತಿಗೆ 2 ವರ್ಷ ಶಿಕ್ಷೆ ಅನುಭವಿಸುವಂತೆ ಮಾಡಿದವರನ್ನು ಬಂಧಿಸಿ, ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್‌ಗಡಿ, ಯತಿರಾಜ್, ಮೋಹನ್‌ಕುಮಾರ್, ನಂದ ಕಿಶೋರ್, ವಿಜಯ್, ರವಿಕಾಂತ್‌ರಾವ್, ಅನಂತು, ರಂಗನಾಥ್ ಬಂಗಾರಪ್ಪ, ಚಿದಾನಂದ, ಮೈಸೂರು ಬಸವಣ್ಣ ಪಾಲ್ಗೊಂಡಿದರು.

ಮುಡಾ ಹಗರಣ
ಏ.15ಕ್ಕೆ ತೀರ್ಪು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಸಲ್ಲಿಸಿದ್ದ ಬಿ ರಿಪೋರ್ಟ್ ಪ್ರಶ್ನಿಸಿ ಜಾರಿ ನಿರ್ದೇಶನಾಲಯ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಪನ್ನು ಏ.15ಕ್ಕೆ ಕಾಯ್ದಿರಿಸಿದೆ.

ಸಿದ್ಧರಾಮಯ್ಯ ವಿರುದ್ಧದ ಮುಡಾ ಹಗರಣ ಸಂಬಂಧ ಕೋರ್ಟ್‌ಗೆ ಲೋಕಾಯುಕ್ತದಿಂದ ಬಿ ರಿಪೋರ್ಟ್ ಸಲ್ಲಿಸಲಾಗಿತ್ತು. ಇದನ್ನು ಪ್ರಶ್ನಿಸಿ ಇಡಿ ಅರ್ಜಿ ಸಲ್ಲಿಕೆ ಮಾಡಿತ್ತು. ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಚಾರಣೆ ನಡೆಸಿತು.

ಈ ವೇಳೆ ಇಡಿ ಹಾಗೂ ಸಿಎಂ ಪರ ವಕೀಲರ ವಾದ–ಪ್ರತಿವಾದವನ್ನು ಆಲಿಸಿದ ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯವು, ಆದೇಶವನ್ನು ಏ.15ಕ್ಕೆ ಕಾಯ್ದಿರಿಸಿದೆ.


ನ್ಯಾಯಾಲಯಕ್ಕೆ ಜಾರಿ ನಿರ್ದೇಶನಾಲಯವು ಮುಚ್ಚಿದ ಲಕೋಟೆಯಲ್ಲಿ 27 ದಾಖಲೆಯನ್ನು ಸಲ್ಲಿಕೆ ಮಾಡಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಗುರುವಾರ 10 ಏಪ್ರಿಲ್ 2025

ಮೇ ಅಂತ್ಯಕ್ಕೆ ಮೈಸೂರಲ್ಲಿ ಹೊಸ ಗಾಂಧಿ ಭವನ ಲೋಕಾರ್ಪಣೆ



ಗಾಂಧಿ ಭವನದ ಒಳಗೆ ಪ್ರತಿಷ್ಠಾಪಿಸುವ ಮಹಾತ್ಮ ಗಾಂಧೀಜಿ ಅವರ ಮಾದರಿ ಪುತ್ಥಳಿ.



ಮೈಸೂರಿನ ಸಿದ್ಧಾರ್ಥನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ನಿರ್ಮಿಸಲಾಗಿರುವ ನೂತನ ಗಾಂಧಿಭವನದ ಕಟ್ಟಡ.

● ಸಿದ್ಧಾರ್ಥನಗರದಲ್ಲಿ 3 ಕೋಟಿ ವೆಚ್ಚದಲ್ಲಿ ನಿರ್ಮಾಣ ● ಮಹಾತ್ಮ ಗಾಂಧಿ ಪುತ್ಥಳಿ ಪ್ರತಿಷ್ಠಾಪನೆಯಷ್ಟೇ ಬಾಕಿ ● ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಉದ್ಘಾಟನೆ

● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಏ.9- ಮೈಸೂರು ಸಿದ್ಧಾರ್ಥನಗರದಲ್ಲಿ 3 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ನೂತನ 'ಗಾಂಧಿ ಭವನ್' ಕಾಮಗಾರಿ ಇದೀಗ ಪೂರ್ಣಗೊಂಡಿದ್ದು, ಮಹಾತ್ಮಗಾಂಧಿ ಪುತ್ಥಳಿ ಪ್ರತಿಷ್ಠಾಪನೆ ಬಳಿಕ ಮೇ ಅಂತ್ಯದ ವೇಳೆಗೆ ಲೋಕಾರ್ಪಣೆಗೊಳ್ಳಲಿದೆ.

ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರಿನ ಹೆಗ್ಗುರುತು ಅಚ್ಚಳಿಯದೇ ಉಳಿದಿರುವ ಹಿನ್ನೆಲೆಯಲ್ಲಿ ರಾಷ್ಟ್ರಪಿತ ಮಹಾತ್ಮಗಾಂಧೀಜಿ ಅವರ ವಿಚಾರಧಾರೆಯನ್ನು ಮೈಸೂರು ನಿವಾಸಿಗಳೊಂದಿಗೆ ನಗರಕ್ಕೆ ಬರುವ ಪ್ರವಾಸಿಗರು ಹಾಗೂ ಗಾಂಧಿವಾದಿಗಳಿಗೆ ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ 'ಗಾಂಧಿಭವನ್' ನಿರ್ಮಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿತ್ತು.


ಪುತ್ಥಳಿ ನಿರ್ಮಾಣ

"ಗಾಂಧಿ ಭವನದಲ್ಲಿ ಮಹಾತ್ಮ ಗಾಂಧೀಜಿ ಅವರ ಪುತ್ಥಳಿ ಪ್ರತಿಷ್ಠಾಪಿಸಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕಂಚಿನ ಪುತ್ಥಳಿ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಶೀಘ್ರದಲ್ಲಿಯೇ ಪುತ್ಥಳಿಯನ್ನು ಭವನದ ಆವರಣದಲ್ಲಿ ಪ್ರತಿಷ್ಠಾಪಿಸಲಾಗುತ್ತದೆ.

- ಮಹೇಶ್, ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ

ಕಳೆದ ಒಂದೂವರೆ ವರ್ಷದಿಂದ ಕಾಮಗಾರಿ ನಡೆಯುತ್ತಿತ್ತು. ಗುತ್ತಿಗೆ ಪಡೆದ ಸಂಸ್ಥೆ ಮುಂದಿನ ವಾರದೊಳಗೆ ನಿರ್ಮಿತಿ ಕೇಂದ್ರದ ವಶಕ್ಕೆ ನೀಡಲಿದೆ. ಆ ನಂತರ ಮಹಾತ್ಮಗಾಂಧಿ ಪುತ್ಥಳಿ ಪ್ರತಿಷ್ಠಾಪನೆ ಮಾಡಿದ ಬಳಿಕ ವಾರ್ತಾ ಮತ್ತು ಪ್ರಚಾರ ಇಲಾಖೆ ವಶಕ್ಕೆ ನೀಡಲಿದೆ.

ಇಲ್ಲಿದೆ ಹೊಸ ಗಾಂಧಿಭವನ: ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲ ಬಾರಿಗೆ ಸಿಎಂ ಆಗಿದ್ದ ವೇಳೆ, 2016-17ನೇ ಸಾಲಿನಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಪ್ರತಿ ಜಿಲ್ಲಾ ಕೇಂದ್ರದಲ್ಲೂ ಗಾಂಧಿಭವನ ನಿರ್ಮಾಣಕ್ಕೆ ಹಣ ಮೀಸಲಿಟ್ಟಿದ್ದರು. ಈ ಹಿನ್ನೆಲೆಯಲ್ಲಿ ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿ ಪಕ್ಕದಲ್ಲಿರುವ ವಿದ್ಯುನ್ಮಾನ ಮತಯಂತ್ರಗಳನ್ನು ದಾಸ್ತಾನು ಮಾಡಿರುವ ಸ್ಟ್ರಾಂಗ್ ರೂಮ್ ಪಕ್ಕದಲ್ಲಿರುವ ಒಂದು ಎಕರೆ ಜಾಗವನ್ನು ಗಾಂಧಿಭವನ ನಿರ್ಮಾಣಕ್ಕೆ ಗುರುತಿಸಲಾಗಿತ್ತು. ಅದರಲ್ಲಿ ಇದೀಗ 100x100 ಅಡಿ ವಿಸ್ತೀರ್ಣದಲ್ಲಿ 3 ಕೋಟಿ ರೂ. ವೆಚ್ಚದಲ್ಲಿ ಗಾಂಧಿಭವನ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ.



ಗಾಂಧಿ ಭವನದ ಒಳಾವರಣದ ದೃಶ್ಯ.

ಗಾಂಧೀಜಿ ಸಂದೇಶ ರವಾನೆ: ಈ ನೂತನ ಗಾಂಧಿ ಭವನದಲ್ಲಿ ಮಹಾತ್ಮ ಗಾಂಧಿಯವರ ಚಿಂತನೆಗಳು, ತತ್ವ, ಆದರ್ಶ, ಸ್ವಾತಂತ್ರ್ಯ ಹೋರಾಟಕ್ಕೆ ಅವರು ನೀಡಿದ ಕೊಡುಗೆ, ಗಾಂಧೀಜಿಯವರ ಸರಳ ಜೀವನ, ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದು,

ಕಾಮಗಾರಿ ಪೂರ್ಣಗೊಂಡಿದೆ



"ಗಾಂಧಿಭವನದ ಕಾಮಗಾರಿ ಪೂರ್ಣಗೊಂಡಿದೆ. ಗುತ್ತಿಗೆದಾರರು ಶೀಘ್ರದಲ್ಲಿಯೇ ಕಟ್ಟಡವನ್ನು ಹಸ್ತಾಂತರ ಮಾಡಲಿದ್ದಾರೆ. ಮೇ ತಿಂಗಳ ಅಂತ್ಯದೊಳಗೆ ಲೋಕಾರ್ಪಣೆ ಮಾಡಲು ಉದ್ದೇಶಿಸಲಾಗಿದೆ.

- ಟಿ.ಕೆ.ಹರೀಶ್, ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ.

ಗುಡಿ ಕೈಗಾರಿಕೆಗಳಿಗೆ ನೀಡಿದ ಪ್ರೋತ್ಸಾಹ, ಮಕ್ಕಳು, ಮಹಿಳೆಯರು, ದಲಿತರು, ಹಿಂದುಳಿದ ವರ್ಗದವರ ಮೇಲೆ ಅವರಿಗಿದ್ದ ಕಾಳಜಿ ಸೇರಿದಂತೆ ಸ್ವಾತಂತ್ರ್ಯ ಹೋರಾಟದ ಬಗ್ಗೆ ಇಲ್ಲಿ ಮಾಹಿತಿ ಭಿತ್ತರಿಸಲಾಗುತ್ತದೆ. ಅಪರೂಪದ ಚಿತ್ರಗಳನ್ನು ಪ್ರದರ್ಶಿಸಿ ಜನಸಾಮಾನ್ಯರಿಗೆ ದೇಶಕ್ಕೆ ಮಹಾತ್ಮಗಾಂಧೀಜಿ ನೀಡಿದ ಕೊಡುಗೆ ಬಗ್ಗೆ ತಿಳಿಸುವ ಉದ್ದೇಶದೊಂದಿಗೆ ಈ ಭವನ ನಿರ್ಮಿಸಲಾಗಿದೆ.

ಭವನದಲ್ಲಿ ಏನಿದೆ: ಈ ಗಾಂಧಿಭವನದಲ್ಲಿ ಗ್ರಂಥಾಲಯ, ವಾಚನಾಲಯ, ವಿವಿಧೋದ್ದೇಶಿತ ಸಭಾಂಗಣ, ತರಬೇತಿ ಕೇಂದ್ರ, ಗಾಂಧೀಜಿಯವರ ಜೀವನದ ವಿವಿಧ ಹಂತಗಳ ಫೋಟೋ ಗ್ಯಾಲರಿ, ಸಭಾಂಗಣ, ಒಳಾಂಗಣ, ಕಚೇರಿ ಕೊಠಡಿ ಸೇರಿವೆ. ಕಟ್ಟಡದ ಹಿಂಭಾಗದಲ್ಲಿ ಶೌಚಾಲಯ, ವಿಕಲಚೇತನರಿಗೆ ರ್ಯಾಂಪ್ ವ್ಯವಸ್ಥೆ ಮಾಡಲಾಗಿದೆ. ನೂತನ ಗಾಂಧಿ ಭವನದಲ್ಲಿ ವರ್ಷವಿಡೀ ಕಾರ್ಯ ಚಟುವಟಿಕೆ ಹಾಗೂ ತರಬೇತಿ ಕಾರ್ಯಾಗಾರಗಳ ನಡೆಸಲು ಉದ್ದೇಶಿಸಲಾಗಿದೆ. ಸಭೆ, ಸಮಾರಂಭಗಳನ್ನು ನಡೆಸಿ ಗಾಂಧೀಜಿಯವರ ವಿಚಾರಧಾರೆಗಳನ್ನು ಯುವ ಪೀಳಿಗೆಗೆ ತಲುಪಿಸುವ ಕಾರ್ಯ ನಿರಂತರವಾಗಿ ನಡೆಯಲಿದೆ.

ನಿರ್ವಹಣಾ ಸಮಿತಿ: ಈ ಗಾಂಧಿ ಭವನ ನಿರ್ಮಾಣ ಉಸ್ತುವಾರಿಯನ್ನು ವಾರ್ತಾ ಮತ್ತು ಪ್ರಚಾರ ಇಲಾಖೆ ನೀಡಲಾಗಿದೆ. ಆದರೆ, ಇದರ ನಿರ್ವಹಣೆಗಾಗಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾಮಟ್ಟದ ಸಮಿತಿ ರಚಿಸಲಾಗಿದ್ದು, ಇದರಲ್ಲಿ ಜಿಪಂ ಸಿಇಒ, ಪೊಲೀಸ್ ವರಿಷ್ಠಾಧಿಕಾರಿ ಸದಸ್ಯರಾಗಿರುತ್ತಾರೆ. ಜಿಲ್ಲಾ ವಾರ್ತಾಧಿಕಾರಿಗಳು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ಮೈಸೂರು ವಿವಿಯಲ್ಲೂ: ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಗಾಂಧಿಭವನ ಹಾಗೂ ಅಲ್ಲಿರುವ ಮಹಾತ್ಮ ಗಾಂಧೀಜಿ ಅವರ ವಿವಿಧ ಪ್ರತಿಮೆಗಳು ಗಮನ ಸೆಳೆಯುತ್ತಿವೆ. ಇದೀಗ ಮತ್ತೊಂದು ಗಾಂಧಿಭವನ ಮೈಸೂರಲ್ಲಿ ನಿರ್ಮಾಣವಾಗಿರುವುದರಿಂದ ಗಾಂಧೀ ಸ್ಮೃತಿಗೆ ಸಹಕಾರಿಯಾಗಲಿದೆ.

ಪುತ್ಥಳಿ: ಗಾಂಧಿಭವನದ ಕಟ್ಟಡದಲ್ಲಿ ಮಹಾತ್ಮ ಗಾಂಧೀಜಿ ಅವರ ಪುತ್ಥಳಿ ಪ್ರತಿಷ್ಠಾಪಿಸಲಾಗುತ್ತದೆ. ಈಗಾಗಲೇ ಮೂರು ಅಡಿ ಎತ್ತರದ ಕಂಚಿನ ಪುತ್ಥಳಿ ಮಾಡಲು ನಿರ್ಮಿತಿ ಕೇಂದ್ರ ಧಾರವಾಡದ ಗಾಂಧಿಭವನಕ್ಕೆ ಮಹಾತ್ಮಗಾಂಧಿ ಅವರ ಪುತ್ಥಳಿ ರೂಪಿಸಿಕೊಟ್ಟಿರುವ ಕಲಾವಿದರಿಗೆ ತಿಳಿಸಿದೆ. ಶೀಘ್ರದಲ್ಲಿಯೇ ಮೈಸೂರಿಗೆ ತರಲಾಗುತ್ತದೆ. ತಿಂಗಳಾಂತ್ಯಕ್ಕೆ ಪುತ್ಥಳಿ ಪ್ರತಿಷ್ಠಾಪನೆಯಾಗಲಿದೆ.

ಸೌರವ್ ಗಜ್‌ಗೆ 578 ಅಂಕ



ಮೈಸೂರು, ಏ.9(ಎಂಟಿವೈ)- ಮೈಸೂರಿನ ಮರಿಮಲ್ಲಪ್ಪ ಸಂಜೆ ಕಾಲೇಜಿನ ವಿದ್ಯಾರ್ಥಿ ಸೌರವ್ ಗಜ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಾಣಿಜ್ಯ ವಿಭಾಗದಲ್ಲಿ 600ಕ್ಕೆ 578 ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಸೌರವ್ ಗಜ್ ಕನ್ನಡದಲ್ಲಿ 98, ಇಂಗ್ಲೀಷ್‌ನಲ್ಲಿ 93, ಎಕನಾಮಿಕ್ಸ್‌ನಲ್ಲಿ 97, ಜಿಯೋಗ್ರಫಿ 95, ಬಿಸಿನೆಸ್ ಸ್ಟಡೀಸ್‌ನಲ್ಲಿ 97, ಅಕೌಂಟೆನ್ಸಿಯಲ್ಲಿ 98 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ಮೈಸೂರಿನ ಕುವೆಂಪುನಗರದ ನಿವಾಸಿಯೂ ಆದ ಜೆಎಸ್‌ಎಸ್ ಮಹಾವಿದ್ಯಾಪೀಠದ ಹಣಕಾಸು ವಿಭಾಗದ ಜಂಟಿ ನಿರ್ದೇಶಕ ವೀರಭದ್ರಸ್ವಾಮಿ, ನೀತು ಎಸ್. ರಾಜ್ ದಂಪತಿ ಪುತ್ರ. ಕಾಲೇಜಿಗೆ ವಾಣಿಜ್ಯ ವಿಭಾಗದಲ್ಲಿ ಮೊದಲ ಸ್ಥಾನ ಪಡೆದ ಸೌರವ್ ಗಜ್ ಅವರಿಗೆ ಕಾಲೇಜಿನ ಆಡಳಿತ ಮಂಡಳಿ ಹಾಗೂ ಬೋಧಕ ಸಿಬ್ಬಂದಿ ಅಭಿನಂದಿಸಿದ್ದಾರೆ.

ಎಸ್. ಪುಣ್ಯಶ್ರೀ ರಾಜ್ಯಕ್ಕೆ 9ನೇ ರ್‍ಯಾಂಕ್



ಮೈಸೂರು, ಏ. 9- ಈ ಬಾರಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ನಗರದ ಹೆಬ್ಬಾಳ್‌ನಲ್ಲಿರುವ ಶೇಷಾದ್ರಿಪುರಂ ಸ್ವತಂತ್ರ ಪಿಯು ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಎಸ್. ಪುಣ್ಯಶ್ರೀ ವಿಜ್ಞಾನ ವಿಭಾಗದಲ್ಲಿ 591 (ಶೇ. 98.50) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಕನ್ನಡದಲ್ಲಿ 100ಕ್ಕೆ 100, ಇಂಗ್ಲಿಷ್, ಭೌತಶಾಸ್ತ್ರ-99, ರಸಾಯನಶಾಸ್ತ್ರ-98, ಗಣಿತಶಾಸ್ತ್ರ-100ಕ್ಕೆ 100 ಹಾಗೂ ಜೀವಶಾಸ್ತ್ರದಲ್ಲಿ 99 ಅಂಕ ಗಳಿಸಿದ್ದಾರೆ. ಈಕೆ ಬೋಗಾದಿಯ ಬಸವೇಶ್ವರನಗರದ ನಿವಾಸಿ, ಗೋಕುಲಂನಲ್ಲಿರುವ ಮೈಸೂರು ವೆಸ್ಟ್ ಲಯನ್ಸ್ ಸೇವಾನಿಕೇತನ್ ಶಾಲೆಯ ಕನ್ನಡ ಶಿಕ್ಷಕ ಎಸ್. ಶಾಂತಕುಮಾರ್ ಹಾಗೂ ಕೆ. ಚಂದ್ರಮ್ಮ ಅವರ ಪುತ್ರಿ.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.9- ಮೈಸೂರು ತಾಲೂಕು ಕುಪ್ಪೇಗಾಲ ನಿವಾಸಿಯೂ ಆದ ಜೆಡಿಎಸ್ ವರುಣ ಹೋಬಳಿ ಅಧ್ಯಕ್ಷರಾದ ಪಿ.ಬಾಬು ಹಾಗೂ ಉಷಾ ದಂಪತಿ ಪುತ್ರ ಗಗನಗೌಡ ಬಿ. ದ್ವಿತೀಯ ಪಿಯುಸಿಯಲ್ಲಿ 580 ಅಂಕದೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಇವರು ಕನ್ನಡ 92, ಹಿಂದಿ 94, ಭೌತಶಾಸ್ತ್ರ 98, ರಸಾಯನಶಾಸ್ತ್ರ 98, ಗಣಿತಶಾಸ್ತ್ರ 98 ಹಾಗೂ ಜೀವಶಾಸ್ತ್ರದಲ್ಲಿ 100 ಅಂಕ ಗಳಿಸಿದ್ದಾರೆ.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.9- ಮಂಗಳೂರಿನ ಕೊಡಲ್‌ಬೈಲ್‌ಯ ಎಕ್ಸ್‌ಪರ್ಟ್ ಪಿಯು ಕಾಲೇಜು ವಿದ್ಯಾರ್ಥಿನಿ ಎಲ್.ಎಸ್.ಪ್ರಾಜ್ಞಾ ದ್ವಿತೀಯ ಪಿಯುಸಿಯಲ್ಲಿ 568(ಶೇ.94.66) ಅಂಕದೊಂದಿಗೆ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಕನ್ನಡ 94, ಇಂಗ್ಲಿಷ್ 95, ಭೌತಶಾಸ್ತ್ರ 95, ರಸಾಯನಶಾಸ್ತ್ರ 94, ಗಣಿತಶಾಸ್ತ್ರ 95 ಹಾಗೂ ಜೀವಶಾಸ್ತ್ರ 95 ಅಂಕ ಗಳಿಸಿದ್ದಾರೆ. ಇವರು, ಮೈಸೂರಿನ ಶ್ರೀರಾಮ್ ಹಾಗೂ ಶೈಲಾ ಶ್ರೀರಾಂ ದಂಪತಿ ಪುತ್ರಿ.

ಎಂ.ಎಂ. ಸಿರಿಗೆ ಶೇ. 92.5 ಅಂಕ



ಮೈಸೂರು, ಏ. 9- ಮಾರ್ಚ್‌ನಲ್ಲಿ ನಡೆದ ದ್ವಿತೀಯ ಪಿ.ಯು.ಸಿ.ಪರೀಕ್ಷೆಯಲ್ಲಿ ನಂಜನಗೂಡಿನ ಯೂನಿಟಿ ಕಾಲೇಜಿನ ವಿದ್ಯಾರ್ಥಿನಿ ಎಂ.ಎಂ.ಸಿರಿ ವಿಜ್ಞಾನ ವಿಭಾಗದಲ್ಲಿ ಶೇ.92.5 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡದಲ್ಲಿ-92, ಇಂಗ್ಲೀಷ್‌ನಲ್ಲಿ-95, ಭೌತಶಾಸ್ತ್ರದಲ್ಲಿ-88, ರಸಾಯನಶಾಸ್ತ್ರದಲ್ಲಿ-94, ಗಣಿತಶಾಸ್ತ್ರದಲ್ಲಿ-89, ಗಣಕ ವಿಜ್ಞಾನದಲ್ಲಿ 97 ಅಂಕ ಗಳಿಸಿದ್ದಾರೆ. ಈಕೆ ನಂಜನಗೂಡಿನ ಕೆಂಪೇಗೌಡ ಬಡಾವಣೆಯ ಎಂ.ಎ.ಮಂಜುನಾಥ್ ಮತ್ತು ಲೇಖಕಿ, ಕವಯಿತ್ರಿ ಎಸ್.ಎಲ್.ವರಲಕ್ಷ್ಮೀಮಂಜುನಾಥ್ ದಂಪತಿ ಪುತ್ರಿ.

ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿ ಉನ್ನತ ಶ್ರೇಣಿ



ಮೈಸೂರು, ಏ.9-ಮೈಸೂರಿನ ಮಹಾರಾಣಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಎಂ.ಡಿ.ವರ್ಷ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 541 ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಕನ್ನಡದಲ್ಲಿ 99, ಇಂಗ್ಲಿಷ್ 90, ಭೌತಶಾಸ್ತ್ರ 85, ರಸಾಯನ ಶಾಸ್ತ್ರ 87, ಗಣಿತ ಶಾಸ್ತ್ರ 86, ಬಯಾಲಜಿಯಲ್ಲಿ 94 ಅಂಕಗಳಿಸಿರುವ ಈಕೆ ಕುರುಬಾರಹಳ್ಳಿ ನಿವಾಸಿಯಾದ ಮೈಸೂರು ಜಿಲ್ಲಾ ಫೋಟೋಗ್ರಾಫರ್, ವಿಡಿಯೋಗ್ರಾಫರ್ ಅಸೋಸಿಯೇಷನ್ ಮಾಜಿ ಅಧ್ಯಕ್ಷ ಧನಂಜಯ ಮತ್ತು ಭಾಗ್ಯ ದಂಪತಿ ಪುತ್ರಿ, ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ದಿವಂಗತ ಅನಂತರಾಂ ಅವರ ಮೊಮ್ಮಗಳು.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ. 9- ಮಾರ್ಚ್‌ನಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಪಾಂಡವಪುರ ತಾಲೂಕಿನ ಚಿನಕುರುಳಿಯಲ್ಲಿರುವ ಎಸ್‌ಟಿಜಿ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿ ಯಶಸ್ ಎಸ್. ಗೌಡ ವಿಜ್ಞಾನ ವಿಭಾಗದಲ್ಲಿ ಶೇ. 91.66 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡ-97, ಇಂಗ್ಲಿಷ್-84, ಭೌತಶಾಸ್ತ್ರ- 92, ರಸಾಯನಶಾಸ್ತ್ರ-89, ಗಣಿತ ಶಾಸ್ತ್ರ-96, ಜೀವಶಾಸ್ತ್ರದಲ್ಲಿ- 92 ಅಂಕ ಗಳಿಸಿದ್ದಾರೆ. ಈತ ಮೈಸೂರಿನ ಗೋಕುಲಂ 3ನೇ ಹಂತದ ಕೆ.ಪಿ. ಕಾನ್ವೆಂಟ್ ರಸ್ತೆಯ ನಿವಾಸಿ ಎನ್. ಶ್ರೀನಿವಾಸಗೌಡ ಹಾಗೂ ಎನ್. ಪವಿತ್ರ ಅವರ ಪುತ್ರ.

ಆದಿಚುಂಚನಗಿರಿ ಕಾಲೇಜಿಗೆ ಶೇ.95 ಫಲಿತಾಂಶ



ಸುಶ್ಮಿತ



ಪೂರ್ಣಿಮಾ



ಐಶ್ವರ್ಯ

ಹೆಚ್.ಡಿ.ಕೋಟೆ, ಏ.9- ಪ್ರಸಕ್ತ ಸಾಲಿನ ಪಿಯುಸಿ ಪರೀಕ್ಷೆಯಲ್ಲಿ ಪಟ್ಟಣದ ಆದಿಚುಂಚನಗಿರಿ ಪದವಿಪೂರ್ವ ಕಾಲೇಜು ಶೇ.95ರಷ್ಟು ಫಲಿತಾಂಶ ಪಡೆದಿದೆ.

ಈ ಬಾರಿ ಪರೀಕ್ಷೆ ತೆಗೆದುಕೊಂಡಿದ್ದ ಕಾಲೇಜಿನ 279 ವಿದ್ಯಾರ್ಥಿಗಳ ಪೈಕಿ 264 ಮಂದಿ ತೇರ್ಗಡೆಯಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ 76 ವಿದ್ಯಾರ್ಥಿಗಳ ಪೈಕಿ 74 ಮಂದಿ ಉತ್ತೀರ್ಣರಾಗಿದ್ದಾರೆ. ಅತ್ಯುನ್ನತ ಶ್ರೇಣಿಯಲ್ಲಿ 19 ಮಂದಿ, ಉನ್ನತ ಶ್ರೇಣಿಯಲ್ಲಿ 47 ಮಂದಿ, ದ್ವಿತೀಯ ದರ್ಜೆಯಲ್ಲಿ 8 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಐಶ್ವರ್ಯ 566 ಅಂಕಗಳನ್ನು ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ 114 ವಿದ್ಯಾರ್ಥಿಗಳಲ್ಲಿ 107 ಮಂದಿ ತೇರ್ಗಡೆಯಾಗಿದ್ದಾರೆ. 17 ಮಂದಿ ಅತ್ಯುನ್ನತ ಶ್ರೇಣಿ, 53 ಮಂದಿ ಉನ್ನತ ಶ್ರೇಣಿ, 33 ಮಂದಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಪೂರ್ಣಿಮಾ 570 ಅಂಕಗಳನ್ನು ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ.

ಕಲಾ ವಿಭಾಗದಲ್ಲಿ 89 ವಿದ್ಯಾರ್ಥಿಗಳ ಪೈಕಿ 83 ಮಂದಿ ತೇರ್ಗಡೆಯಾಗಿದ್ದಾರೆ. ಅತ್ಯುನ್ನತ ಶ್ರೇಣಿ 12 ಮಂದಿ, ಉನ್ನತ ಶ್ರೇಣಿ 48 ಮಂದಿ, ದ್ವಿತೀಯ ದರ್ಜೆಯಲ್ಲಿ 18 ಮಂದಿ ತೇರ್ಗಡೆಯಾಗಿದ್ದಾರೆ. ಸುಶ್ಮಿತಾ 575 ಅಂಕಗಳನ್ನು ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ.

ಕಾಲೇಜಿನ ಪ್ರಾಂಶುಪಾಲ ಭೈರೇಗೌಡ, ಸಂಸ್ಥೆ ಕಾರ್ಯದರ್ಶಿ ಸೋಮೇಶ್ವರನಾಥ ಸ್ವಾಮೀಜಿ ಮತ್ತು ಗೌರವ ಆಡಳಿತ ಅಧಿಕಾರಿ ಕೆ.ಪಿ.ಬಸವಗೌಡ, ಪ್ರಾಂಶುಪಾಲರು, ಶಿಕ್ಷಕರು, ಬೋಧಕೇತರರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ದ್ವಿತೀಯ ಪಿಯುಸಿ: ನಿಖಿಲ್‌ಗೆ 86.33%



ಕಂಪಲಾಪುರ, ಏ.9- ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಕೆ.ಎಂ.ನಿಖಿಲ್‌ಗೌಡ ಶೇ.86.33ರಷ್ಟು ಅಂಕ ಪಡೆದಿದ್ದಾರೆ. ಪುತ್ತೂರಿನ ಸ್ವಾಮಿ ವಿವೇಕಾನಂದ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಈತ ಪಿರಿಯಾಪಟ್ಟಣ ತಾಲೂಕು ಬಿಜೆಪಿ ಉಪಾಧ್ಯಕ್ಷ ಎ.ಮಂಜು ಹಾಗೂ ಮಂಗಳ ದಂಪತಿ ಪುತ್ರ. ನಿಖಿಲ್ 600ಕ್ಕೆ 518 ಅಂಕ ಪಡೆದಿದ್ದು, ಕಾಲೇಜಿನ ಅಧ್ಯಾಪಕರು, ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

ಜೆಎಸ್‌ಎಸ್ ಬಾಲಕಿಯರ ಕಾಲೇಜಿಗೆ ಉತ್ತಮ ಫಲಿತಾಂಶ



ಸಹನಾ



ವಿನುತಾ



ಹೇಮಪ್ರಿಯಾ

ಸರಗೂರು, ಏ.9- ಪಟ್ಟಣದ ಜೆಎಸ್‌ಎಸ್ ಬಾಲಕಿಯರ ಸಂಯುಕ್ತ ಪದವಿಪೂರ್ವ ಕಾಲೇಜು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.85.13ರಷ್ಟು ಫಲಿತಾಂಶ ಪಡೆದಿದೆ.

ಕಾಲೇಜಿನ 143 ವಿದ್ಯಾರ್ಥಿನಿಯರ ಪೈಕಿ 122 ಮಂದಿ ಉತ್ತೀರ್ಣರಾಗಿದ್ದು, 15 ಅತ್ಯುನ್ನತ, 65 ಪ್ರಥಮ, 25 ವಿದ್ಯಾರ್ಥಿನಿಯರು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಕಲಾ ವಿಭಾಗದಲ್ಲಿ ಒಟ್ಟು 69 ವಿದ್ಯಾರ್ಥಿನಿಯರ ಪೈಕಿ 57 ಮಂದಿ ಉತ್ತೀರ್ಣರಾಗಿರುತ್ತಾರೆ. ಸಹನ 600ಕ್ಕೆ 546 ಅಂಕ ಪಡೆದಿದ್ದಾಳೆ. ವಾಣಿಜ್ಯ ವಿಭಾಗದಲ್ಲಿ ಒಟ್ಟು 40 ವಿದ್ಯಾರ್ಥಿನಿಯರ ಪೈಕಿ 37 ಮಂದಿ ಉತ್ತೀರ್ಣರಾಗಿದ್ದಾರೆ. ವಿನುತ 600ಕ್ಕೆ 563 ಅಂಕ ಪಡೆದಿದ್ದಾಳೆ. ವಿಜ್ಞಾನ ವಿಭಾಗದಲ್ಲಿ ಒಟ್ಟು 34 ವಿದ್ಯಾರ್ಥಿನಿಯರ ಪೈಕಿ 28 ಮಂದಿ ಉತ್ತೀರ್ಣರಾಗಿದ್ದಾರೆ. ಹೇಮಪ್ರಿಯ 600ಕ್ಕೆ 539 ಅಂಕ ಪಡೆದಿದ್ದಾಳೆ. ವಿದ್ಯಾರ್ಥಿಗಳನ್ನು ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಅಭಿನಂದಿಸಿದೆ.

ಜೀವಿತಾಗೆ ಶೇ.92ರಷ್ಟು ಅಂಕ



ಮೈಸೂರು, ಏ. 9- ಮೈಸೂರಿನ ಕೆಎನ್‌ಸಿ ಇನ್ನೋವೇಟಿವ್ ಪಿಯು ಕಾಲೇಜಿನ ವಿದ್ಯಾರ್ಥಿನಿ ಎಸ್. ಜೀವಿತಾ ದ್ವಿತೀಯ ಪಿಯು ಪರೀಕ್ಷೆಯಲ್ಲಿ 553 ಅಂಕ (ಶೇ.92) ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡದಲ್ಲಿ 99, ಇಂಗ್ಲಿಷ್-94, ಫಿಸಿಕ್ಸ್-83, ಕೆಮಿಸ್ಟ್ರಿ-88, ಗಣಿತಶಾಸ್ತ್ರ-95 ಮತ್ತು ಕಂಪ್ಯೂಟರ್ ಸೈನ್ಸ್‌ನಲ್ಲಿ 94 ಅಂಕ ಪಡೆದಿರುವ ಈಕೆ ಮೇಟಗಳ್ಳಿಯ ಸಣ್ಣಮುತ್ತು ಮತ್ತು ಸವಿತಾ ದಂಪತಿಯ ಪುತ್ರಿ.

ಹರಿ ವಿದ್ಯಾಲಯ ಕಾಲೇಜಿಗೆ ಉತ್ತಮ ಫಲಿತಾಂಶ



ನವನೀತ್ ರಾಮನಾಥ್ ಭಟ್



ವೈ. ಸಾಹಿತ್ಯ



ಎಸ್. ಭುವನ್




ಪಿ. ಆಕಾಶ್



ಗುಣಶೇಖರ್ ಎನ್.



ರಚನಾ ಎಸ್. ಭಾರದ್ವಾಜ್



ವಿ.ಟಿ. ರೋಹಿತ್



ಭುವನ್

ಮೈಸೂರು, ಏ.9- ಮೈಸೂರಿನ ಬೋಗಾದಿಯಲ್ಲಿರುವ ಹರಿ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಪ್ರಸಕ್ತ ಶೈಕ್ಷಣಿಕ ವರ್ಷದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 4 ಉನ್ನತ ಶ್ರೇಣಿ, ವಾಣಿಜ್ಯ ವಿಭಾಗದಲ್ಲಿ 3 ಉನ್ನತ ಶ್ರೇಣಿ ಹಾಗೂ ಒಟ್ಟಾರೆ 95% ಫಲಿತಾಂಶವನ್ನು ಗಳಿಸಿದೆ.

ಸಂಜನಾ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ. 9- ಮಂಗಳವಾರ ಪ್ರಕಟವಾದ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶದಲ್ಲಿ ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಬಾಲಕಿಯರ ಪದವಿಪೂರ್ವ ಕಾಲೇಜಿನ ಸಂಜನಾ 600ಕ್ಕೆ 525 ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಕನ್ನಡದಲ್ಲಿ 99, ಇಂಗ್ಲಿಷ್-81, ಭೌತಶಾಸ್ತ್ರ-87, ಕೆಮಿಸ್ಟ್ರಿ-85, ಗಣಿತಶಾಸ್ತ್ರ-93 ಹಾಗೂ ಬಯಾಲಜಿಯಲ್ಲಿ 80 ಅಂಕ ಪಡೆದಿದ್ದಾರೆ. ಈಕೆ ಮೈಸೂರು ಜಯಪುರ ಹೋಬಳಿ ಗೋಪಾಲಪುರದ ನಿವಾಸಿ ಜೋಗಿಗೌಡ ಮತ್ತು ಸವಿತಾ ದಂಪತಿ ಪುತ್ರಿ.

ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿ ಪೂರ್ವ ಕಾಲೇಜಿಗೆ ಉತ್ತಮ ಫಲಿತಾಂಶ



ಅನಘರಾವ್ ಎ.ಸಿ.



ಬಿಂದು ಎಂ.ಎಸ್.



ಐಶ್ವರ್ಯ



ಸಂಜನಾ ಸಿ.



ತಾನ್ಯ ಎಲ್. ಭಟ್



ಆದರ್ಶ್ ಪಿ.

ಮೈಸೂರು, ಏ. 9- ಮೈಸೂರಿನ ರಾಮಕೃಷ್ಣನಗರದಲ್ಲಿರುವ ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯು ಪರೀಕ್ಷೆಯಲ್ಲಿ 22 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 75 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಮತ್ತು 16 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಅನಘ ರಾವ್ ಎ ಸಿ 587 (97.83%) ಅಂಕಗಳಿಸಿ ಕಾಲೇಜಿಗೆ ಮೊದಲಿಗಳಾಗಿದ್ದಾಳೆ. ಬಿಂದು ಎಂ.ಎಸ್. 585 (97.50%) ಹಾಗೂ ಐಶ್ವರ್ಯ 559 (93.17%) ಅಂಕಗಳೊಂದಿಗೆ ಕಾಲೇಜಿಗೆ ಅನುಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಸಂಜನ ಸಿ 581(96.83%) ಅಂಕಗಳಿಸಿ ಕಾಲೇಜಿಗೆ ಮೊದಲಿಗಳಾಗಿದ್ದಾಳೆ. ತನ್ಯ ಎಲ್ ಭಟ್ 577 (96.17%) ಹಾಗೂ ಆದರ್ಶ್ ಪಿ 523(87.17%) ಅಂಕಗಳೊಂದಿಗೆ ಕಾಲೇಜಿಗೆ ಅನುಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದ್ದಾರೆ.

ಅತ್ಯುತ್ತಮ ಫಲಿತಾಂಶದೊಂದಿಗೆ ಅಪೂರ್ವ ಸಾಧನೆ ಮಾಡಿರುವ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿಯವರು, ಕಾರ್ಯನಿರ್ವಾಹಕ ಅಧಿಕಾರಿ, ಪ್ರಾಂಶುಪಾಲರು, ಬೋಧಕ-ಬೋಧಕೇತರರು ಹಾಗೂ ಶೈಕ್ಷಣಿಕ ಪಾಲುದಾರರಾದ ಶ್ರೀ ಪ್ರೌಮ್ಯ ಎಜ್ಯುಕೇಷನಲ್ ಟ್ರಸ್ಟ್‌ನ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

ಪವನ್ ಕುಮಾರ್‌ಗೆ ಉನ್ನತ ಶ್ರೇಣಿ



ಮೈಸೂರು, ಏ. 9- ಮೈಸೂರು ಜಿಲ್ಲೆ ಸರಗೂರು ತಾಲೂಕಿನ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವಿದ್ಯಾಸಂಸ್ಥೆಯ ವಿದ್ಯಾರ್ಥಿ ಪವನ್ ಕುಮಾರ್.ಎಂ ದ್ವಿತೀಯ ಪಿಯು ಪರೀಕ್ಷೆಯಲ್ಲಿ 541(ಶೇ.90) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾರೆ.

ಕನ್ನಡದಲ್ಲಿ 96, ಇಂಗ್ಲಿಷ್-85, ಫಿಸಿಕ್ಸ್-88, ಕೆಮಿಸ್ಟ್ರಿ-92, ಗಣಿತಶಾಸ್ತ್ರ-88, ಬಯಾಲಜಿಯಲ್ಲಿ-92, ಅಂಕ ಪಡೆದಿರುವ ಈತ ಮೈಸೂರು ತಾಲೂಕು ಕೇರ್ಗಳ್ಳಿಯ ನಿವಾಸಿ ಎಂ.ಮಾದೇಶ, ಎಸ್.ಗೀತಾ ದಂಪತಿಯ ಪುತ್ರ.

ಮಹರ್ಷಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ಸಾಧನೆ

ಮೈಸೂರು, ಏ. 9- ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಮಹರ್ಷಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದು, ಫಲಿತಾಂಶ ತೃಪ್ತಿ ತಂದಿದೆ ಎಂದು ಮಹರ್ಷಿ ಪದವಿ ಪೂರ್ವ ಕಾಲೇಜಿನ ಸಿಇಒ ತೇಜಸ್ ಶಂಕರ್ ತಿಳಿಸಿದರು.

ನಗರದ ವಿಶ್ವೇಶ್ವರನಗರದಲ್ಲಿರುವ ಮಹರ್ಷಿ ಪದವಿಪೂರ್ವ ಕಾಲೇಜಿನಲ್ಲಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದ ಅವರು, ನಾವು ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿರುವುದರ ಫಲವಾಗಿ ಫಲಿತಾಂಶ ಬಂದಿದೆ. ನಗರದಲ್ಲಿ ಸುಮಾರು 22 ವರ್ಷಗಳಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನದೇ ಆದ ಸಾಧನೆ ಮಾಡುತ್ತಿರುವ ಮಹರ್ಷಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ ಎಂದರು.



ವಾಣಿಜ್ಯ ವಿಭಾಗದ ನಿರಂಜನ್ ಬಿ.ವಿ.-592, ಸಂಪ್ರೀತಾ ಆರ್ -567, ಶ್ರೇಯ ಕೃಷ್ಣ ಕೆ-561, ಹಿಮಾಂಶು- 558 ಅಂಕಗಳನ್ನು ಗಳಿಸಿ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ರ್‍ಯಾಂಕ್‌ಗಳನ್ನು ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ದೀಕ್ಷಿತ ಎಚ್-538, ಪದ್ಮಾವತಿ-523 ಅಂಕ ಗಳಿಸಿದ್ದಾರೆ.

ಡಿ. ಬನುಮಯ್ಯ ಸ್ವತಂತ್ರ ಪಿಯು ಕಾಲೇಜಿಗೆ ಉತ್ತಮ ಫಲಿತಾಂಶ



ನಿಮಿತ



ಮೌರ್ಯ ಎನ್.ವಿವೇಕ್



ಕುಮಾರ್ ಎಸ್.



ದಿನೇಶ್ ಕುಮಾರ್ ಶರತ್

ಮೈಸೂರು, ಏ. 9 - ಈ ಬಾರಿಯ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಮೈಸೂರಿನ ಡಿ. ಬನುಮಯ್ಯ ಸ್ವತಂತ್ರ ಪದವಿ ಪೂರ್ವ ಕಾಲೇಜಿಗೆ ಉತ್ತಮ ಫಲಿತಾಂಶ ಲಭಿಸಿದೆ.

ವಾಣಿಜ್ಯ ವಿಭಾಗದಲ್ಲಿ ಮೌರ್ಯ ಎನ್. ವಿವೇಕ್ -677 (96.11%), ಕುಮಾರ್ ಎಸ್. - 560 (93.33%), ದಿನೇಶ್ ಕುಮಾರ್ - 538 (89.66%), ಶರತ್ - 516 (86%).

ಕಲಾ ವಿಭಾಗದಲ್ಲಿ ನಿಮಿತ - 571 (95.16%) ಅಂಕ ಪಡೆದು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಈ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಅಧ್ಯಾಪಕರು, ಅಧ್ಯಾಪಕೇತರ ವರ್ಗದವರು ಅಭಿನಂದಿಸಿದ್ದಾರೆ.

ದ್ವಿತೀಯ ಪಿಯುಸಿ ಫಲಿತಾಂಶ: ಮಂಡ್ಯ ಜಿಲ್ಲೆಗೆ 14ನೇ ಸ್ಥಾನ

ಮಂಡ್ಯ,ಏ.9– ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಂಡಿದ್ದು, ಜಿಲ್ಲೆಯು ರಾಜ್ಯದಲ್ಲಿ 14ನೇ ಸ್ಥಾನ ಪಡೆದಿದೆ. ಶೇ.73.27ರಷ್ಟು ಫಲಿತಾಂಶ ಪಡೆದಿದೆ.

ಕಳೆದ 2024ರಲ್ಲಿ 24ನೇ ಸ್ಥಾನ ಪಡೆದಿದ್ದು, ಶೇ.80.56ರಷ್ಟು ಫಲಿತಾಂಶ ಬಂದಿತ್ತು. ಇದೀಗ 10 ಸ್ಥಾನಗಳ ಜಿಗಿತ ಕಂಡಿದ್ದರೂ ಶೇ.7ರಷ್ಟು ಫಲಿತಾಂಶ ಕಡಿಮೆಯಾಗಿದೆ. ಈ ಬಾರಿಯೂ ಗ್ರಾಮೀಣ ವಿದ್ಯಾರ್ಥಿಗಳೇ ಮೇಲುಗೈ ಸಾಧಿಸಿದ್ದಾರೆ.

12763 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅದರಲ್ಲಿ 9351 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಇದರಲ್ಲಿ ಕಲಾ ವಿಭಾಗದಲ್ಲಿ 2173 ವಿದ್ಯಾರ್ಥಿಗಳ ಪೈಕಿ 1065 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.49.01ರಷ್ಟು ಫಲಿತಾಂಶ ಬಂದಿದೆ. ಅದರಂತೆ ವಾಣಿಜ್ಯ ವಿಭಾಗದಲ್ಲಿ 4140 ವಿದ್ಯಾರ್ಥಿಗಳ ಪೈಕಿ 2806 ವಿದ್ಯಾರ್ಥಿಗಳು ಪಾಸ್ ಆಗಿದ್ದು, ಶೇ.67.78ರಷ್ಟು ಫಲಿತಾಂಶ ಬಂದಿದೆ.

ವಿಜ್ಞಾನ ವಿಭಾಗದಲ್ಲಿ 6450 ವಿದ್ಯಾರ್ಥಿಗಳ ಪೈಕಿ 5480 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.84.96ರಷ್ಟು ಫಲಿತಾಂಶ ಪಡೆದಿದ್ದಾರೆ. 2024ರಲ್ಲಿ 12218 ವಿದ್ಯಾರ್ಥಿಗಳು ಹಾಜರಾಗಿ 9843 ವಿದ್ಯಾರ್ಥಿಗಳು ಪಾಸ್ ಆಗಿದ್ದರು.

ಗ್ರಾಮೀಣ ವಿದ್ಯಾರ್ಥಿಗಳೇ ಮೇಲುಗೈ: ಪ್ರತೀ ವರ್ಷದಂತೆ ಈ ಬಾರಿಯೂ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳೇ ಮೇಲುಗೈ ಸಾಧಿಸಿದ್ದಾರೆ. 5381 ವಿದ್ಯಾರ್ಥಿಗಳ ಪೈಕಿ 3977 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.73.91ರಷ್ಟು ಫಲಿತಾಂಶ ಪಡೆದಿದ್ದರೆ, ನಗರ ಪಟ್ಟಣ ಪ್ರದೇಶದ 7382 ವಿದ್ಯಾರ್ಥಿಗಳ ಪೈಕಿ 5374 ವಿದ್ಯಾರ್ಥಿಗಳು ಪಾಸ್ ಆಗಿದ್ದು, ಶೇ.72.8ರಷ್ಟು ಫಲಿತಾಂಶ ಪಡೆದಿದ್ದಾರೆ.

ಬೆಟ್ಟಿಂಗ್, ಅಕ್ರಮ ಮರಳು ದಂಧೆಗೆ ಕಡಿವಾಣ ಹಾಕಿ

ಜಿಲ್ಲಾ ಪೊಲೀಸ್ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪೊಲೀಸರಿಗೆ ಗೃಹ ಸಚಿವರ ಸೂಚನೆ

ಮಂಡ್ಯ,ಏ.9– ಮಂಡ್ಯ ಜಿಲ್ಲೆಯಲ್ಲಿ ಬೆಟ್ಟಿಂಗ್ ಹಾವಳಿ ಹಾಗೂ ಅಕ್ರಮ ಮರಳು ದಂಧೆ ವ್ಯಾಪಕವಾಗಿ ನಡೆಯುತ್ತಿದೆ ಎಂಬ ದೂರುಗಳು ಕೇಳಿ ಬರುತ್ತಿದ್ದು, ಇವುಗಳಿಗೆ ಕಡಿವಾಣ ಹಾಕಲು ಜಿಲ್ಲಾ ಪೊಲೀಸರು ಗಂಭೀರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸೂಚನೆ ನೀಡಿದರು.

ಬುಧವಾರ ನಗದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ಪೊಲೀಸ್ ಘಟಕದ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ಮಂಡ್ಯದಲ್ಲಿ ಬೆಟ್ಟಿಂಗ್ ದಂಧೆ ಹಾವಳಿ ಹೆಚ್ಚಾಗಿ ನಡೆಯುತ್ತಿದೆ ಎಂಬ ಮಾತು ಕೇಳಿ ಬರುತ್ತಿದೆ. ಕೆ.ಆರ್.ಪೇಟೆ, ಬಸರಾಳು, ಕೊಪ್ಪ ಭಾಗದಲ್ಲಿ ಹೆಚ್ಚಾಗಿದೆ. ಗಸ್ತು ಸಿಬ್ಬಂದಿಗಳು ಮಾಹಿತಿ ಸಂಗ್ರಹಿಸಿ ಅಂತವರ ವಿರುದ್ಧ ಕ್ರಮ ಜರುಗಿಸಬೇಕು. ಅಕ್ರಮ ಮರಳು ದಂಧೆಗೆ ನಮ್ಮವರೆ ಸಹಕರಿಸುತ್ತಿದ್ದಾರೆ ಎಂಬ ಆರೋಪಗಳಿವೆ ಈ ಬಗ್ಗೆ ಹಿರಿಯ ಅಧಿಕಾರಿಗಳು ನಿಗಾ ವಹಿಸಬೇಕು. ಆರೋಪಿಗಳ ಜೊತೆ ಪೊಲೀಸರು ಕೈಜೋಡಿಸುವುದು ಕಂಡು ಬಂದರೆ ಸಹಿಸುವುದಿಲ್ಲ. ಇದು ಮುಂದುವರಿಸುವುದು ಕಂಡು ಬಂದರೆ ಅಂತವರ ವಿರುದ್ಧ ಮುಲಾಜಿಲ್ಲದೆ ಕ್ರಮ ಜರುಗಿಸಬೇಕು ಎಂದು ಸೂಚಿಸಿದರು.



ಗೃಹ ಸಚಿವ ಡಾ.ಜಿ.ಪರಮೇಶ್ವರ್ ಬುಧವಾರ ಮಂಡ್ಯ ಜಿಲ್ಲಾ ಪೊಲೀಸ್ ಘಟಕದ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದರು.

ಡ್ರಗ್ಸ್ ಚಟುವಟಿಕೆಗಳು ಕಂಡು ಬಂದರೆ ಆಯಾ ಅಧಿಕಾರಿಗಳನ್ನು ಹೊಣೆ ಮಾಡಲಾಗುವುದು. ಅಪರಾಧ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡುಗುವ ರೌಡಿಗಳಿಗೆ ಕಾನೂನಿನ ಬಿಸಿ ಮುಟ್ಟಿಸಿ. ನಿಮಗೆ, ಲಾಠಿ, ಗನ್ ಸುಮ್ಮನೆ ನೀಡಿಲ್ಲ. ಸಂದರ್ಭ ಬಂದಾಗ ಬಳಸಿ. ನಿಮ್ಮೊಂದಿಗೆ ಸರ್ಕಾರ ನಿಲ್ಲುತ್ತದೆ. ಪೊಲೀಸ್ ಅಂದರೆ ಕಾನೂನು. ಕಾನೂನಿಗೆ ಗೂಂಡಾಗಳು ಹೆದರಬೇಕು. ದ್ವಿಚಕ್ರ ವಾಹನಗಳಲ್ಲಿ ಗಸ್ತು ತಿರುಗಿದರೆ ಘಟನೆಗಳು ಏನೆಂಬುದು ಗೊತ್ತಾಗುವುದಿಲ್ಲ. ಗಸ್ತು ಸಿಬ್ಬಂದಿಗಳು ತಮಗೆ ವಹಿಸಿದ ಜವಾಬ್ದಾರಿಯನ್ನು ಅರಿಯಬೇಕು. ಸ್ಥಳೀಯ ಜನರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದು ಮಾಹಿತಿ ಸಂಗ್ರಹಿಸಬೇಕು ಎಂದು ಹೇಳಿದರು.

ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಅಪರಾಧ ಪ್ರಕರಣಗಳ ಕುರಿತು ಕೂಲಂಕುಷವಾಗಿ ಪರಿಶೀಲಿಸಬೇಕು. ಎಸ್‌ಸಿ, ಎಸ್‌ಟಿ ಸಮುದಾಯಗಳ ನಾಗರಿಕರ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಕೆಲಸ ಮಾಡಬೇಕು. ಅನ್ಯಾಯಕ್ಕೆ ಒಳಗಾದವರ ರಕ್ಷಣೆ ನೀಡುವುದು ಪೊಲೀಸರ ಕರ್ತವ್ಯ. ಸಮಾಜದಲ್ಲಿ ಯಾರು ನ್ಯಾಯ ಕೇಳಿಕೊಂಡು ಠಾಣೆಗೆ ಬರುತ್ತಾರೆ, ಅವರ ಪರ ನಿಲ್ಲಬೇಕು. ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ತಿಳಿಸಿದರು.

ನೊಂದವರಿಗೆ, ಬಡವರಿಗೆ ರಕ್ಷಣೆ ನೀಡುವುದು ಮತ್ತು ನ್ಯಾಯ ಒದಗಿಸುವುದು ನಮ್ಮ ಸರ್ಕಾರದ ಬದ್ಧತೆ. ಜಾತಿ, ಧರ್ಮ, ಪಕ್ಷ ನೋಡುವುದು ಸರಿಯಲ್ಲ. ಪೊಲೀಸ್ ಸರ್ಕಾರದ ಮುಖ. ರಾಜ್ಯದಲ್ಲಿ ಪೊಲೀಸರು ಉತ್ತಮವಾಗಿ ಕರ್ತವ್ಯ ನಿರ್ವಹಿಸಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ತಳಮಟ್ಟದಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಪೊಲೀಸರಿಗೆ ಗೊತ್ತಿರಬೇಕು ಎಂದು ಸೂಚಿಸಿದರು.

ಡ್ರಗ್ಸ್ ಮುಕ್ತ ಕರ್ನಾಟಕ ಮಾಡುವುದಾಗಿ ಸದನದಲ್ಲಿ ತಿಳಿಸಿದ್ದೇವೆ. ಇದಕ್ಕೆ ಬದ್ಧವಾಗಿ ಪೊಲೀಸ್ ಇಲಾಖೆ ಕೆಲಸ ಮಾಡಬೇಕಿದೆ. ಡ್ರಗ್ಸ್ ಚಟುವಟಿಕೆಗಳನ್ನು ಸಂಪೂರ್ಣವಾಗಿ ಮಟ್ಟ ಹಾಕಲು ಮತ್ತಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಯಾವುದೇ ಕಾರಣಕ್ಕು ಕೋಮು ಸಂಘರ್ಷಗಳಿಗೆ ಆಸ್ಪದ ನೀಡಬಾರದು ಎಂದು ಹೇಳಿದರು.

ಸಭೆಯಲ್ಲಿ ದಕ್ಷಿಣ ವಲಯ ಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿಗಳಾದ ತಿಮ್ಮಯ್ಯ, ಗಂಗಾಧರಸ್ವಾಮಿ ಉಪಸ್ಥಿತರಿದ್ದರು.

ಜನಾಕ್ರೋಶಗೊಂಡಿದ್ದರೆ ಉಪಚುನಾವಣೆಯಲ್ಲಿ ನಮ್ಮನ್ನು ತಿರಸ್ಕರಿಸಬಹುದಿತ್ತು: ಡಾ:ಜಿ.ಪರಮೇಶ್ವರ್

ಸರ್ಕಾರ ಯಾವ ಯೋಜನೆಯನ್ನೂ ನಿಲ್ಲಿಸಲ್ಲ, ಆರ್ಥಿಕ ಸ್ಥಿತಿ ಚೆನ್ನಾಗಿದೆ

ಮಂಡ್ಯ,ಏ.9– ಬಂಡವಾಳ ಹೂಡಿಕೆ ಮತ್ತು ಜಿಎಸ್‌ಟಿ ಕಟ್ಟುವುದರಲ್ಲಿ ದೇಶದಲ್ಲೇ ರಾಜ್ಯ ಎರಡನೇ ಸ್ಥಾನದಲ್ಲಿದೆ. ರಾಜ್ಯದ ಆರ್ಥಿಕ ಸ್ಥಿತಿ ಸಶಕ್ತವಾಗಿದ್ದು, ನಾವು ಗ್ಯಾರಂಟಿ ಸೇರಿದಂತೆ ಯಾವ ಯೋಜನೆಯನ್ನು ನಿಲ್ಲಿಸಲ್ಲ ಎಂದು ಸ್ಪಷ್ಟಪಡಿಸಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಜನ ಆಕ್ರೋಶಗೊಂಡಿದ್ದರೆ ಉಪ ಚುನಾವಣೆಯಲ್ಲಿ ನಮ್ಮನ್ನು ತಿರಸ್ಕರಿಸಬಹುದಿತ್ತು ಎಂದರು.

ಬುಧವಾರ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನಮ್ಮ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿದೆ ಎಂಬುದು ಬಿಜೆಪಿಯವರಿಗೆ ಈಗ ಅರ್ಥವಾಗಿದೆ. ಐದು ಗ್ಯಾರಂಟಿಯನ್ನು ಕೊಟ್ಟಿದ್ದು, ನೀರಾವರಿ ಯೋಜನೆಗಳು, ರಸ್ತೆಗಳ ಅಭಿವೃದ್ಧಿ, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಸೇರಿದಂತೆ ಎಲ್ಲಾ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿರುವ ನಮ್ಮ ವಿರುದ್ಧ ಬಿಜೆಪಿ ಅಪಪ್ರಚಾರ ಮಾಡುತ್ತಿದೆ ಎಂದು ಕಿಡಿಕಾರಿದರು.

ಮಹಿಳಾ ಸಬಲೀಕರಣ ಉದ್ದೇಶದಿಂದ ಎರಡು ಸಾವಿರ ರೂ, 200 ಯೂನಿಟ್ ಉಚಿತ ವಿದ್ಯುತ್, 10 ಕೆಜಿ ಉಚಿತ ಅಕ್ಕಿ ಸಿಗುತ್ತಿದೆ. ಇಷ್ಟೆಲ್ಲ ಸವಲತ್ತುಗಳನ್ನು ನೀಡಿದರು ಜನ ಆಕ್ರೋಶಗೊಳ್ಳುತ್ತಾರೆಯೇ? ಯಾವುದಾದರು ಅಭಿವೃದ್ಧಿ ಕಾರ್ಯಗಳು ನಿಂತಿವೆಯೇ? ಇದು ಬಿಜೆಪಿಯವರ ಆಕ್ರೋಶ. ಬಿಜೆಪಿಯವರ ನಡುವಳಿಕೆಯ ಬಗ್ಗೆ ರಾಜ್ಯದ ಜನ ಪ್ರತಿಕ್ರಿಯಿಸದೇ ಇದ್ದರೂ ಗಮನಿಸುತ್ತಿದ್ದಾರೆ ಎಂದರು. ಜನ ಆಕ್ರೋಶಗೊಂಡಿದ್ದರೆ ಉಪ ಚುನಾವಣೆಯಲ್ಲಿ ನಮ್ಮನ್ನು ತಿರಸ್ಕರಿಸಬಹುದಿತ್ತಲ್ಲವೇ? ಮಾಜಿ ಮುಖ್ಯಮಂತ್ರಿಗಳ ಮಗನನ್ನೆ ಸೋಲಿಸಿದ್ದಾರೆ. ಮಾಜಿ ಮುಖ್ಯಮಂತ್ರಿಯವರ ಕ್ಷೇತ್ರದಲ್ಲಿ ಬಿಜೆಪಿ ಸೋತಿದೆ. ಜನರಿಗೆ ನಮ್ಮ ಆಳಿತದ ಬೇಸರವಿದ್ದರೆ ಉಪ ಚುನಾವಣೆಯಲ್ಲಿ ತಿರಸ್ಕರಿಸುವ ಮೂಲಕ ತಮ್ಮ ಆಕ್ರೋಶವನ್ನು ಹೊರಹಾಕುತ್ತಿದ್ದರು ಎಂದರು.

ಏ.12ರಂದು ಮಂಡ್ಯದಲ್ಲಿ ಶೋಭಯಾತ್ರೆ

ಮಂಡ್ಯ,ಏ.9– ವಿಶ್ವ ಹಿಂದು ಪರಿಷತ್, ಬಜರಂಗದಳ–ದುರ್ಗಾವಾಹಿನಿ ಮತ್ತು ಶ್ರೀರಾಮಾಂಜನೇಯ ಮಹೋತ್ಸವ ಸಮಿತಿ ವತಿಯಿಂದ ಏ.12ರಂದು ಹನುಮ ಜಯಂತಿಯ ಅಂಗವಾಗಿ ಡಿ.ಜೆ. ಸಮೇತ ಶೋಭಯಾತ್ರೆಯನ್ನು ಮಂಡ್ಯ ನಗರದಲ್ಲಿ ಆಯೋಜಿಸಲಾಗಿದೆ. ಹಿಂದು ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ, ಹಿಂದು ಧಾರ್ಮಿಕ ಆಚರಣೆಗಳ ವೇಳೆ ಅಹಿತಕರ ಘಟನೆಗಳನ್ನು ನಡೆಸಿ, ನಾವು ದುರ್ಬಲರು ಎಂಬುದನ್ನು ತೋರುವುದರ ವಿರುದ್ಧ, ಸಮಾಜ ಆಸ್ತಿಗಳನ್ನು ವಕ್ಫ್‌ಗೆ ವರ್ಗಾಯಿಸಿ ಅನ್ಯಾಯ ಎಸಗುವುದರ ವಿರುದ್ಧ ಜಾಗೃತಿ ಮೂಡಿಸಲು ಶೋಭಾಯಾತ್ರೆ ನಡೆಸಲಾಗುತ್ತಿದೆ.

ಕೆ.ಆರ್.ಪೇಟೆಯಲ್ಲಿ ಕಾಂಗ್ರೆಸ್ ಶಾಸಕರಿಲ್ಲದಿದ್ದರೂ ಪಕ್ಷ ರಾಜಕೀಯ ಮಾಡದೆ ಅಭಿವೃದ್ಧಿಗೆ ಹಣ ಬಿಡುಗಡೆ

ಸರ್ಕಾರದ ನಡಿಗೆ ಕಾರ್ಯಕರ್ತರ ಕಡೆಗೆ ಕಾರ್ಯಕ್ರಮ



ಕಾಂಗ್ರೆಸ್ ಪಕ್ಷದ ಸರ್ಕಾರದ ನಡಿಗೆ ಕಾರ್ಯಕರ್ತರ ಕಡೆಗೆ ಕಾರ್ಯಕ್ರಮವನ್ನು ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು.

ಕೆಆರ್.ಪೇಟೆ,ಮಾ.9– ಕೆಆರ್.ಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ನಮ್ಮ ಪಕ್ಷದ ಶಾಸಕರಿಲ್ಲದಿದ್ದರೂ ಕ್ಷೇತ್ರದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಪಕ್ಷ ರಾಜಕಾರಣ ಮಾಡದೆ 120 ಕೋಟಿ ರೂ ಅನುದಾನ ನೀಡಿದೆ ಎಂದು ರಾಜ್ಯ ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ತಿಳಿಸಿದರು.

ಪಟ್ಟಣದ ಜಯಮ್ಮ ಶಿವಲಿಂಗೇಗೌಡ ಸಮುದಾಯ ಭವನದಲ್ಲಿ ಪಕ್ಷದ ವತಿಯಿಂದ ಆಯೋಜಿಸಿದ್ದ ಸರ್ಕಾರದ ನಡಿಗೆ ಕಾರ್ಯಕರ್ತರ ಕಡೆಗೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಾಲೂಕಿನ ಗೂಡೇಹೊಸಹಳ್ಳಿ ಏತ ನೀರಾವರಿ ಯೋಜನೆ ಪೂರ್ಣಗೊಳಿಸಲು 50 ಕೋಟಿ ರೂ ಹಣ ಬಿಡುಗಡೆ ಮಾಡಲಾಗಿದೆ. ಈ ಯೋಜನೆಯಿಂದ ತಾಲೂಕಿನ 63 ಕೆರೆಗಳು ತುಂಬಲಿದ್ದು, ರೈತರ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಲಿದೆ. ಈ ಯೋಜನೆಯ ಮೂಲಕ ನಾಗಮಂಗಲ ಕ್ಷೇತ್ರಕ್ಕೂ ಹೇಮೆಯ ನೀರನ್ನು ತೆಗೆದುಕೊಳ್ಳಲು 80 ಕೋಟಿ ಅನುದಾನದ ಅಗತ್ಯವಿದ್ದು ಶೀಘ್ರದಲ್ಲಿಯೇ ಅದನ್ನು ಬಿಡುಗಡೆ ಮಾಡಲಾಗುವುದು ಎಂದರು.

2028ರ ಚುನಾವಣೆಯಲ್ಲಿ ಕೆ.ಆರ್.ಪೇಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರಿರಬೇಕು ಎನ್ನುವುದು ನನ್ನ ಗುರಿಯಾಗಿದೆ. ಪಕ್ಷದ ಕಾರ್ಯಕರ್ತರು ಮುಂಬರುವ ತಾಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಆಯ್ಕೆಯಾಗುವಂತೆ ಶ್ರಮಿಸಬೇಕು. ಕಾರ್ಯಕರ್ತರಿಗೆ ಅಗತ್ಯವಾದ ಶಕ್ತಿ ತುಂಬುವ ಕೆಲಸವನ್ನು ಸಚಿವನಾಗಿ ನಾನು ಮಾಡುತ್ತೇನೆ ಎಂದು ಸಚಿವರು ಭರವಸೆ ನೀಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್ ಮಾತನಾಡಿ ರೈತರ ಹಿತದೃಷ್ಟಿಯಿಂದ ಹೇಮಾವತಿ ಜಲಾಶಯದಿಂದ ತಾಲೂಕಿನ ನಾಲೆಗಳಿಗೆ ಒಂದು ಕಂತು ನೀರು ಬಿಡಿಸಿಕೊಡಬೇಕು. ಬಹುಕಾಲದಿಂದ ನನೆಗುದಿಗೆ ಬಿದ್ದಿರುವ ಹೇಮಾವತಿ ಬಡಾವಣೆಯ 582 ನಿವೇಶನಗಳ ಸಕ್ರಮಾತಿಗೆ ಕ್ರಮವಹಿಸಬೇಕು. ಪಾಲಿಟೆಕ್ನಿಕ್ ಆವರಣದಲ್ಲಿ ಮುಚ್ಚಿರುವ ರಸ್ತೆಗೆ ಪರ್ಯಾಯವಾಗಿ ರೈತರಿಗೆ ಹೊಸ ರಸ್ತೆ ನಿರ್ಮಿಸಿ ಕೊಡಬೇಕು ಎಂದರು.

ಸಭೆಯಲ್ಲಿ ಶಾಸಕ ರಮೇಶ್ ಬಂಡಿಸಿದ್ದೇಗೌಡ, ವಿಧಾನಪರಿಷತ್ ಸದಸ್ಯ ದಿನೇಶ್ ಗೂಳೀಗೌಡ, ವಿಧಾನ ಪರಿಷತ್ ಮಾಜಿ ಉಪ ಸಭಾಪತಿ ಮರಿತಿಬ್ಬೇಗೌಡ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮುಖಂಡರಾದ ಬಿ.ಎಲ್.ದೇವರಾಜು, ವಿಜಯರಾಮೇಗೌಡ, ಎಂ.ಡಿ.ಕೃಷ್ಣಮೂರ್ತಿ, ಕಿಕ್ಕೇರಿ ಸುರೇಶ್, ಶೀಳನೆರೆ ಅಂಬರೀಶ್, ತಾಲೂಕು ಉಸ್ತುವಾರಿ ಚಿನಕುರಳಿ ರಮೇಶ್, ಪುರಸಭೆ ಅಧ್ಯಕ್ಷೆ ಪಂಕಜಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರಕುಮಾರ್, ವಿಶ್ವನಾಥ್, ಜಿಲ್ಲಾ ಕಾಂಗ್ರೆಸ್ ಮುಖಂಡ ಚಿದಂಬರ್, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಕುಮಾರ್, ಪುರಸಭಾ ಸದಸ್ಯರಾದ ಡಿ.ಪ್ರೇಮ್‌ಕುಮಾರ್, ಹೆಚ್.ಎನ್.ಪ್ರವೀಣ್ ಉಪಸ್ಥಿತರಿದ್ದರು.

ರೈತನ ಮಗಳು ತಾಲೂಕು ಟಾಪರ್



ಕೆ.ಆರ್.ಪೇಟೆಯ ಕದಂಬ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ತಾಲೂಕಿನ ಸಿಂಧುಘಟ್ಟ ಗ್ರಾಮದ ಮಂಜೇಗೌಡ ಮತ್ತು ಕಮಲ ರೈತ ದಂಪತಿಯ ಪುತ್ರಿ ಎಸ್.ಎಂ.ಅಂಜಲಿ 584 ಅಂಕಗಳನ್ನು ಗಳಿಸುವ ಮೂಲಕ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಗ್ರಾಮೀಣ ಪ್ರತಿಭೆ ಹಿತಶ್ರೀಗೆ ಡಿಸ್ಟಿಂಕ್ಷನ್



ಕೆ.ಆರ್.ಪೇಟೆ: ತಾಲೂಕಿನ ಸೋಮನಹಳ್ಳಿ ಗ್ರಾಮದ ಗ್ರಾಮೀಣ ಪ್ರತಿಭೆ ಹಿತಶ್ರೀ ವಿಜ್ಞಾನ ವಿಭಾಗದಲ್ಲಿ 600ಕ್ಕೆ 523 ಅಂಕಗಳನ್ನು ಪಡೆಯುವ ಮೂಲಕ ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣ ಹೊಂದಿದ್ದಾರೆ. ಈಕೆ ಶಿಕ್ಷಕರಾದ ನೇತ್ರಾವತಿ ಅಯ್ಯಣ್ಣ ದಂಪತಿಗಳ ಪುತ್ರಿ. ಶಿಕ್ಷಣಾಧಿಕಾರಿ ವೈ.ಎನ್.ತಿಮ್ಮೇಗೌಡ, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಎ.ಎಂ.ಸಂಜೀವಪ್ಪ ಆಲಂಬಾಡಿಕಾವಲ್ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ದಿವಾಕರ್ ಮಾಸ್ತೀಗೌಡ ಇತರರು ಅಭಿನಂದಿಸಿದ್ದಾರೆ.

ಜೋಗಯ್ಯ ನಿಧನ



ಭಾರತೀನಗರ, ಏ.9– ಇಲ್ಲಿಗೆ ಸಮೀಪದ ಅಣ್ಣೂರು ಗ್ರಾಮದ ಭೂ ನ್ಯಾಯಮಂಡಳಿ ಮಾಜಿ ಸದಸ್ಯ, ಅಣ್ಣೂರು ಗ್ರಾ.ಪಂ ಮಾಜಿ ಸದಸ್ಯ, ಸೊಸೈಟಿ ಮಾಜಿ ಸದಸ್ಯ ಹಾಗೂ ಹಿರಿಯ ದಲಿತ ಮುಖಂಡ ಜೋಗಯ್ಯ (98) ಬುಧವಾರ ಮಧ್ಯಾಹ್ನ ನಿಧನ ಹೊಂದಿದ್ದಾರೆ.

ಮೃತರು ಐವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಸಂಸ್ಕಾರ ಸ್ವಗ್ರಾಮವಾದ ಅಣ್ಣೂರು ಗ್ರಾಮದ ರುದ್ರ ಭೂಮಿಯಲ್ಲಿ ಗುರುವಾರ ಬೆಳಿಗ್ಗೆ 10 ಗಂಟೆಗೆ ಜರುಗಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಕಿಕ್‌ಬ್ಯಾಕ್ ಆರೋಪ

ಮತ್ತು ದಾಖಲೆಗಳನ್ನು ರಾಜ್ಯಪಾಲರಿಗೆ ಸಲ್ಲಿಸಲು ಸಮಯಾವಕಾಶ ಕೋರಿ ರಾಮಮೂರ್ತಿಗೌಡ ರಾಜಭವನಕ್ಕೆ ಮನವಿ ಮಾಡಿದ್ದರು. ಇವರ ಕೋರಿಕೆ ಪರಿಗಣಿಸಿದ ರಾಜ್ಯಪಾಲರು, ಏಪ್ರಿಲ್ 1ರಂದು ದೂರುದಾರರನ್ನು ಕರೆಸಿಕೊಂಡು ಮಾಹಿತಿ ಮತ್ತು ದಾಖಲೆಗಳನ್ನು ಅಧಿಕಾರಿಗಳ ಜೊತೆಗೂಡಿ ಪರಿಶೀಲಿಸಿದರು. ತದ ನಂತರ ಈ ಎಲ್ಲಾ ದಾಖಲೆಗಳನ್ನು ಕೇಂದ್ರದ ಸಾಲಿಸಿಟರ್ ಜನರಲ್ ಅವರಿಗೆ ಕಳುಹಿಸಿ ಅಭಿಪ್ರಾಯ ಕೇಳಿದ್ದಾರೆ. ಈ ಆರೋಪಕ್ಕೆ ಸಂಬಂಧಿಸಿದಂತೆ ರಾಜ ಭವನ ಸರ್ಕಾರಕ್ಕೆ ಪತ್ರವೂ ಬರೆದಿಲ್ಲ, ಮಾಹಿತಿಯನ್ನೂ ಕೋರಿಲ್ಲ. ಈ ಹಿಂದೆಲ್ಲಾ ದೂರುಗಳು ಬಂದಾಗ ಸರ್ಕಾರದ ಮುಖ್ಯಕಾರ್ಯದರ್ಶಿ ಅಥವಾ ಇಲಾಖಾ ಪ್ರಧಾನ ಕಾರ್ಯದರ್ಶಿ ಅವರಿಗೆ ಪತ್ರ ಬರೆದು ವಿವರಣೆ ಕೋರುತ್ತಿದ್ದರು. ರಾಜಭವನದಿಂದ ಬರುವ ಇಂತಹ ಪತ್ರಗಳಿಗೆ ಅಧಿಕಾರಿಗಳು ಉತ್ತರ ನೀಡ ಬಾರದೆಂದು, ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ ಕೈಗೊಂಡ ಸಿದ್ದರಾಮಯ್ಯ ಸರ್ಕಾರ, ಆ ಪತ್ರಗಳಿಗೆ ಸಂಪುಟದಲ್ಲಿ ನಿರ್ಧರಿಸಿದ ನಂತರವೇ ಉತ್ತರಿಸಬೇಕು ಎಂದಿತ್ತು. ಈ ಬೆಳವಣಿಗೆ ನಂತರ ರಾಜ್ಯಪಾಲರು ರೀ–ಡೂ ಸೇರಿದಂತೆ 26 ಆರೋಪಗಳಿಗೆ ಸಂಬಂಧಿಸಿದಂತೆ ವಿವರಣೆ ಕೋರಿ ಸರ್ಕಾರದಿಂದ ಉತ್ತರ ಬಾರದ ಕಾರಣ ಈ ಬಾರಿ ನೇರವಾಗಿ ಸಾಲಿಸಿಟರ್ ಅಭಿಪ್ರಾಯಕ್ಕೆ ಮುಂದಾಗಿದ್ದಾರೆ. ಸಿದ್ದರಾಮಯ್ಯ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರ ವಿಧಿ 7, 9, 11, 12 ಮತ್ತು 15ರಡಿ ಪ್ರಾಸಿ ಕ್ಯೂಷನ್‌ಗೆ ಅನುಮತಿಗೆ ಕೋರಲಾಗಿದೆ. ಅಲ್ಲದೆ, ಭಾರತೀಯ ನ್ಯಾಯ ಸಂಹಿತೆ ವಿಧಿ 59, 61, 42, 201, 227, 228, 229, 239, 314, 316 (5) 318 (1), 319, 322, 324 (2), 324 (3), 335, 336, 338, 340ರ ಅನ್ವಯ ಪೂರ್ವಾನುಮತಿ ನೀಡುವಂತೆಯೂ ಕೋರಿದ್ದಾರೆ. ಗಣಿ ಗುತ್ತಿಗೆ ನವೀಕರಣಕ್ಕೂ ಮುನ್ನ ಸಿದ್ದರಾಮಯ್ಯ ಆದಾಯದಲ್ಲಿ ಏರಿಕೆ ಆಗಿರಲಿಲ್ಲ, ನಂತರದ ವರ್ಷಗಳಲ್ಲಿ ಅವರ ಆದಾಯದಲ್ಲಿ ಗಣನೀಯ ಏರಿಕೆ ಆಗಿದೆ. ಅವರೂ ಮತ್ತು ಅವರ ಕುಟುಂಬ ಸದಸ್ಯರ ಸ್ಥಿರ ಮತ್ತು ಚರಾಸ್ತಿಗಳಲ್ಲೂ ಏರಿಕೆಯಾಗಿವೆ. ಇವುಗಳ ಮೊತ್ತ ಹಲವು ಕೋಟಿ ರೂ.ಗಳಾಗಿವೆ ಎಂದು ದಾಖಲೆಗಳನ್ನು ನೀಡಿದ್ದಾರೆ. ಹರಾಜು ಪ್ರಕ್ರಿಯೆ ಮುಂದುವರೆಸಿದ್ದರೆ ಪ್ರತಿ ಗಣಿ ಗುತ್ತಿಗೆಯಿಂದ 500 ಕೋಟಿ ರೂ. ಆದಾಯ ಸರ್ಕಾರಕ್ಕೆ ಬರುತ್ತಿತ್ತು. ಸುಮಾರು 4,000 ಕೋಟಿ ರೂ. ನೇರವಾಗಿ ಆದಾಯ ತಪ್ಪಿ ರುವುದಲ್ಲದೆ, ವಿವಿಧ ತೆರಿಗೆಗಳಿಂದ ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ನಷ್ಟವಾಗಿದೆ ಎಂದು ದೂರಿದ್ದಾರೆ. 8 ಗಣಿ ಕಂಪನಿಗಳ ಗುತ್ತಿಗೆ ನವೀಕರಣ ಅರ್ಜಿಗಳು 10 ವರ್ಷದಿಂದಲೂ ಸಂಬಂಧಪಟ್ಟ ಪ್ರಾಧಿಕಾರದ ಮುಂದೆಯೇ ಇದ್ದವು, ಅಕ್ರಮ ಗಣಿಗಾರಿಕೆ ನಡೆಸಿದ್ದ ಕಾರಣಕ್ಕೆ ಗಣಿ ಗುತ್ತಿಗೆ ನವೀಕರಣದ ಅರ್ಜಿಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳು ಇತ್ಯರ್ಥ ಮಾಡದೆ ಬಾಕಿ ಉಳಿಸಿಕೊಂಡಿದ್ದವು.

ಮೂಲತಃ ಶ್ರೀರಂಗಪಟ್ಟಣದ ರಾಮಮೂರ್ತಿಗೌಡ ಬಿಜೆಪಿ ಯುವ ನಾಯಕ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಭಾರೀ ಭ್ರಷ್ಟಾಚಾರ ಆರೋಪ ಹೊರಿಸಿ ರಾಜಭವನದ ಮೆಟ್ಟಿಲು ಹತ್ತಿರುವ ರಾಮಮೂರ್ತಿಗೌಡ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದವರು. ಶ್ರೀರಂಗ ಪಟ್ಟಣದ ಮಾಜಿ ಶಾಸಕಿಯೊಬ್ಬರ ಹತ್ತಿರದ ಸಂಬಂಧಿ. ಇವರು ಬಿಜೆಪಿ ಯುವ ಮೋರ್ಚಾದಲ್ಲಿ ಸಕ್ರಿಯ ಕಾರ್ಯಕರ್ತರು. ಪ್ರಸ್ತುತ ಬಿಜೆಪಿ ಮತ್ತು ಎಬಿವಿಪಿಯಲ್ಲಿ ತೊಡಗಿಸಿಕೊಂಡಿರುವ ರಾಮಮೂರ್ತಿ, ಬೆಂಗಳೂರಿನಲ್ಲಿ ಪಕ್ಷ ಸಂಘಟನೆಯ ಮುಂಚೂಣಿಯಲ್ಲಿದ್ದಾರೆ.

ವಿಷ ತುಂಬುವ ಪ್ರಯತ್ನ

2015ಕ್ಕಿಂತ ಮೊದಲು ಅಸ್ತಿತ್ವದಲ್ಲಿದ್ದ ಎಂಎಂಡಿಆರ್–1957 ಕಾಯ್ದೆಯಲ್ಲಿ ನವೀಕರಣವು 20 ವರ್ಷಗಳ ಅವಧಿಗೆ ಅನ್ವಯವಾಗುತ್ತಿತ್ತು. ಅದರ ಪ್ರಕಾರ ಸರ್ಕಾರವು ಗಣಿ ಗುತ್ತಿಗೆಯ ನವೀಕರಣಕ್ಕೆ ಫಾರೆಸ್ಟ್ ಕ್ಲಿಯರೆನ್ಸ್‌ನ್ನು ಪಡೆದುಕೊಳ್ಳುವ ಸಲುವಾಗಿ ಮಾತ್ರ ಷರತ್ತುಬದ್ಧ ತಾತ್ವಿಕ ಅನುಮೋದನೆ ನೀಡಲಾಗಿದೆ. 12.01.2015 ರಂದು ಕೇಂದ್ರ ಸರ್ಕಾರವು ಎಂಎಂಡಿಆರ್ ಕಾಯ್ದೆಗೆ ಸುಗ್ರೀವಾಜ್ಞೆ ಮೂಲಕ ತಿದ್ದುಪಡಿಯನ್ನು ತಂದ ಕಾರಣ ವಿವಿಧ ಹಂತದ ಪರಿಶೀಲನೆಗಳನ್ನು ನಡೆಸಿ, 09.02.2015 ರಂದು ಗಣಿ ಗುತ್ತಿಗೆ ನವೀಕರಣಕ್ಕಾಗಿ ನೀಡಿದ್ದ ಷರತ್ತುಬದ್ಧ 8 ಕಂಪನಿಗಳ ತಾತ್ವಿಕ ಅನುಮತಿ ಪತ್ರಗಳು ಊರ್ಜಿತವಲ್ಲ ಎಂದು ತೀರ್ಮಾನಿಸಿ ಅವುಗಳನ್ನು ರದ್ದುಪಡಿಸಿ ತಿದ್ದುಪಡಿ ಕಾಯ್ದೆಯಂತೆ ಕ್ರಮವಹಿಸಲು ಸೂಚಿಸಲಾಯಿತು. ನಂತರ, ಗಣಿ ಇಲಾಖೆಯು ಸಲ್ಲಿಸಿದ ಡೀಮ್ಡ್ ಅವಧಿ ವಿಸ್ತರಣೆ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ರಾಜ್ಯ ಸರ್ಕಾರವು ಒಂದು ಪ್ರಕರಣವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಡೀಮ್ಡ್ ಅವಧಿ ವಿಸ್ತರಣೆಗೆ ಪರಿಗಣಿಸದೆ ರದ್ದುಪಡಿಸಲಾಗಿದೆ. ಉಳಿದ 7 ಪ್ರಕರಣಗಳಿಗೆ ಶಾಸನಬದ್ಧವಾದ ಅರಣ್ಯ, ಪರಿಸರ ಮುಂತಾದ ತೀರುವಳಿ ಪತ್ರಗಳನ್ನು ಹಾಜರುಪಡಿಸುವ, ಬೇಬಾಕಿ ಪತ್ರ ಸಲ್ಲಿಸುವ ಹಾಗೂ ಸಿಬಿಐ, ಎಸ್‌ಐಟಿ ಸೇರಿದಂತೆ ವಿವಿಧ ಸಂಸ್ಥೆಗಳ ತನಿಖೆಯ ಅಂತಿಮ ವರದಿಯನ್ನು ಆಧರಿಸಿ ಸರ್ಕಾರದ ಕ್ರಮಕ್ಕೆ ಬದ್ಧರಾಗಲು ಷರತ್ತು ವಿಧಿಸಿ ಡೀಮ್ಡ್ ಅವಧಿ ವಿಸ್ತರಣೆ ಪತ್ರ ನೀಡಲಾಗಿದೆ.

ಆದರೆ, ಈ 7 ಕಂಪನಿಗಳ ಪೈಕಿ 2 ಕಂಪನಿಗಳು ಶಾಸನಬದ್ಧವಾದ ತೀರುವಳಿಗಳನ್ನು ಸಲ್ಲಿಸದ ಕಾರಣ, ಯಾವುದೇ ಗಣಿಗಾರಿಕೆ ಹಕ್ಕುಗಳನ್ನು ನೀಡಿರುವುದಿಲ್ಲ. ಉಳಿದ 5 ಪ್ರಕರಣಗಳಲ್ಲಿ 3 ಪ್ರಕರಣಗಳನ್ನು ಬಿಜೆಪಿ ಆಡಳಿತದ ಅವಧಿಯಲ್ಲಿ ಅಂದರೆ 2020 ಹಾಗೂ 2021ರಲ್ಲಿ ಗಣಿ ಗುತ್ತಿಗೆ ಹಕ್ಕನ್ನು ನೀಡಲಾಗಿದೆ. ಉಳಿದ ಎರಡು ಪ್ರಕರಣಗಳನ್ನು 2016 ಮತ್ತು 2018ರಲ್ಲಿ ಪೂರಕ ಕರಾರು ಪತ್ರದ ಮುಖಾಂತರ ಷರತ್ತುಬದ್ಧ ಡೀಮ್ಡ್ ವಿಸ್ತರಣೆಯ ಗಣಿ ಗುತ್ತಿಗೆ ಹಕ್ಕನ್ನು ನೀಡಲಾಗಿದೆ. ಹಾಗಾಗಿ, ಈ ಎಲ್ಲಾ 8 ಪ್ರಕರಣಗಳಲ್ಲಿ ಸರ್ಕಾರಕ್ಕೆ ನಯಾಪೈಸೆಯಷ್ಟೂ ನಷ್ಟವಾಗಲಿಲ್ಲ. ಈ ಅವಧಿಯಲ್ಲಿ ಒಂದು ಹಿಡಿಯಷ್ಟೂ ಅದಿರು ತೆಗೆದಿಲ್ಲ. ಈ ಕುರಿತಂತೆ ಹಿಂದೆ ಕೂಡ ವಿರೋಧ ಪಕ್ಷಗಳವರು ಹಾಗೂ ಕೆಲವು ವ್ಯಕ್ತಿಗಳು ಹಲವು ಸಂಸ್ಥೆಗಳಲ್ಲಿ ಪ್ರಕರಣಗಳನ್ನು ದಾಖಲಿಸಿದ್ದರು. ಈ ದೂರುಗಳಲ್ಲಿ ಯಾವುದೇ ಹುರುಳಿಲ್ಲವೆಂದು ದೂರುಗಳನ್ನು ಮುಕ್ತಾಯಗೊಳಿಸಲಾಗಿದೆ. ವಿರೋಧ ಪಕ್ಷಗಳವರು ಸದರಿ ವಿಚಾರವನ್ನು ಸದನದಲ್ಲೂ ಪ್ರಶ್ನಿಸಿದ್ದರು. ಈಗಿನ ಕೇಂದ್ರದ ಭಾರೀ ಕೈಗಾರಿಕೆ ಮತ್ತು ಉಕ್ಕು ಮಂತ್ರಿಯಾಗಿರುವ ಕುಮಾರಸ್ವಾಮಿಯವರು ದಿನಾಂಕ: 14.01.2018ರಂದು ಪತ್ರಿಕಾಗೋಷ್ಠಿಯನ್ನೂ ಮಾಡಿದರು.

ಆದರೆ, ಈ ಯಾವುದೇ ಪ್ರಕರಣಗಳಲ್ಲಿ ಹುರುಳೇ ಇರಲಿಲ್ಲ. ಏಕೆಂದರೆ, ಈ ಎಲ್ಲಾ 8 ಪ್ರಕರಣಗಳನ್ನು ಹೊಸ ಸುಗ್ರೀವಾಜ್ಞೆಯ ನಿಯಮಾವಳಿಗಳಿಗೆ ಅನುಗುಣವಾಗಿ ಕ್ರಮವಹಿಸಲಾಗಿದೆ. ಅವಧಿ ಮುಗಿದ ಗಣಿ ಗುತ್ತಿಗೆಗಳನ್ನು ನಂತರ ನಿಯಮಾನುಸಾರ ಹರಾಜಿಗೆ ಒಳಪಡಿಸಿ ವಿಲೇ ಮಾಡಲಾಗಿದೆ. ಸುಮಾರು 10 ವರ್ಷಗಳ ನಂತರ ಈ ಪ್ರಕರಣವನ್ನು ರಾಜಕೀಯ ದುರುದ್ದೇಶದಿಂದ ಜಗಿಯಲು ಪ್ರಾರಂಭಿಸಿದ್ದಾರೆ. ಹುರುಳಿಲ್ಲದ ವಿಷಯಕ್ಕೆ ವಿಷ ತುಂಬಿ ನಾಡಿನ ಜನರ ಮೆದುಳನ್ನು ಕಲುಷಿತಗೊಳಿಸಲು ಹೊರಟಿರುವ ದುಷ್ಟ ರಾಜಕೀಯ ಪಿತೂರಿಗಳನ್ನು ನಾಡಿನ ಪ್ರಜ್ಞಾವಂತ ಜನ ನಂಬಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ಅದ್ದೂರಿ ಶ್ರೀಕಂಠೇಶ್ವರನ ಗೌತಮ ಪಂಚ ಮಹಾರಥೋತ್ಸವ

ಸಿಸಿ ಕ್ಯಾಮರಾ ಅಳವಡಿಕೆ: ಸುರಕ್ಷತೆ ದೃಷ್ಟಿಯಿಂದ ನಗರದ ಆಯಕಟ್ಟಿನ ಪ್ರದೇಶಗಳಲ್ಲಿ ಹೆಚ್ಚುವರಿ ಸಿಸಿ ಕ್ಯಾಮರಾಗಳನ್ನು ಅವಳವಡಿಸಲಾಗಿತ್ತು. ಅಲ್ಲದೆ ಹೆಚ್ಚಿನ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಹಲವು ಸಂಘ–ಸಂಸ್ಥೆಗಳು ಪ್ರಸಾದ ವಿತರಣೆ, ಪಾನಕ, ಮಜ್ಜಿಗೆ, ಐಸ್‌ಕ್ರೀಮ್, ಚಾಕೊಲೇಟ್, ಬಾತು, ಮೊಸರನ್ನ ವಿತರಿಸಿದರು.

ಜಾತ್ರೋತ್ಸವದ ಅಂಗವಾಗಿ ಕಳೆದ ಬುಧವಾರದಿಂದಲೇ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಪ್ರಾರಂಭವಾಗಿ ದೇವತಾ ಕಾರ್ಯಗಳು ಮುಂದುವರಿದು ಇಂದು ಗೌತಮ ಪಂಚ ರಥೋತ್ಸವ ನೆರವೇರಿತು. ಏ.11ರಂದು ಚೂರ್ಣೋತ್ಸವ, ಅವಭೃತ ತೀರ್ಥಸ್ನಾನ, ರಾತ್ರಿ 7 ಗಂಟೆಗೆ ತೆಪ್ಪೋತ್ಸವ ನಂತರ ನರಾಂಧೂಳಿಕಾರೋಹಣೋತ್ಸವ, ಧ್ವಜಾರೋಹಣ, ಏ.12ರಂದು ಪೌರ್ಣಿಮೆ ಅಂಗವಾಗಿ ಪುಷ್ಪಯಾಗಪೂರ್ವಕ ಪಂಚೋಪರಾಪೂರ್ವಕ ಕೈಲಾಸಯಾನಾ ರೋಹಣೋತ್ಸವ, ಏ.13ರಂದು ಮಹಾಸಂಪ್ರೋಕ್ಷಣೆ ಪೂರ್ವಕ ನಂದಿವಾಹನೋತ್ಸವ, ಶಯನೋತ್ಸವದೊಂದಿಗೆ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ. ಇದೇ ಸಂದರ್ಭ ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ, ಕಾಂಪೋಸ್ಟ್ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಖಾದಿ ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಕೃಷ್ಣಪ್ಪಗೌಡ, ಜಿಪಂ ಮಾಜಿ ಸದಸ್ಯ ಎಸ್‌ಎಂ ಕೆಂಪಣ್ಣ, ಮುಖಂಡರಾದ ಕುಂಬ್ರಳ್ಳಿ ಸುಬ್ಬಣ್ಣ, ಎಸ್ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉಪ್ಪಿನಹಳ್ಳಿ ಶಿವಣ್ಣ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದರು. ದೇವಾಲಯದ ಇಓ ಜಗದೀಶ್, ಎಇಒ ಸತೀಶ್, ಎಸ್‌ಪಿ ವಿಷ್ಣುವರ್ಧನ ಸೇರಿದಂತೆ ಹಲವು ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

ಜಾತ್ರೆ ಯಶಸ್ಸಿಗೆ ಸಾರ್ವಜನಿಕರ ಮೆಚ್ಚುಗೆ

ಕಳೆದ ಕೆಲವು ವರ್ಷಗಳಲ್ಲಿ ಗೌತಮ ರಥದ ದೊಡ್ಡ ಹಗ್ಗ ತುಂಡಾಗುವುದು, ರಥದ ಚಕ್ರಗಳು ಮುರಿಯುವುದು ಸೇರಿದಂತೆ ಹಲವು ಅವಘಡಗಳು ಸಂಭವಿಸಿತ್ತು. ಜಾತ್ರೆಯನ್ನು ಸಂಪೂರ್ಣವಾಗಿ ಯಶಸ್ವಿಗೊಳಿಸಬೇಕು ಎಂಬ ಸದುದ್ದೇಶದಿಂದ ಶಾಸಕ ದರ್ಶನ್ ಜಾತ್ರೆಗೂ 45 ದಿನಗಳ ಮುನ್ನವೇ ಪೂರ್ವಭಾವಿ ಸಭೆ ನಡೆಸಿ ಜಾತ್ರೆಯನ್ನು ಯಶಸ್ವಿಯಾಗಿ ನಡೆಸುವಂತೆ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದರು. ಅಲ್ಲದೆ ಮತ್ತೊಂದು ಸಭೆ ನಡೆಸಿ ಜಾತ್ರೆಯ ಪೂರ್ವ ತಯಾರಿಯನ್ನು ಖುದ್ದಾಗಿ ವೀಕ್ಷಣೆ ನಡೆಸಿದ್ದರು. ಪರಿಣಾಮವಾಗಿ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಯಶಸ್ವಿಯಾಗಿ ಜರುಗಿದ್ದರಿಂದ ಪ್ರಮುಖವಾಗಿ ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಛತೆಗೆ ಆದ್ಯತೆ ನೀಡಿರುವುದರಿಂದ ಸಾರ್ವಜನಿಕರಿಂದ ಪ್ರಶಂಸೆಗೆ ಪಾತ್ರವಾಯಿತು.

ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ರಾಜ್ಯಪಾಲರು

ಪ್ರಕರಣದಲ್ಲಿ ಅಂದು ಸಚಿವರಾಗಿದ್ದ ನಾಗೇಂದ್ರ ಅವರ ಹೆಸರು ಕೇಳಿಬಂದಿತ್ತು. ಹೀಗಾಗಿ ನಾಗೇಂದ್ರ ಅವರು 2024ರ ಜೂನ್ 6ರಂದು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಬಳಿಕ ಇಡಿ ಅಧಿಕಾರಿಗಳು ನಾಗೇಂದ್ರ ಅವರನ್ನು ಬಂಧಿಸಿ ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಿದ್ದರು. ನಂತರ ನಾಗೇಂದ್ರ ಜಾಮೀನಿನ ಮೇಲೆ ಜೈಲಿನಿಂದ ಆಚೆ ಬಂದಿದ್ದು, ಮತ್ತೆ ಸಚಿವರಾಗಲು ಕಸರತ್ತು ನಡೆಸಿದ್ದರು. ಖುದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ನಾಗೇಂದ್ರ ಅವರನ್ನು ಶೀಘ್ರವೇ ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳಲಾಗುವುದು ಎಂದು ಬಹಿರಂಗವಾಗಿಯೇ ಹೇಳಿಕೆ ನೀಡಿದ್ದರು. ಹೀಗಾಗಿ ನಾಗೇಂದ್ರ ಸಹ ಮತ್ತೆ ಸಚಿವರಾಗಲು ಉತ್ಸುಕರಾಗಿದ್ದರು. ಇದರ ಮಧ್ಯ ರಾಜ್ಯಪಾಲರು ನಾಗೇಂದ್ರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ. ಇದರಿಂದ ನಾಗೇಂದ್ರಗೆ ಮತ್ತೆ ಇಡಿ ಆತಂಕ ಎದುರಾಗಿದೆ.

4,970 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದ್ದ ಇಡಿ: ವಾಲ್ಮೀಕಿ ನಿಗಮ ಹಗರಣದ ತನಿಖೆ ನಡೆಸಿದ್ದ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಇತ್ತೀಚೆಗೆ ಚಾರ್ಜ್‌ಶೀಟ್ ಸಲ್ಲಿಸಿದ್ದರು. 187 ಕೋಟಿ ರೂ. ಹಗರಣ ಸಂಬಂಧ 4ಸಾವಿರದ 970 ಪುಟಗಳ ಚಾರ್ಜ್‌ಶೀಟ್ ಜೊತೆಗೆ 144 ಪುಟಗಳ ದೂರು ಸಲ್ಲಿಸಿದ್ದರು. ಇಡಿ ಚಾರ್ಜ್‌ಶೀಟ್‌ನಲ್ಲಿ ಮಾಜಿ ಸಚಿವ ನಾಗೇಂದ್ರ ಎ1 ಆಗಿದ್ದರು. ನಾಗೇಂದ್ರ ಮತ್ತು ಆತನ ಗ್ಯಾಂಗ್ ಅಕ್ರಮ ನಡೆಸಿರುವುದು ಇಡಿ ತನಿಖೆಯಲ್ಲಿ ದೃಢವಾಗಿತ್ತು. 187 ಕೋಟಿಯಲ್ಲಿ ರೂ. ಒಟ್ಟು 84 ಕೋಟಿ ರೂ. ಅಕ್ರಮ ವಹಿವಾಟು ನಡೆಸಿರುವ ಬಗ್ಗೆ ದೋಷಾರೋಪಣಾ ಪಟ್ಟಿಯಲ್ಲಿ ಉಲ್ಲೇಖಿಸಲಾಗಿತ್ತು. ಅಕ್ರಮವಾಗಿ ಹಣ ಬಳಸಲು ನಾಗೇಂದ್ರ ಒಳಸಂಚು ಮಾಡಿದ್ದಾರೆ. ಜೊತೆಗೆ ಸಾಕ್ಷಿ ನಾಶ ಮಾಡಲು ಸಂಚು ರೂಪಿಸಿದ್ದಾರೆ ಅಂತಾ ಚಾರ್ಜ್‌ಶೀಟ್‌ನಲ್ಲಿ ತಿಳಿಸಲಾಗಿತ್ತು. ಇನ್ನೂ ಬಳ್ಳಾರಿ ಲೋಕಸಭಾ ಚುನಾವಣೆಗೆ ನಿಗಮದ ಹಣ ಬಳಕೆ ಮಾಡಿರುವುದು ತನಿಖೆಯಿಂದ ಗೊತ್ತಾಗಿತ್ತು.

ಪ್ರಕರಣದ ಎಂಟನೇ ಆರೋಪಿ ನಾಗೇಂದ್ರ ಪಿಎಂ ವಿಜಯ್‌ಕುಮಾರ್ ಮೊಬೈಲ್‌ನಲ್ಲಿ ಚುನಾವಣೆಗೆ ಹಣ ಬಳಕೆ ಮಾಡಿದ ಸಂಬಂಧ ದಾಖಲೆ ಸಿಕ್ಕಿತ್ತು. 20 ಕೋಟಿ 19 ಲಕ್ಷ ರೂಪಾಯಿಯ ಹಣದ ಬಂಡಲ್ ಇರುವ ಫೋಟೋಗಳು ಮತ್ತು ಪ್ರತಿ ಬೂತ್‌ಗೂ ಹಣ ಹಂಚಿರುವ ಬಗ್ಗೆ ದಾಖಲೆ ಲಭ್ಯವಾಗಿದ್ದವು.

ಚೆಕ್‌ಬೌನ್ಸ್ ಕೇಸ್‌ನಲ್ಲಿ ನಾಗೇಂದ್ರಗೆ ಶಿಕ್ಷೆ

ಚುಂಡೂರು ಭಾಸ್ಕರ್ ಪಾಲುದಾರಿಕೆಯ ಬಿ.ಸಿ. ಇನ್ಫ್ರಾಸ್ಟ್ರಕ್ಚರ್ ಅಂಡ್ ರಿಸೋರ್ಸ್ ಕಂಪನಿ ನಡುವೆ 2013ರಿಂದಲೂ ಹಣಕಾಸು ವಿವಾದವಿತ್ತು. ವಿಎಸ್‌ಎಲ್ ಕಂಪೆನಿ ಪರವಾಗಿ ಕೋರ್ಟ್ ಆದೇಶ ನೀಡಿದ್ದು, ಬಿ.ನಾಗೇಂದ್ರ ಪಾಲುದಾರಿಕೆಯ ಕಂಪೆನಿ ಒಟ್ಟು 2 ಕೋಟಿ 53 ಲಕ್ಷ ಪಾವತಿಸಬೇಕಿತ್ತು. ಇದರ ಭಾಗವಾಗಿ 1 ಕೋಟಿ ರೂಪಾಯಿಯ ಚೆಕ್ ಅನ್ನು ನೀಡಲಾಗಿತ್ತು. ಆದರೆ, 2022ರಲ್ಲಿ ಚೆಕ್‌ಬೌನ್ಸ್ ಆದ ಹಿನ್ನಲೆಯಲ್ಲಿ ವಿಎಸ್‌ಎಲ್ ಸ್ಟೀಲ್ಸ್ ಲಿಮಿಟೆಡ್ ಕೇಸ್ ದಾಖಲಿಸಿತ್ತು. ಸಾಕ್ಷ್ಯ ವಿಚಾರಣೆ ಬಳಿಕ ಕೋರ್ಟ್ ತೀರ್ಪು ನೀಡಿದ್ದು, 1 ಕೋಟಿ 23 ಲಕ್ಷ ದಂಡ ಪಾವತಿಸುವಂತೆ ಆದೇಶ ನೀಡಿದೆ. ಇದರಲ್ಲಿ 10 ಸಾವಿರ ಸರ್ಕಾರಕ್ಕೆ ಉಳಿದ ಹಣ ದೂರುದಾರ ಕಂಪೆನಿಗೆ ಪಾವತಿಸುವಂತೆ ಕೋರ್ಟ್ ಆದೇಶ ನೀಡಿದೆ. ತಪ್ಪಿದಲ್ಲಿ 1 ವರ್ಷ ಸೆರೆವಾಸದ ಶಿಕ್ಷೆ ಅನುಭವಿಸಬೇಕೆಂದು ಆದೇಶದಲ್ಲಿ ಕೋರ್ಟ್ ಸ್ಪಷ್ಟಪಡಿಸಿದೆ.

ನಕಲಿ ದಾಖಲೆ ಸೃಷ್ಟಿಸಿ ಮಾಡೆಲ್ ಹೌಸ್‌ಗೆ ಪೌತಿ ಖಾತೆ ನೀಡಿಕೆ

ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡಿದ್ದಾರೆ. ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ (CITB) ಯಿಂದ 1982ರ ನವೆಂಬರ್ 2ರಂದು ಮೈಸೂರಿನ ಗೋಕುಲಂ 3ನೇ ಹಂತದ ಮನೆ (ಮಾಡೆಲ್ ಹೌಸ್) ಸಂಖ್ಯೆ 867 (30X40) ಅನ್ನು ಜಯಲಕ್ಷ್ಮಿಪುರಂನ ಲಿನಿಯನ್ ಶಾರದಾ ಜೋಸೆಫ್ ಎಂಬುವರಿಗೆ ಮಂಜೂರು ಮಾಡಿ ಪೂರ್ಣ ಹಣ ಪಾವತಿಸಿಕೊಂಡು ಕರಾರು ಪತ್ರ, ದೃಢೀಕರಣ ಪತ್ರ ಸೇರಿದಂತೆ ಎಲ್ಲಾ ದಾಖಲೆಗಳನ್ನೂ ನೀಡಲಾಗಿತ್ತು. ಮನೆ ಮಂಜೂರಾತಿದಾರರು 1983ರ ಸೆಪ್ಟೆಂಬರ್ 3ರಂದು ಮರಣ ಹೊಂದಿದ್ದಾರೆ. ಆದರೆ 2024ರ ಮಾರ್ಚ್ 26ರಂದು ಮೃತರ ಕಾನೂನುಬದ್ಧ ವಾರಸು ದಾರರಲ್ಲದ ಸಿವಿಲ್ ಮಾರ್ಕಸ್ ಜೋಸೆಫ್ ಎಂಬುವರಿಗೆ ನಕಲಿ ವಂಶವೃಕ್ಷ, ಆಧಾರ್ ಸೃಷ್ಟಿಸಿ ಪೌತಿ ಖಾತೆ ಮಾಡಿಕೊಡಲಾಗಿದೆ ಎಂದು ನಾಗೇಂದ್ರ ದೂರಿನಲ್ಲಿ ತಿಳಿಸಿದ್ದರು. ಅಲ್ಲದೇ ಆ ಮನೆಗೆ ಹೊಂದಿಕೊಂಡಂತಿರುವ ತುಂಡು ಜಾಗವನ್ನೂ ಮಂಜೂರು ಮಾಡಿ ಅಕ್ರಮವಾಗಿ ಕ್ರಯಪತ್ರ ನೋಂದಣಿ ಮಾಡಿಕೊಟ್ಟು ನಂತರ ಸಿವಿಲ್ ಮಾರ್ಕಸ್ ಜೋಸೇಫ್‌ರಿಂದ ಸದರಿ ಆಸ್ತಿಯನ್ನು ಎಂ.ಮಮತ ಮತ್ತು ಟಿ.ಶ್ಯಾಂ ಎಂಬುವರಿಗೆ ಮುಡಾ ಅಧಿಕಾರಿಗಳೇ ಮುಂದೆ ನಿಂತು ಮಾರಾಟ ಮಾಡಿಸಿದ್ದಾರೆ ಎಂದು ದೂರಿನಲ್ಲಿ ಆರೋಪಿಸಿ, ಸೃಷ್ಟಿಸಿರುವ ನಕಲಿ ದಾಖಲೆ ಪ್ರತಿಗಳನ್ನು ಸಲ್ಲಿಸಲಾಗಿತ್ತು. ದೂರಿನ ಮೇರೆಗೆ ಮೂಲ ಕಡತ ಪರಿಶೀಲಿಸಿದ ಮುಡಾ ಆಯುಕ್ತರು, ತನಿಖೆ ನಡೆಸಿ ವರದಿ ನೀಡುವಂತೆ ಕಾರ್ಯದರ್ಶಿ ಪ್ರಸನ್ನ ಕುಮಾರ್ ಅವರಿಗೆ ನಿರ್ದೇಶನ ನೀಡಿದ್ದರು. ವಿಚಾರಣೆ ನಡೆಸಿದ ಕಾರ್ಯದರ್ಶಿಗಳು, ಕ್ರಯಪತ್ರ ನೀಡುವ ಹಾಗೂ ಅನುಮೋದಿಸುವ ಅಧಿಕಾರವನ್ನು ಪ್ರಾಧಿಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ್ದು, ಅವರ ಅನುಮೋದನೆ ಪಡೆಯದೇ ಗೋಕುಲಂ 3ನೇ ಹಂತ ಬಡಾವಣೆಯ ಮನೆ (Model House) ಸಂಖ್ಯೆ 867ಯ ತಿದ್ದುಪಡಿ ಕ್ರಯ ಪತ್ರವನ್ನು ಕಚೇರಿ ವ್ಯವಸ್ಥಾಪಕ ಸೋಮಸುಂದ್ರು ಹಾಗೂ ವಿಶೇಷ ತಹಶೀಲ್ದಾರ್ ಕೆ.ವಿ.ರಾಜಶೇಖರ್ ನೀಡಿದ್ದಾರೆ ಎಂದು ವರದಿ ನೀಡಿದ್ದರು. ಆಯುಕ್ತರು, ಕಾರ್ಯದರ್ಶಿಗಳ ಅನುಮೋದನೆ ಪಡೆಯದೇ ತಮ್ಮ ಹಂತದಲ್ಲೇ ಕ್ರಯಪತ್ರ ನೀಡಿ ಅಧಿಕಾರ ದುರುಪಯೋಗಪಡಿಸಿಕೊಂಡಿರುವ ಅವರ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಪ್ರಸನ್ನಕುಮಾರ್ ವರದಿಯಲ್ಲಿ ತಿಳಿಸಿದ ಹಿನ್ನೆಲೆಯಲ್ಲಿ ಕರ್ತವ್ಯ ಲೋಪವೆಸಗಿದ ಕಾರಣ ಕಮಿಷ್ನರ್ ಎ.ಎನ್.ರಘುನಂದನ್ ಅವರು ಸೋಮಸುಂದ್ರುನನ್ನು ಸೇವೆಯಿಂದ ಅಮಾನತುಪಡಿಸಿ ಇಂದು ಸಂಜೆ ಆದೇಶ ಹೊರಡಿಸಿದ್ದಾರೆ.

ಮೈಸೂರಲ್ಲಿ ನವಜಾತ ಹೆಣ್ಣು ಶಿಶುವಿನ ಶವ ಪತ್ತೆ

ಮೈಸೂರು,ಏ.9(ಪಿಎಂ)–ಮೈಸೂರಿನ ಲಕ್ಷ್ಮಿಕಾಂತನಗರದ ಮಾರಿಗುಡಿ ಸಮೀಪ ಬುಧವಾರ ಬೆಳಗ್ಗೆ ನವಜಾತ ಹೆಣ್ಣು ಶಿಶುವಿನ ಶವ ಪತ್ತೆಯಾಗಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಹೆಬ್ಬಾಳ ಠಾಣೆ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ. ಬೆಳಗ್ಗೆ ನವಜಾತ ಶಿಶು ಶವ ಕಂಡ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಬಂದ ಪೊಲೀಸರು ಪರಿಶೀಲಿಸಿ ನಡೆಸಿ ಮುಂದಿನ ಕ್ರಮ ವಹಿಸಿದರು. ಸುಮಾರು 4ರಿಂದ 6 ತಿಂಗಳ ಶಿಶು ಇರಬೇಕೆಂದು ಪೊಲೀಸರು ಶಂಕಿಸಿದ್ದಾರೆ. ಮಹಿಳಾ–ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿ, ತಾಯಿಗಾಗಿ ತನಿಖೆ ಮುಂದುವರಿಸಿದ್ದೇವೆ ಎಂದು ಪೊಲೀಸರು ತಿಳಿಸಿದರು.

ಮೈಸೂರು ಮಿತ್ರ

ಗುರುವಾರ 10 ಏಪ್ರಿಲ್ 2025

ಮಕ್ಕಳಿಂದ ಶಾಲಾ ಶೌಚಾಲಯ ಸ್ವಚ್ಛಗೊಳಿಸುವುದು ನಿಷಿದ್ಧ



ಸಂಗ್ರಹ ಚಿತ್ರ

> ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ಸ್ವಚ್ಛತೆಯನ್ನು ವಿದ್ಯಾರ್ಥಿಗಳಿಂದ ನಿರ್ವಹಣೆ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ನಿಷೇಧವಿದ್ದರೂ ನಿರ್ಲಕ್ಷ್ಯ ತೋರುವ ಶಿಕ್ಷಕರು, ಮುಖ್ಯ ಶಿಕ್ಷಕರ ವಿರುದ್ಧ ಶಿಸ್ತು ಕ್ರಮವಹಿಸಲಾಗುವುದು.
> **–ಡಾ.ಕೆ.ವಿ.ತ್ರಿಲೋಕ ಚಂದ್ರ, ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ**

> ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶೌಚಾಲಯ ಸ್ವಚ್ಛತೆಗೆ ವಿದ್ಯಾರ್ಥಿಗಳನ್ನು ಬಳಸಿಕೊಳ್ಳುವಂತಿಲ್ಲ. ಬದಲಾಗಿ, ಶೌಚಾಲಯ ನಿರ್ವಹಣೆಗೆ ಎಸ್‌ಡಿಎಂಸಿ ಅಧ್ಯಕ್ಷರು, ಉಪಾಧ್ಯಕ್ಷರು ಮೂಲಕ ಸ್ಥಳೀಯ ಗ್ರಾಮ ಪಂಚಾಯಿತಿ ಮೂಲಕ ಶೌಚಾಲಯ ಸ್ವಚ್ಛಗೊಳಿಸಬೇಕು.
> **–ಯುಕೇಶ್ ಕುಮಾರ್, ಸಿಇಒ, ಜಿಲ್ಲಾ ಪಂಚಾಯತ್, ಮೈಸೂರು**

ಮೈಸೂರು, ಏ.9(ಎಸ್‌ಪಿಎನ್)– ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಶೌಚಾಲಯಗಳ ಸ್ವಚ್ಛತೆ ಮಾಡಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿ ಶಾಲಾ ಶಿಕ್ಷಣ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ಸಂಬಂಧಿಸಿದ ಶಾಲಾ ಶಿಕ್ಷಣ ಇಲಾಖಾಧಿಕಾರಿಗಳು ಮತ್ತು ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ ಸುತ್ತೋಲೆ ಮುಖಾಂತರ ಈ ಹಿಂದೆ ತಿಳಿಸಲಾಗಿದ್ದರೂ ವಿದ್ಯಾರ್ಥಿಗಳಿಂದ ಶೌಚಾಲಯಗಳ ಸ್ವಚ್ಛತೆಯಲ್ಲಿ ತೊಡಗಿಸುತ್ತಿರುವ ಪ್ರಕರಣಗಳು ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿರುವುದನ್ನು ಇಲಾಖೆ ಈ ಬಾರಿ ಗಂಭೀರವಾಗಿ ಪರಿಗಣಿಸಿದೆ.

ಈ ವಿಷಯದಲ್ಲಿ ಸರ್ಕಾರ ಮತ್ತು ಶಾಲಾ ಶಿಕ್ಷಣ ಇಲಾಖೆಯಿಂದ ಕಾಲ-ಕಾಲಕ್ಕೆ ಹೊರಡಿಸಲಾಗುವ ಸೂಚನೆ ಮತ್ತು ನಿರ್ದೇಶನಗಳನ್ನು ಚಾಚೂ ತಪ್ಪದೇ ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದರೂ ಉಲ್ಲಂಘನೆಯಾಗುವುದನ್ನು ಗಂಭೀರವಾಗಿ ಪರಿಗಣಿಸಿ, ಇಂತಹ ಘಟನೆಗಳ ಕುರಿತು ನಿರ್ಲಕ್ಷ್ಯ ಮನಸ್ಥಿತಿ ಹೊಂದಿರುವ ಅಧಿಕಾರಿಗಳ ವಿರುದ್ಧ ಆಯುಕ್ತರು ಬೇಸರ ವ್ಯಕ್ತಪಡಿಸಿದ್ದಾರೆ.

ಹಾಗಾಗಿ ಇಂತಹ ಘಟನೆಗಳು ಮತ್ತೆ ಮರುಕಳಿಸಿದ್ದಲ್ಲಿ ಅಂತಹವರ ವಿರುದ್ಧ ಇಲಾಖಾ ವತಿಯಿಂದ ನಿಯಮಾನುಸಾರ ಕಠಿಣ ಕಾನೂನು ಕ್ರಮಗಳನ್ನು ಕೈಗೊಂಡು, ಇಲಾಖಾಧಿಕಾರಿಗಳು, ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಮುಖ್ಯ ಶಿಕ್ಷಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ, ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದಿದ್ದಾರೆ.

ಪೆರಿಫೆರಲ್ ರಿಂಗ್ ರಸ್ತೆ; ಡಿಪಿಆರ್‌ಗೆ ಮುಡಾದಿಂದ ಟೆಂಡರ್





> ಮುಂದಿನ 40–50 ವರ್ಷಗಳಲ್ಲಿ ವಾಹನ ಸಂಚಾರ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು ಮೈಸೂರಲ್ಲಿ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಿಸಲು ನಿರ್ಧರಿಸಿ, ಈಗಾಗಲೇ ಪ್ರಾಧಿಕಾರದ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಡಿಪಿಆರ್ ತಯಾರಿಸಲು 7.75 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ. ಅದಕ್ಕಾಗಿ ಗ್ಲೋಬಲ್ ಟೆಂಡರ್ ಅನ್ನೂ ಕರೆಯಲಾಗಿದ್ದು, ಅರ್ಹ ಬಿಡ್ಡುದಾರರಿಗೆ ಕಾರ್ಯಾದೇಶ ನೀಡಲಾಗುತ್ತದೆ. ಡಿಪಿಆರ್ ಸಿದ್ಧವಾದ ಬಳಿಕವಷ್ಟೇ ಭೂಸ್ವಾಧೀನ, ರಸ್ತೆ ನಿರ್ಮಾಣ ವೆಚ್ಚ ತಿಳಿಯಲಿದೆ.
> **–ಎ.ಎನ್.ರಘುನಂದನ್, ಮುಡಾ ಆಯುಕ್ತ**



ಮೈಸೂರು,ಏ.9(ಆರ್‌ಕೆ)–ರಾಜ್ಯ ರಾಜಧಾನಿ ಬೆಂಗಳೂರನ್ನು ಹೊರತುಪಡಿಸಿದರೆ, ಮೈಸೂರು ಅತೀ ವೇಗವಾಗಿ ಬೆಳೆಯುತ್ತಿರುವ ನಗರವಾಗಿರುವುದರಿಂದ ಪ್ರಸ್ತುತ ಬಳಕೆಯಾಗುತ್ತಿರುವ ಹೊರ ವರ್ತುಲ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚಾಗುತ್ತಿರುವ ಕಾರಣ ಮತ್ತೊಂದು ಪೆರಿಫೆರಲ್ ರಿಂಗ್ ರೋಡ್ (ಪಿಆರ್‌ಆರ್) ನಿರ್ಮಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಮುಂದಾಗಿದೆ.

ಪೆರಿಫೆರಲ್ ರಿಂಗ್ ರಸ್ತೆ (ಹೊರ ಪರಿಧಿ ರಸ್ತೆ)ಗೆ ಸಮಗ್ರ ಯೋಜನಾ ವರದಿ (Detailed Project Report) ತಯಾರಿಸಲು ನುರಿತ ಇಂಜಿನಿಯರಿಂಗ್ ಕಂಪನಿಗಳಿಂದ ಟೆಂಡರ್ ಆಹ್ವಾನಿಸಿರುವ ಮುಡಾ, ಈಗಾಗಲೇ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿರುವ ಟೆಂಡರ್‌ಗಳನ್ನು ತೆರೆದು ಅರ್ಹ ಬಿಡ್ಡುದಾರರಿಗೆ ಡಿಪಿಆರ್ ತಯಾರಿಸಲು ಕಾರ್ಯಾದೇಶ ನೀಡಲಿದೆ.

ಡಿಪಿಆರ್ ತಯಾರಿಕೆಗೆ ಪ್ರಸಕ್ತ ಸಾಲಿನ ಮುಡಾ ಬಜೆಟ್‌ನಲ್ಲಿ 7.75 ಕೋಟಿ ರೂ. ಅನುದಾನವನ್ನು ಕಾಯ್ದಿರಿಸಲಾಗಿದೆ. 105.31 ಕಿ.ಮೀ. ಉದ್ದ, 45 ಮೀ. ಅಗಲದ ಪೆರಿಫೆರಲ್ ರಿಂಗ್ ರಸ್ತೆಯು 3+3 ಮುಖ್ಯ ಲೇನ್ ಹಾಗೂ ಎರಡೂ ಕಡೆ ಸರ್ವಿಸ್ ರಸ್ತೆ ಹೊಂದಿರುತ್ತದೆ.

ಪ್ರಮುಖ ಪ್ರವಾಸಿತಾಣವಾಗಿರುವ ಮೈಸೂರು ನಗರಕ್ಕೆ ದೇಶ, ವಿದೇಶಗಳಿಂದ ಪ್ರತೀ ವರ್ಷ 40 ಲಕ್ಷಕ್ಕಿಂತ ಹೆಚ್ಚು ಪ್ರವಾಸಿಗರು ಬರುತ್ತಿದ್ದು, ಹಾಲಿ ಇರುವ ಹೊರ ವರ್ತುಲ ರಸ್ತೆ ಮೇಲೆ ಒತ್ತಡ ಜಾಸ್ತಿಯಾಗಿದೆ. ಮೈಸೂರು ಸುತ್ತಮುತ್ತ 6 ಕೈಗಾರಿಕಾ ವಲಯಗಳಿವೆಯಲ್ಲದೆ, ನಂಜನಗೂಡು ಭಾಗದಲ್ಲೂ ಕೈಗಾರಿಕಾ ಬಡಾವಣೆಗಳು ಕಾರ್ಯನಿರ್ವಹಿಸುತ್ತಿರುವ ಜೊತೆಗೆ ಸೆಮಿ ಕಂಡಕ್ಟರ್ ಯೋಜನೆಯೂ ಅನುಮೋದನೆಯಾಗಿರುವುದರಿಂದ ಭವಿಷ್ಯದಲ್ಲಿ ವಾಹನ ಸಂಚಾರ ದಟ್ಟಣೆ ಜಾಸ್ತಿಯಾಗಲಿದೆ.

ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಬುಲೆಟ್ ಟ್ರೇನ್, ಮೈಸೂರು–ಮಂಗಳೂರು ರಸ್ತೆ ಅಗಲೀಕರಿಸಿ, ಮೇಲ್ದರ್ಜೆಗೇರಿಸುವ ಉದ್ದೇಶವಿದ್ದು, ಮೈಸೂರು–ಕುಶಾಲನಗರ ಎಕ್ಸ್‌ಪ್ರೆಸ್ ವೇ ಕಾಮಗಾರಿಗೂ ಸಿದ್ಧತೆ ನಡೆಸುತ್ತಿರುವುದರಿಂದ ಮೈಸೂರು ನಗರಕ್ಕೆ ಪೆರಿಫೆರಲ್ ರಿಂಗ್ ರೋಡ್ ಅವಶ್ಯವೆನಿಸಿದೆ. ಟೆಂಡರ್‌ದಾರ ಕಂಪನಿಯು ಪೆರಿಫೆರಲ್ ರಿಂಗ್ ರಸ್ತೆಗೆ ಗುರ್ತಿಸಿರುವ ಸ್ಥಳ ಪರಿಶೀಲಿಸಿ ಹಾಲಿ ಇರುವ ರಸ್ತೆ, ಸೇತುವೆಗಳನ್ನು ಬಳಸಿಕೊಂಡು, ಕೆರೆ ಅರಣ್ಯ ಪ್ರದೇಶ, ವಿದ್ಯುತ್ ಸ್ಥಾವರ, ಗ್ರಾಮ, ಕಾಲುವೆಗಳಿರುವ ಕಡೆ ಪೆರಿಫೆರಲ್ ರಿಂಗ್ ರೋಡ್ ಹಾದು ಹೋಗಬೇಕೆಂದರೆ ಸ್ಥಳಾಂತರ, ಭೂಸ್ವಾಧೀನ ವೆಚ್ಚ, ಮೇಲ್ಸೇತುವೆ, ಸರ್ವೀಸ್ ರಸ್ತೆ ಸೇರಿದಂತೆ ಮೂಲಸೌಕರ್ಯ ಕಲ್ಪಿಸಲು ತಗಲುವ ವೆಚ್ಚ ಇತ್ಯಾದಿ ಮಾಹಿತಿಗಳೊಂದಿಗೆ ಸಮಗ್ರ ಯೋಜನಾ ವರದಿ ತಯಾರಾಗಲಿದೆ.

ನಂತರ ಡಿಪಿಆರ್‌ನೊಂದಿಗೆ ಪ್ರಸ್ತಾವನೆಗೆ ಪ್ರಾಧಿಕಾರದ ಸಭೆಯಲ್ಲಿ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಿ ಅನುಮತಿ ಪಡೆದ ನಂತರ ಯೋಜನೆ ಅನುಷ್ಠಾನಗೊಳಿಸಲು ಭೂಸ್ವಾಧೀನ ಪ್ರಕ್ರಿಯೆ ನಡೆಸಲಾಗುವುದು.

ಬಂಕಾದಲ್ಲಿ ಸ್ವಘೋಷಿತ ಮಾವೋವಾದಿ ಕಮಾಂಡರ್ ಹತ್ಯೆ

ಪಾಟ್ನಾ: ಬಿಹಾರದ ಬಂಕಾ ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿಯೊಂದಿಗೆ ನಡೆದ ಎನ್‌ಕೌಂಟರ್‌ನಲ್ಲಿ ಸಿಪಿಐ (ಮಾವೋವಾದಿ) ಸ್ವಯಂಘೋಷಿತ ಏರಿಯಾ ಕಮಾಂಡರ್ 35 ವರ್ಷ ವಯಸ್ಸಿನ ವ್ಯಕ್ತಿ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತ ಮಾವೋವಾದಿಯನ್ನು ರಮೇಶ್ ತುಡು ಅಲಿಯಾಸ್ ಟೆಡುವಾ ಎಂದು ಗುರುತಿಸಲಾಗಿದ್ದು, ಆತನ ಹತ್ಯೆಗೆ 1 ಲಕ್ಷ ರೂ. ಬಹುಮಾನ ಘೋಷಿಸಿತ್ತು. ಈತ ಬಿಹಾರ ಮತ್ತು ಪಕ್ಕದ ಜಾರ್ಖಂಡ್‌ನಲ್ಲಿ ಸಕ್ರಿಯನಾಗಿದ್ದ.

ಕಟೋರಿಯಾ ಪೊಲೀಸ್ ಠಾಣೆ ವ್ಯಾಪ್ತಿಯ ಕಲೋಥರ್ ಅರಣ್ಯದಲ್ಲಿ ಭದ್ರತಾ ಸಿಬ್ಬಂದಿಗಳು ಕೂಂಬಿಂಗ್ ಕಾರ್ಯಾಚರಣೆ ಪ್ರಾರಂಭಿಸಿದರು. ಪೊಲೀಸರನ್ನು ಕಂಡ ತುಡು ಮತ್ತು ಅವರ ಸಹಚರರು ಗುಂಡು ಹಾರಿಸಲು ಪ್ರಾರಂಭಿಸಿದಾಗ ಎನ್‌ಕೌಂಟರ್ ನಡೆಯಿತು. ಬಂಕಾ ಪೊಲೀಸ್ ವರಿಷ್ಠಾಧಿಕಾರಿ ಉಪೇಂದ್ರ ನಾಥ್ ವರ್ಮಾ, ಮೃತ ಮಾವೋವಾದಿ ಜಮುಯಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಕ್ಸಲ್ ಸಂಘಟನೆಯ ಏರಿಯಾ ಕಮಾಂಡರ್ ಆಗಿದ್ದ ಎಂದು ಹೇಳಿದರು.

ಏ.13, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಡಾ.ಭಾನುಪ್ರಕಾಶ್ ಶರ್ಮರಿಗೆ ಮತ ಚಲಾಯಿಸುವಂತೆ ಮನವಿ

ಮೈಸೂರು, ಏ.9(ಜಿಎ)–ಏ.13ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದ್ದು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿದ್ದ ಅಶೋಕ ಹಾರನಹಳ್ಳಿ ಅವರ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಡಾ.ಭಾನುಪ್ರಕಾಶ್ ಶರ್ಮರಿಗೆ ಮತ ನೀಡುವ ಮೂಲಕ ಬೆಂಬಲಿಸಬೇಕೆಂದು ಜಿಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಡಾ.ಬಿ.ಆರ್.ನಟರಾಜ್ ಜೋಯಿಸ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೈದಿಕ ಪಂಡಿತರೊಬ್ಬರು ಸ್ಪರ್ಧಿಸುತ್ತಿದ್ದು, ಹೀಗಾಗಿ ಅವರನ್ನು ಬೆಂಬಲಿಸಬೇಕು. ಏ.13ರಂದು ಭಾನುವಾರ ಬೆಳಗ್ಗೆ 8ಗಂಟೆಯಿಂದ ಸಂಜೆ 4ರವರೆಗೆ ನಗರದ ಕೃಷ್ಣಮೂರ್ತಿಪುರಂನಲ್ಲಿನರುವ ಭಗಿನಿ ಸೇವಾ ಸಮಾಜದಲ್ಲಿ ಈ ಚುನಾವಣೆ ನಡೆಯಲಿದೆ ಎಂದರು.

ಅಧ್ಯಕ್ಷ ಸ್ಥಾನಕ್ಕೆ ರಾಜ್ಯದಿಂದ ಇಬ್ಬರು ಸ್ಪರ್ಧಿಸುತ್ತಿದ್ದಾರೆ. ಆದರೆ, ಮೈಸೂರು ಭಾಗದಿಂದ ಮಹಾಸಭಾ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ವೇದಮೂರ್ತಿ ಡಾ.ಭಾನುಪ್ರಕಾಶ್ ಶರ್ಮಾ ಹಾಗೂ ಮೈಸೂರು ಜಿಲ್ಲಾ ಪ್ರತಿನಿಧಿ ಸ್ಥಾನಕ್ಕೆ ಸ್ಪರ್ಧಿಸಿರುವ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಹಾಗೂ ಮೈಸೂರು ಬ್ರಾಹ್ಮಣ ಯುವ ವೇದಿಕೆ ಸಂಘಟನಾ ಕಾರ್ಯದರ್ಶಿ ಜಗದೀಶ್‌ಕುಮಾರ್ ಬೆಂಬಲಿಸಿ ಮತ ನೀಡುವಂತೆ ಮನವಿ ಮಾಡಿದರು.

ಮೈಸೂರಿನಲ್ಲಿ ಬ್ರಾಹ್ಮಣ ಸಮುದಾಯದ 4150 ಮಂದಿ ಎಕೆಬಿಎಮ್‌ಎಸ್ ಸದಸ್ಯರಾಗಿದ್ದು ಮುಂದಿನ ದಿನದಲ್ಲಿ ಬೃಹತ್ ಸದಸ್ಯತ್ವ ಅಭಿಯಾನ ಹಮ್ಮಿಕೊಂಡು ಆರೋಗ್ಯವಿಮೆ ಸೇರಿದಂತೆ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ತರಲು ಯೋಜನೆ ರೂಪಿಸಲಾಗಿದೆ, ಸಮುದಾಯಕ್ಕಾಗಿ ಶ್ರಮಿಸುತ್ತಾ ಬಂದಿರುವ ಭಾನುಪ್ರಕಾಶ್ ಶರ್ಮ ಅವರನ್ನು ಮತ್ತು ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಡಿ.ಟಿ. ಪ್ರಕಾಶ್ ಹಾಗೂ ಬ್ರಾಹ್ಮಣ ಯುವ ವೇದಿಕೆ ಕಡಕೊಳ ಜಗದೀಶ್ ಅವರಿಗೆ ಸದಸ್ಯರು ಮತ ನೀಡುವಂತೆ ಕರೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಸಮಾಜ ಸೇವಕ ಡಾ.ಕೆ. ರಘುರಾಂ ವಾಜಪೇಯಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷೆ ಪುಷ್ಪ ಅಯ್ಯಂಗಾರ್ ಉಪಸ್ಥಿತರಿದ್ದರು.

ಪ್ರದೀಪ್ ಕೃಷ್ಣೇಗೌಡರಿಗೆ ರಾಷ್ಟ್ರೀಯ ರತ್ನ ಪ್ರಶಸ್ತಿ



ಬೆಂಗಳೂರಿನ ಕರ್ನಾಟಕ ನೇತಾಜಿ ಚಾರಿಟೇಬಲ್ ಟ್ರಸ್ಟ್‌ನಿಂದ ನೀಡುವ 2025–26ನೇ ಸಾಲಿನ ರಾಷ್ಟ್ರೀಯ ರತ್ನ ಪ್ರಶಸ್ತಿ ಅನ್ನು ಸಮಾಜ ಸೇವಕರೂ ಆದ ಪ್ರದೀಪ್ ಕೃಷ್ಣೇಗೌಡ ಅವರಿಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದಾನ ಮಾಡಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ರವಿಕುಮಾರ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಡಿಸಿಪಿ ಸುಂದರ್‌ರಾಜ್‌ಗೆ ಅಭಿನಂದನೆ...



ಮೈಸೂರು ನಗರದ ಉಪ ಪೊಲೀಸ್ ಆಯುಕ್ತರಾಗಿ (ಅಪರಾಧ–ಸಂಚಾರ) ಅಧಿಕಾರ ವಹಿಸಿಕೊಂಡ ಕೆ.ಎಸ್.ಸುಂದರ್‌ರಾಜ್ ಅವರನ್ನು ಜೆಡಿಎಸ್ ವಕ್ತಾರ ವಿ.ರಾಮಚಂದ್ರ, ಮುಖಂಡರಾದ ಸುರೇಶ್, ಕೃಷ್ಣಪ್ಪ, ರವಿ, ತಿಮ್ಮಯ್ಯ ಅಭಿನಂದಿಸಿದರು.

ಶ್ರೀ ಮಹಾದೇಶ್ವರ ವಿವಿಧೋದ್ದೇಶ ಸಹಕಾರ ಸಂಘಕ್ಕೆ ಆಯ್ಕೆ...



ಶ್ರೀ ಮಹಾದೇಶ್ವರ ವಿವಿಧೋದ್ದೇಶ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕೆ.ವಿ.ಸೀತಾರಾಮು, ಉಪಾಧ್ಯಕ್ಷರಾಗಿ ಶ್ರೀಮತಿ ಪಂಚಮಿ, ನಿರ್ದೇಶಕರಾಗಿ ಆಯ್ಕೆಯಾದ ಕೆ.ವಿ.ಚೇತನ್, ಸತೀಶ್, ಮಂಜುನಾಥ್, ಹೇಮಂತ್ ಕುಮಾರ್, ಶಿವಕುಮಾರ್, ಲೋಕೇಶ್, ಚಂದ್ರಶೇಖರ್, ಮಹೇಶ್, ರಮೇಶ್‌ನಾಯಕ, ಪ್ರಕಾಶ್, ಶ್ರೀಮತಿ ಶೋಭಾ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಜಯರಾಮು ಶಿವಮಾದು, ರಾಜೇಂದ್ರ, ಜಯರಾಮು ಉಪಸ್ಥಿತರಿದ್ದರು.

ನಾಳೆ 'ಜಾತಿ ಜನಗಣತಿ' ಮಂಡನೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ–2015ರ (ಜಾತಿ ಜನಗಣತಿ) ದತ್ತಾಂಶಗಳ ಅಧ್ಯಯನ ವರದಿಯನ್ನು ಇದೇ 11ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಹಿಂದುಳಿದ ವರ್ಗಗಳ ಆಯೋಗವು ಈ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ 2024ರ ಫೆ.29ರಂದು ಸರ್ಕಾರಕ್ಕೆ ಸಲ್ಲಿಸಿತ್ತು.

ಪ್ರಸ್ತಾವದಲ್ಲಿ ಏನಿದೆ: ಎಚ್. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು 2015ರ ಏಪ್ರಿಲ್ 11ರಿಂದ ಮೇ 30ರವರೆಗೆ ರಾಜ್ಯಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿತ್ತು. ಜಾತಿ ವಿವರವೂ ಒಳಗೊಂಡಂತೆ ಒಟ್ಟು 54 ಮಾನದಂಡಗಳಿಗೆ ಸಂಬಂಧಿಸಿದಂತೆ ಜಿಲ್ಲಾಡಳಿತದ ಸಹಭಾಗಿತ್ವದಲ್ಲಿ ಸಮೀಕ್ಷೆ ನಡೆಸಿ ಮಾಹಿತಿ ಸಂಗ್ರಹಿಸಿ ಗಣಕೀಕರಣಗೊಳಿಸಲಾಗಿದೆ.

ಈ ಸಮೀಕ್ಷೆಯ ದತ್ತಾಂಶಗಳನ್ನು ಬಳಸಿಕೊಂಡು ಅಧ್ಯಯನ ವರದಿ ಸಲ್ಲಿಸುವಂತೆ ಕೆ. ಜಯಪ್ರಕಾಶ ಹೆಗ್ಡೆ ನೇತೃತ್ವದ ಆಯೋಗಕ್ಕೆ 2023ರ ಜುಲೈ 17ರಂದು ಸರ್ಕಾರ ಪತ್ರ ಬರೆದಿತ್ತು. ಅದರ ಅನ್ವಯ, ಕಾಂತರಾಜ ಆಯೋಗ ನಡೆಸಿದ್ದ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಅಧ್ಯಯನ ವರದಿ– 2024' ಮತ್ತು ಸಮೀಕ್ಷೆಯ ಅಂಕಿಅಂಶಗಳನ್ನು ಒಳಗೊಂಡ ವರದಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲಾಗಿತ್ತು.

ಮಹಿಳಾ ಸ್ವಸಹಾಯ ಸಂಘಗಳ 25ನೇ ವಾರ್ಷಿಕೋತ್ಸವ



ಹಿನಕಲ್‌ನಲ್ಲಿರುವ ಹೋಲಿ ಫ್ಯಾಮಿಲಿ ಚರ್ಚ್ ಆವರಣದಲ್ಲಿ 3 ಮಹಿಳಾ ಸ್ವಸಹಾಯ ಸಂಘಗಳ 25ನೇ ವರ್ಷದ ವಾರ್ಷಿಕೋತ್ಸವ ಆಚರಿಸಲಾಯಿತು.

ಮೈಸೂರು, ಏ.9(ಜಿಎ)–ಮೈಸೂರಿನ ಹಿನಕಲ್ ಗ್ರಾಮದಲ್ಲಿರುವ ಹೋಲಿ ಫ್ಯಾಮಿಲಿ ಚರ್ಚ್ ಆವರಣದಲ್ಲಿ 3 ಮಹಿಳಾ ಸ್ವಸಹಾಯ ಸಂಘಗಳು 25ನೇ ವರ್ಷದ ವಾರ್ಷಿಕೋತ್ಸವ ಆಚರಿಸಿದವು.

ಈ ವೇಳೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಓಡಿಪಿ ಸಂಸ್ಥೆಯ ನಿರ್ದೇಶಕ ಅಲೆಕ್ಸ್ ಪ್ರಶಾಂತ್ ಸೀಕ್ವಿರಾ ಮಾತನಾಡಿ, ಮಹಿಳೆಯರು ಕಳೆದ 25 ವರ್ಷ ಹೇಗಿದ್ದರು. ಈಗ ತಮ್ಮ ನಾಯಕತ್ವ ಬೆಳೆಸಿಕೊಂಡು ಆರ್ಥಿಕತೆಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಸ್ವಾವಲಂಬಿಗಳಾಗಿದ್ದಾರೆ. ಇನ್ನೂ ಹೆಚ್ಚೆಚ್ಚು ಮಹಿಳೆಯರು ನಾಯಕತ್ವ ಬೆಳೆಸಿಕೊಳ್ಳಿ ಎಂದು ಕರೆ ನೀಡಿದರು.

ನಂತರ ಆರ್.ನಾಗೇಂದ್ರ ಮಾತನಾಡಿ, ಪುರಸಭೆಯಿಂದ ಸಿಗುವಂತಹ ಸೌಲಭ್ಯಗಳ ಬಗ್ಗೆ ತಿಳಿಸಿ ಪ್ರಯೋಜನ ಪಡೆಯುವಂತೆ ಸಲಹೆ ನೀಡಿದರು.

ಮಹಿಳೋದಯ ಮಹಿಳಾ ಒಕ್ಕೂಟದ ಸಂಯೋಜಕಿ ಮೋಳಿ ಪುಟಾಡೋ ಮಾತನಾಡಿ, ಮಹಿಳೆಯರು ನಾಯಕತ್ವ ಬೆಳೆಸಿಕೊಂಡಿರುವುದು ನೋಡಿದರೆ, ಸಂತಸವಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಹಿನಕಲ್ ಪುರಸಭೆಯ ಮುನಿಲಕ್ಷ್ಮಮ್ಮ, ಡಾ.ಸುನೀತ, ಅರೋಕ್ಯ ಮೇರಿ, ಸಿ.ಎಸ್.ಪ್ರಕಾಶ್ ಮೇರಿ, ಪುಷ್ಪ ಮೇರಿ, ಮೇರಿ ಸ್ಟೆಲ್ಲಾ ಮತ್ತಿತರರು ಉಪಸ್ಥಿತರಿದ್ದರು.

ಏ.12ರಂದು ಶನಿ ಮಹಾಶಾಂತಿ

ಮೈಸೂರು, ಏ.9– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಏ.12ರಂದು ಶನಿವಾರ ಬೆಳಗ್ಗೆ 9.30ಕ್ಕೆ ಮೇಷ, ಸಿಂಹ, ವೃಶ್ಚಿಕ, ಕುಂಭ ಮೀನ ರಾಶಿಯವರಿಗೆ ಶನಿಮಹಾಶಾಂತಿ, ಬಾಧಾನಿವಾರಕ ಸುದ್ಯನ ಹೋಮ, ಮಹಾ ಮೃತ್ಯುಂಜಯ ಹೋಮ, ಕುಜದೋಷ ನಿವೃತ್ತಿ ಶಾಂತಿ, ರಾಹು ಮತ್ತು ಕೇತು ಶಾಂತಿ ಏರ್ಪಡಿಸಲಾಗಿದೆ. ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ. ಮಾಹಿತಿಗಾಗಿ ಮೈ ಕುಮಾರ್– ಮೊ.ನಂ.9845183399 ಅನ್ನು ಸಂಪರ್ಕಿಸಿ.

ರಾಜ್ಯ ಬಿಜೆಪಿಯವರು ಮೊದಲು ಕೇಂದ್ರದ ಬೆಲೆ ಏರಿಕೆ ವಿರುದ್ಧ ಹೋರಾಡಲಿ

- ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ ಲೇವಡಿ
- ವಕ್ಫ್ ತಿದ್ದುಪಡಿ ಮಸೂದೆ ಯಾರು ಕೇಳಿದ್ದರು?
- ಕೊಡಗಿನ ವಿನಯ್ ಕೊಂದಿರುವುದೇ ಬಿಜೆಪಿಯವರು

ಮೈಸೂರು,ಏ.9(ಎಂಟಿವೈ)– ಕೇಂದ್ರದ ಬಿಜೆಪಿ ಸರ್ಕಾರ ಕಳೆದ 10 ವರ್ಷದಲ್ಲಿ 143 ವಸ್ತುಗಳ ಬೆಲೆ ಏರಿಕೆ ಮಾಡಿ ಜನರನ್ನು ಸಂಕಷ್ಟಕ್ಕೆ ದೂಡಿದ್ದರೂ ಮೌನ ವಹಿಸಿರುವ ರಾಜ್ಯ ಬಿಜೆಪಿ ನಾಯಕರು, ಇದೀಗ ಕಾಂಗ್ರೆಸ್ ಬೆಲೆ ಏರಿಕೆ ವಿರುದ್ಧ ಜನಾಕ್ರೋಶ ನಾಟಕದ ಯಾತ್ರೆ ನಡೆಸುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಲೇವಡಿ ಮಾಡಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2014ಕ್ಕೂ ಮೊದಲು, ಅನಂತರ ಯಾವ ಯಾವ ವಸ್ತುಗಳ ಬೆಲೆ ಏರಿಕೆಯಾಗಿದೆ ಎಂಬುದರ ಪಟ್ಟಿ ಪ್ರದರ್ಶಿಸಿದರು. ಕೇಂದ್ರ ಸರ್ಕಾರದ ಅವೈಜ್ಞಾನಿಕ ಕ್ರಮದಿಂದ ಅಗತ್ಯ ವಸ್ತುಗಳ ಬೆಲೆಯೂ ಶೇ.400ರಷ್ಟು ಹೆಚ್ಚಾಗಿದೆ. 2014ರಲ್ಲಿ ಅಂತಾರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ಪೆಟ್ರೋಲ್, ಡೀಸೆಲ್ ಏರಿಕೆಯಾಗಿದ್ದರೂ ಲೀಟರ್ ಪೆಟ್ರೋಲ್ 70 ರೂ., ಡೀಸೆಲ್ 50 ರೂ.ಗೆ ಸಿಗುತ್ತಿತ್ತು. ಗ್ಯಾಸ್ ಬೆಲೆ 450 ರೂ. ಇತ್ತು. ಇಂದು ತೈಲಬೆಲೆ ಕಡಿಮೆಯಿದ್ದರೂ ಲೀಟರ್ ಪೆಟ್ರೋಲ್ 103 ರೂ., ಡೀಸೆಲ್ 92 ರೂ. ತಲುಪಿದೆ. ತೈಲ ಬೆಲೆ ಏರಿಕೆಯಿಂದ ಕೇಂದ್ರದ ಎನ್‌ಡಿಎ ಸರ್ಕಾರ 11 ವರ್ಷದಲ್ಲಿ 43 ಲಕ್ಷ ಕೋಟಿ ರೂ. ಹಣವನ್ನು ಲೂಟಿ ಮಾಡಿದೆ. ರಾಜ್ಯದಲ್ಲಿ ಜನಾಕ್ರೋಶ ಯಾತ್ರೆ ಆರಂಭವಾದ ದಿನವೇ 50 ರೂ. ಗ್ಯಾಸ್ ದರ ಏರಿಕೆಯಾಗಿದೆ. ಟೋಲ್ ದರ ಏರಿಕೆ ಮಾಡಲಾಗಿದೆ ಎಂದು ಆರೋಪಿಸಿದರು.



ಎಂ.ಲಕ್ಷ್ಮಣ

ಬಿಜೆಪಿಯವರು ರೈತ ವಿರೋಧಿಗಳಾದ ಕಾರಣಕ್ಕೆ ಹಾಲಿನ ದರ ಏರಿಕೆಯನ್ನು ವಿರೋಧಿಸುತ್ತಿದ್ದಾರೆ. 10 ವರ್ಷಗಳ ಹಿಂದೆ ಚಿನ್ನ, ಬೆಳ್ಳಿ, ಕಬ್ಬಿಣ, ಇನ್ನೋವಾ ಕಾರು, ಅಡುಗೆ ಎಣ್ಣೆ ಎಷ್ಟಿತ್ತು. ಈಗ ಎಷ್ಟಾಗಿದೆ. ಲೆಕ್ಕ ಹಾಕುವಂತೆ ಒತ್ತಾಯಿಸಿದರು. ಹೆಣ ಸುಡುವುದಕ್ಕೂ ಜಿಎಸ್‌ಟಿ ಹಾಕಿದ ಕೀರ್ತಿ ಕೇಂದ್ರದ ನರೇಂದ್ರ ಮೋದಿ ಸರ್ಕಾರಕ್ಕೆ ಸಲ್ಲಬೇಕು ಎಂದು ಟೀಕಿಸಿದರು.

ವಕ್ಫ್ ಬಿಲ್ ವಿರುದ್ಧ ಹೋರಾಡಿ: ವಕ್ಫ್ ತಿದ್ದುಪಡಿ ಮಸೂದೆ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಲಾಗಿದೆ. ಜನರು ಬೀದಿಗಿಳಿದು ಹೋರಾಟ ಮಾಡಬೇಕು. ಈ ಮಸೂದೆ ಜಾರಿ ಹಿಂದಿನ ಮರ್ಮ ಏನು? ಎಂದು ಪ್ರಶ್ನಿಸಿದರು.

ದೇಶದಲ್ಲಿ ನಾಲ್ಕು ವಕ್ಫ್ ಬೋರ್ಡ್‌ನಡಿ 8.62 ಲಕ್ಷ ಆಸ್ತಿಗಳಿವೆ. ಒಟ್ಟು 38 ಲಕ್ಷ ಎಕರೆ ಜಮೀನಿದೆ. ತೆಲಂಗಾಣ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಲ್ಲಿ ಹಿಂದೂ ದೇವಾಲಯಗಳಿಗೆ ಸೇರಿದ 68 ಲಕ್ಷ ಎಕರೆ ಜಮೀನಿದೆ. ಜಿಲ್ಲಾಧಿಕಾರಿಗೆ ನೀಡಲಾಗಿರುವ ಅಧಿಕಾರವನ್ನು ಪ್ರಶ್ನಿಸುವಂತಿಲ್ಲ. ಕೇಂದ್ರ ಸರ್ಕಾರ ಸಮಿತಿಯೊಂದನ್ನು ರಚಿಸಿ, ಅದಕ್ಕೆ ಸಂಘ ಪರಿವಾರದವರನ್ನು ನಿಯೋಜಿಸುವ ಹುನ್ನಾರ ನಡೆಸುತ್ತಿದ್ದು, ಆ ಮೂಲಕ ಮುಸ್ಲಿಂರನ್ನು ಎರಡನೇ ದರ್ಜೆ ಪ್ರಜೆಗಳನ್ನಾಗಿಸುವ ಮತ್ತು ಮುಂದೆ ಕ್ರಿಶ್ಚಿಯನ್ನರ ಆಸ್ತಿಗಳನ್ನು ಕಿತ್ತುಕೊಳ್ಳುವ ಸಂಚು ನಡೆಸುತ್ತಿದ್ದಾರೆ. ಮುಸ್ಲಿಂರು ದೇಶದವರಲ್ಲ ಎಂದು ಬಿಂಬಿಸಲಾಗುತ್ತಿದೆ. ಒಡೆದಾಳುವ ನೀತಿ ಮೊದಲಿಂದಲೂ ಅನುಸರಿಸಿದ್ದಾರೆ. ಹೋರಾಡಿ ಜನರಿಗೆ ಅರಿವು ಮೂಡಿಸಬೇಕು ಎಂದರು.

ಪೌರಕಾರ್ಮಿಕರ ಕಾಯಂ: ಮೇ 1ರಿಂದ 7.5 ಲಕ್ಷ ಪೌರಕಾರ್ಮಿಕರನ್ನು ಕಾಯಂ ಮಾಡುವುದಾಗಿ ಘೋಷಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಭಿನಂದಿಸುತ್ತೇವೆ. 7 ಸಾವಿರದಿಂದ 17 ಸಾವಿರಕ್ಕೆ ಸಂಬಳ ಏರಿಕೆ ಮಾಡಿದ್ದು ಸಿದ್ದರಾಮಯ್ಯ. ಈಗ ಎಲ್ಲ ಪೌರಕಾರ್ಮಿಕರನ್ನು ಕಾಯಂ ಮಾಡಿ 50 ಸಾವಿರ ಸಂಬಳ ದೊರೆಯುವಂತೆ ಮಾಡಿದ್ದಾರೆ.

ವಿನಯ್ ಕೊಂದಿರುವುದು ಬಿಜೆಪಿಯವರು: ಕೊಡಗಿನ ವಿನಯ್ ಸೋಮಯ್ಯ ಅವರನ್ನು ಕೊಲೆ ಮಾಡಿರುವುದು ಬಿಜೆಪಿಯವರು. ಸಿಐಡಿ ತನಿಖೆ ನಡೆಯುತ್ತಿದ್ದು, ಸತ್ಯ ಗೊತ್ತಾಗಲಿದೆ. ಬಿಜೆಪಿಯ ಒಬ್ಬ ನಾಯಕ ಉದಯಗಿರಿ ಪ್ರಕರಣದಲ್ಲಿ ಬೆಂಕಿ ಹಚ್ಚಲು ಪ್ರಯತ್ನಿಸಿದರು. ಈಗ ವಿನಯ್ ಹೆಣದ ಮೇಲೆ ರಾಜಕಾರಣ ಮಾಡುತ್ತ ಬಾಯಿಗೆ ಬಂದಂತೆ ಮಾತಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಹಾಲಿ ಸಂಸದರು ವಿಮಾನ ನಿಲ್ದಾಣಕ್ಕೆ ಸರ್ಕಾರ ಹಣ ಕೊಡುತ್ತಿಲ್ಲ ಎಂದು ಹೇಳಿದ್ದಾರೆ. ಬಜೆಟ್‌ನಲ್ಲಿ ಹಣ ಬಿಡುಗಡೆ ಮಾಡಲಾಗಿದೆ. ಆದರೆ, ಸಂಸದರು ಕೇಂದ್ರದಿಂದ ಏನು ತಂದರು ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಅವರನ್ನು ಟೀಕಿಸುವ ಬಿ.ವೈ.ವಿಜಯೇಂದ್ರ ಅವರು ಯತ್ನಾಳ್ ಪ್ರಶ್ನೆಗಳಿಗೆ ಮೊದಲು ಉತ್ತರಿಸಲಿ ಎಂದರು. ಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ಮುಖಂಡರಾದ ಎಂ.ಶಿವಣ್ಣ, ಕೆ.ಮಹೇಶ್, ಸೇವಾದಳದ ಗಿರೀಶ್, ಅಬ್ರಾರ್ ಇದ್ದರು.

ದೇಶ - ವಿದೇಶ

ಅಮೆರಿಕಾದಲ್ಲಿ ಔಷಧಗಳ ಬೆಲೆ ಗಗನಕ್ಕೆ



ನ್ಯೂಯಾರ್ಕ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಮೆರಿಕ ಮತ್ತು ಹೊರಗಿನ ತೀವ್ರ ವಿರೋಧದ ಹೊರತಾಗಿಯೂ ತಮ್ಮ ಪರಸ್ಪರ ಸುಂಕ ನೀತಿಯ ಬಗ್ಗೆ ಹೋರಾಟ ಮುಂದುವರಿಸಿದ್ದಾರೆ. ಇದು ಔಷಧ ಕ್ಷೇತ್ರದ ಮೇಲೆಯೂ ಪರಿಣಾಮ ಉಂಟುಮಾಡಿದೆ. ಮಂಗಳವಾರ ರಾತ್ರಿ (ಸ್ಥಳೀಯ ಸಮಯ) ಅಮೆರಿಕ ಅಧ್ಯಕ್ಷರು ಫಾರ್ಮಾ ವಲಯದ ಮೇಲಿನ ಸುಂಕಗಳು ಶೀಘ್ರದಲ್ಲೇ ಬರಲಿವೆ ಎಂದು ಘೋಷಿಸಿದ್ದಾರೆ. ಈ ವಲಯಕ್ಕೆ ಇಲ್ಲಿವರೆಗೆ ಸುಂಕಗಳಿಂದ ವಿನಾಯಿತಿ ನೀಡಲಾಗಿದೆ. ರಾಷ್ಟ್ರೀಯ ರಿಪಬ್ಲಿಕನ್ ಕಾಂಗ್ರೆಸ್ ಸಮಿತಿ ಭೋಜನಕೂಟದಲ್ಲಿ ಮಾತನಾಡಿದ ಟ್ರಂಪ್, ನಾವು ನಮ್ಮ ಸ್ವಂತ ಫಾರ್ಮಾ ಔಷಧಿಗಳನ್ನು ತಯಾರಿಸದ ಕಾರಣ ಫಾರ್ಮಾ ಮೇಲಿನ ಸುಂಕಗಳು ಇರುತ್ತವೆ. ಅವುಗಳನ್ನು ಬೇರೆ ದೇಶದಲ್ಲಿ ತಯಾರಿಸಲಾಗುತ್ತದೆ. ಯುಎಸ್‌ನಲ್ಲಿ ಅದೇ ಪ್ಯಾಕೆಟ್‌ನ ಬೆಲೆ USD 10 ಅಥವಾ ಅದಕ್ಕಿಂತ ಹೆಚ್ಚು. ಕಂಪನಿಗಳು ಶೀಘ್ರದಲ್ಲೇ ನಮ್ಮ ಬಳಿಗೆ ಧಾವಿಸಿ ಬರುವ ರೀತಿಯಲ್ಲಿ ನಾವು ಫಾರ್ಮಾ ಮೇಲೆ ಸುಂಕ ವಿಧಿಸಲಿದ್ದೇವೆ. ಭಾರತೀಯ ಜೆನೆರಿಕ್ ಔಷಧ ತಯಾರಕರು ಅಮೆರಿಕದ ಆರೋಗ್ಯ ರಕ್ಷಣಾ ವ್ಯವಸ್ಥೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ದೇಶಕ್ಕೆ ಆಮದು ಮಾಡಿಕೊಳ್ಳುವ ಸುಮಾರು 40 ಪ್ರತಿಶತದಷ್ಟು ಜೆನೆರಿಕ್ ಔಷಧಿಗಳನ್ನು ಭಾರತದಿಂದ ಪೂರೈಕೆ ಮಾಡಲಾಗುತ್ತದೆ.

ಭಾವಿ ಅಳಿಯನ ಜೊತೆ ವಧುವಿನ ತಾಯಿ ಪರಾರಿ!

ಉತ್ತರ ಪ್ರದೇಶ: ಮದುವೆಗೆ ಕೇವಲ 9 ದಿನಗಳು ಬಾಕಿ ಇರುವಾಗಲೇ ವಧುವಿನ ತಾಯಿಯೊಂದಿಗೆ ವರ ಓಡಿಹೋದ ವಿಚಿತ್ರ ಘಟನೆ ಉತ್ತರ ಪ್ರದೇಶದ ಅಲಿಗಢದಲ್ಲಿ ನಡೆದಿದೆ. ಓಡಿ ಹೋದ ವರ, ತನ್ನ ಭಾವಿ ಅತ್ತೆಯನ್ನು ಪ್ರೀತಿಸುತ್ತಿದ್ದ ಎನ್ನಲಾಗಿದೆ. ಆದರೆ ಯಾರಿಗೂ ಅವರಿಬ್ಬರ ಸಂಬಂಧದ ಬಗ್ಗೆ ತಿಳಿದಿರಲಿಲ್ಲ. ವರನೊಂದಿಗೆ ಪರಾರಿಯಾಗುವಾಗ ವಧುವಿನ ತಾಯಿ, ಮಗಳ ಆಭರಣಗಳು ಮತ್ತು ಮದುವೆಗಾಗಿ ಉಳಿಸಿದ್ದ ಹಣವನ್ನೂ ತೆಗೆದುಕೊಂಡು ಹೋಗಿದ್ದಾಳೆ ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ.

ಪರಾರಿಯಾದ ಮಹಿಳೆ, ಯುವಕನೊಂದಿಗೆ ತನ್ನ ಮಗಳ ಮದುವೆಯನ್ನು ಮಾಡಿಸಲು ಮುಂದಾಗಿದ್ದಳು. ಮದುವೆಯ ಸಿದ್ಧತೆಗಳ ನೆಪದಲ್ಲಿ ಬಾಯ್‌ಫ್ರೆಂಡ್ ಆಗಾಗ್ಗೆ ಮನೆಗೆ ಬರುತ್ತಿದ್ದ. ಆದರೆ, ಯಾರಿಗೂ ಇಬ್ಬರ ಬಗ್ಗೆ ಯಾವುದೇ ಅನುಮಾನ ಬಂದಿರಲಿಲ್ಲ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಆ ಯುವಕ ಮತ್ತು ಭಾವಿ ಅತ್ತೆಯ ನಡುವೆ ಪ್ರಣಯ ಸಂಬಂಧವೂ ಬೆಳೆಯಿತು. ಇದರ ನಡುವೆ ವರನು ತನ್ನ ಭಾವಿ ಅತ್ತೆಗೆ ಮೊಬೈಲ್ ಫೋನ್ ಉಡುಗೊರೆಯಾಗಿ ನೀಡಿದನು. ಆದರೆ, ತಾಯಿ ಮತ್ತು ಮಗನ ನಡುವೆ ಇರುವ ಬಾಂಧವ್ಯ ಎಂದು ಎಲ್ಲರೂ ಭಾವಿಸಿದ್ದರು.

ಮುಂಬೈ ದಾಳಿ ಮಾಸ್ಟರ್ ಮೈಂಡ್ ರಾಣಾ ಅಮೆರಿಕದಿಂದ ಗಡಿಪಾರು



ವಾಷಿಂಗ್ಟನ್: ಮುಂಬೈನ್ ತಾಜ್ ಹೋಟೆಲ್ ಮೇಲಿನ ಉಗ್ರ ದಾಳಿಯ ಮಾಸ್ಟರ್ ಮೈಂಡ್ ತಹವ್ವುರ್ ರಾಣಾನನ್ನು ಅಮೆರಿಕದಿಂದ ಗಡಿಪಾರು ಮಾಡಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ. ನಾಳೆ ಬೆಳಗಿನ ಜಾವ ಭಾರತಕ್ಕೆ ಕರೆತರುವ ನಿರೀಕ್ಷೆ ಇದೆ. ಭಾರತಕ್ಕೆ ತನ್ನ ಹಸ್ತಾಂತರವನ್ನು ನಿಲ್ಲಿಸುವಂತೆ ಕೋರಿ ತಹವ್ವೂರ್ ರಾಣಾ ಸಲ್ಲಿಸಿದ್ದ ಅರ್ಜಿಯನ್ನು ಅಮೆರಿಕದ ಸುಪ್ರೀಂಕೋರ್ಟ್ ತಿರಸ್ಕರಿಸಿತ್ತು. 2008ರ 26/11 ದಾಳಿಯ ಮಾಸ್ಟರ್ ಮೈಂಡ್ ತಹಾವೂರ್ ರಾಣಾನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಭಾರತಕ್ಕೆ ಕರೆತರಲಿದೆ ಎಂದು ಇಂಡಿಯಾ ಟುಡೇ ವರದಿ ಮಾಡಿದೆ.

ಅವನನ್ನು ದೆಹಲಿಗೆ ಕರೆತರಲಾಗುತ್ತದೆಯೇ ಅಥವಾ ಮುಂಬೈಗೆ ಕರೆತರಲಾಗುತ್ತದೆಯೇ ಎಂಬುದು ಸ್ಪಷ್ಟವಾಗಿಲ್ಲ. ಆದಾಗ್ಯೂ, ಅವರು 26/11 ಯೋಜನೆಯನ್ನು ಕಾರ್ಯಗತಗೊಳಿಸಿದ ಮುಂಬೈಗೆ ಬರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಅವನು ಆರಂಭಿಕ ಕೆಲವು ವಾರಗಳನ್ನು ಎನ್‌ಐಎ ಕಸ್ಟಡಿಯಲ್ಲಿ ಕಳೆಯುತ್ತಾನೆ ಎಂದು ಮೂಲಗಳು ತಿಳಿಸಿವೆ. 2008ರ ಮುಂಬೈ ದಾಳಿಯಲ್ಲಿ ರಾಣಾ ಆರೋಪಿಯಾಗಿದ್ದ. ಇದರಲ್ಲಿ 157 ಜನರು ಸಾವನ್ನಪ್ಪಿದ್ದರು.

ಸೈಫ್ ಮೇಲೆ ದಾಳಿ; ಚಾರ್ಜ್‌ಶೀಟ್ ಸಲ್ಲಿಸಿದ ಮುಂಬೈ ಪೊಲೀಸರು




ಮುಂಬೈ: ಜನವರಿಯಲ್ಲಿ ಬಾಲಿವುಡ್ ನಟ ಸೈಫ್ ಅಲಿ ಖಾನ್ ಮೇಲೆ ಹಲ್ಲೆ ನಡೆದ ಪ್ರಕರಣದಲ್ಲಿ ಪೊಲೀಸರು ಮುಂಬೈ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಬಾಂದ್ರಾ ಪೊಲೀಸರು ಸಲ್ಲಿಸಿರುವ ಚಾರ್ಜ್‌ಶೀಟ್‌ನಲ್ಲಿ ಆರೋಪಿ ಬಾಂಗ್ಲಾದೇಶಿ ಪ್ರಜೆ ಮೊಹಮ್ಮದ್ ಶರೀಫುಲ್ ಇಸ್ಲಾಂ ವಿರುದ್ಧ ಸಾಕ್ಷ್ಯಗಳಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜನವರಿ 16ರಂದು ಬಾಂದ್ರಾ ಪ್ರದೇಶದ ಐಷಾರಾಮಿ ಅಪಾರ್ಟ್‌ಮೆಂಟಿನ 12ನೇ ಮಹಡಿಯಲ್ಲಿರುವ 54 ವರ್ಷದ ಸೈಫ್ ಅಲಿಖಾನ್ ಅವರ ಮನೆಗೆ ನುಗ್ಗಿದ್ದ ಆರೋಪಿ ಸೈಫ್ ಮೇಲೆ ಚಾಕುವಿನಿಂದ ದಾಳಿ ಮಾಡಿ ಪರಾರಿಯಾಗಿದ್ದ. ಬಳಿಕ ಖಾಸಗಿ ಆಸ್ಪತ್ರೆಯಲ್ಲಿ ತುರ್ತು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಸೈಫ್, ಐದು ದಿನಗಳ ನಂತರ ಬಿಡುಗಡೆಯಾಗಿದ್ದರು.

ದಾಳಿಯ ಸಮಯದಲ್ಲಿ ನಟನ ಬೆನ್ನುಮೂಳೆಗೆ ಸಿಲುಕಿದ್ದ ಚಾಕುವಿನ ತುಣುಕು ಮತ್ತು ಅಪರಾಧದ ಸ್ಥಳದಲ್ಲಿ ದೊರೆತ ಒಂದು ಭಾಗವು ಆರೋಪಿಯಿಂದ ವಶಪಡಿಸಿಕೊಂಡ ಆಯುಧಕ್ಕೆ ಹೊಂದಿಕೆಯಾಗುತ್ತದೆ ಎಂದು ಪೊಲೀಸರು ಕಳೆದ ವಾರ ಇಲ್ಲಿ ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಡೊಮಿನಿಕನ್ ನೈಟ್‌ಕ್ಲಬ್ ಚಾವಣಿ ಕುಸಿತ: 79 ಮಂದಿ ಸಾವು



ಸ್ಯಾಂಟೊ ಡೊಮಿಂಗೊ: ಡೊಮಿನಿಕನ್ ರಾಜಧಾನಿಯಲ್ಲಿ ಮಂಗಳವಾರ ಐಕಾನಿಕ್ ನೈಟ್‌ಕ್ಲಬ್‌ನ ಚಾವಣಿ ಕುಸಿದಿದ್ದರಿಂದ ಕನಿಷ್ಠ 79 ಜನರು ಸಾವನ್ನಪ್ಪಿದ್ದಾರೆ. ಈ ದುರಂತದಲ್ಲಿ ಸುಮಾರು 160ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಈ ಪ್ರತಿಷ್ಠಿತ ನೈಟ್ ಕ್ಲಬ್‌ನಲ್ಲಿ ನಡೆಯುತ್ತಿದ್ದ ಮೆರೆಂಗ್ಯೂ ಸಂಗೀತ ಕಛೇರಿಯಲ್ಲಿ ರಾಜಕಾರಣಿಗಳು, ಕ್ರೀಡಾಪಟುಗಳು ಮತ್ತು ಇತರರು ಭಾಗವಹಿಸಿದ್ದರು ಎಂದು ತಿಳಿದುಬಂದಿದೆ. ಬದುಕುಳಿದವರಿಗಾಗಿ ತೀವ್ರ ಶೋಧ ನಡೆಸಲಾಗುತ್ತಿದೆ.

ಜೆಟ್ ಸೆಟ್ ನೈಟ್‌ಕ್ಲಬ್‌ನಲ್ಲಿ ಸಂಭವಿಸಿದ ದುರಂತದಲ್ಲಿ ಜನಪ್ರಿಯ ಗಾಯಕ, ಪ್ರಾಂತೀಯ ಗವರ್ನರ್ ಮತ್ತು ಇಬ್ಬರು ಮಾಜಿ ಮೇಜರ್ ಲೀಗ್‌ನ ಬೇಸ್‌ಬಾಲ್ ಆಟಗಾರರಾದ ಆಕ್ಟೇವಿಯೊ ಡೋಟೆಲ್ ಮತ್ತು ಟೋನಿ ಬ್ಲಾಂಕೊ ಮೃತಪಟ್ಟಿದ್ದಾರೆ. ಸ್ಯಾಂಟೊ ಡೊಮಿಂಗೊದಲ್ಲಿನ ಅಂತಸ್ತಿನ ಜೆಟ್‌ಸೆಟ್ ನೈಟ್‌ಕ್ಲಬ್‌ನ ಅವಶೇಷಗಳಡಿಯಲ್ಲಿ ಬದುಕುಳಿದವರಿಗಾಗಿ ರಕ್ಷಣಾ ಸಿಬ್ಬಂದಿ ಹುಡುಕಾಟ ನಡೆಸುತ್ತಿದ್ದಾರೆ ಎಂದು ತುರ್ತು ಕಾರ್ಯಾಚರಣೆಗಳ ನಿರ್ದೇಶಕ ಜುವಾನ್ ಮ್ಯಾನುಯೆಲ್ ಮೆಂಡೆಜ್ ಹೇಳಿದ್ದಾರೆ.

ಕಕ್ಕುಂದ ಕಾಡು ಶ್ರೀ ಲಕ್ಷ್ಮಿ ವೆಂಕಟೇಶ್ವರ ವರ್ಷಾವಧಿ ಜಾತ್ರೆ ಸಂಪನ್ನ



ಕಕ್ಕುಂದಕಾಡು ಶ್ರೀ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವದಲ್ಲಿ ದೇವರ ಪ್ರದಕ್ಷಣೆ ನೃತ್ಯ ಜರುಗಿತು

ನಾಪೋಕ್ಲು, ಏ.9–ಸಮೀಪದ ಕಕ್ಕುಂದಕಾಡು ಶ್ರೀ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಅದ್ದೂರಿಯಿಂದ ಸಂಪನ್ನಗೊಂಡಿತು.

ನಿನ್ನೆ ಮಹಾಪೂಜೆ ಧ್ವಜಾರೋಹಣ ದೀಪಾರಾಧನೆ, ದೇವರ ಪ್ರದಕ್ಷಣೆ ಬಲಿಯೊಂದಿಗೆ ಉತ್ಸವಕ್ಕೆ ಚಾಲನೆ ನೀಡಿ ಬಳಿಕ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಇಂದು ಬೆಳಿಗ್ಗೆ ದೇವರ ದರ್ಶನ ಬಲಿ, ಮಹಾಭಿಷೇಕ, ಮತ್ತು ಮಧ್ಯಾಹ್ನ ಮಹಾಪೂಜೆ, ವಿಶೇಷ ಸೇವೆಗಳು, ದೇವರ ಪ್ರದಕ್ಷಣೆ ನೃತ್ಯ ಜರುಗಿ ಮಹಾಮಂಗಳಾರತಿ ನಂತರ ತೀರ್ಥ, ಪ್ರಸಾದ ವಿತರಣೆ ಮತ್ತು ಉತ್ಸವದಲ್ಲಿ ಪಾಲ್ಗೊಂಡ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಸಂಜೆ ಪಟ್ಟಣದಲ್ಲಿ ದೇವರ ಉತ್ಸವ ಮೂರ್ತಿಯನ್ನು ಚೆಂಡೆ, ವಾದ್ಯಗೋಷ್ಠಿಗಳೊಂದಿಗೆ ಪಟ್ಟಣದಲ್ಲಿ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಕಾವೇರಿನದಿಯಲ್ಲಿ ಅವಭೃತಸ್ನಾನದ ಬಳಿಕ ಸನ್ನಿಧಿಗೆ ಹಿಂತುರುಗಿ ದೇವರ ಪ್ರದಕ್ಷಣೆ ನೃತ್ಯ ಬಲಿ ಜರುಗಿತು.

ಗುರುವಾರ ಶುದ್ಧ ನವಕ ಕಲಶ, ಮಹಾಪೂಜೆ, ಮಂತ್ರಾಕ್ಷತೆಯೊಂದಿಗೆ ಜಾತ್ರಾ ಮಹೋತ್ಸವ ಸಂಪನ್ನಗೊಳ್ಳಲಿದೆ. ದೇವಾಲಯದ ಮುಖ್ಯ ಅರ್ಚಕ ಸುಧೀರ, ತಂತ್ರಿಗಳಾಗಿ ರಮೇಶ್ ಶರ್ಮಾ, ಸುರೇಶ್ ಶರ್ಮ, ಸತ್ಯಮೂರ್ತಿ ಸರಳಾಯ ಧಾರ್ಮಿಕ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು.

ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷ ಶ್ರೀನಿವಾಸ ಟಿ.ಆರ್.ಕಾರ್ಯದರ್ಶಿ ಸುಜಿ ಕುಮಾರ್ ಟಿ.ಎ, ಖಜಾಂಚಿ ಗೋಪಾಲ ಎಂ.ಪಿ, ಉಪಾಧ್ಯಕ್ಷ ಟಿ.ಕೆ.ಸೂರ್ಯಕುಮಾರ್, ಕಾರ್ಯಾಧ್ಯಕ್ಷ ರಮೇಶ್.ಟಿ.ಎನ್, ಹಿರಿಯರಾದ ಆನಂದ ಸ್ವಾಮಿ ನಿರ್ದೇಶಕರಾದ ರಾಧಾಕೃಷ್ಣ ರೈ, ತಂಗ, ಮಹೇಶ್, ಸೀನ, ಭವಾನಿ, ಲೀಲಾ ಪಾಲ್ಗೊಂಡಿದ್ದರು.

ನಾಳೆ ಸುಂಟಿಕೊಪ್ಪದಲ್ಲಿ ಮಾಧ್ಯಮ ಸಂವಾದ

ಮಡಿಕೇರಿ,ಏ.9– ಸುಂಟಿಕೊಪ್ಪ ಪಟ್ಟಣ ವ್ಯಾಪ್ತಿಯಲ್ಲಿನ ಸಮಸ್ಯೆಗಳು ಹಾಗೂ ಅಭಿವೃದ್ಧಿ ಬಗ್ಗೆ ಗಮನ ಸೆಳೆಯುವ ನಿಟ್ಟಿನಲ್ಲಿ ಕುಶಾಲನಗರ ತಾಲೂಕು ಪತ್ರಕರ್ತರ ಸಂಘದಿಂದ ಏ.11ರ ಶುಕ್ರವಾರ ಬೆಳಗ್ಗೆ 10.30ಕ್ಕೆ ಸುಂಟಿಕೊಪ್ಪದ ವಿಎಸ್‌ಎಸ್‌ಎನ್ ಸಭಾಂಗಣದಲ್ಲಿ ಮಾಧ್ಯಮ ಸಂವಾದವನ್ನು ಆಯೋಜಿಸಲಾಗಿದೆ.

ಸಂಘದ ಅಧ್ಯಕ್ಷ ವಿಘ್ನೇಶ್ ಭೂತನಕಾಡು ಅಧ್ಯಕ್ಷತೆ ವಹಿಸುವರು. ಸಂವಾದದಲ್ಲಿ ಮುಖ್ಯ ಅತಿಥಿಗಳಾಗಿ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಹೆಚ್.ಟಿ, ಅನಿಲ್ ಪ್ರಭಾರ ಉಪ ತಹಶೀಲ್ದಾರ್ ಎನ್.ಆರ್. ಪ್ರಶಾಂತ್, ಗ್ರಾಪಂ ಅಧ್ಯಕ್ಷ ಪಿ.ಆರ್. ಸುನಿಲ್ ಕುಮಾರ್, ಪಿಡಿಒ ವಿ.ಜಿ. ಲೋಕೇಶ್, ಪೊಲೀಸ್ ಠಾಣಾಧಿಕಾರಿ ಜಗದೀಶ್, ವಿಎಸ್‌ಎಸ್‌ಎನ್ ಅಧ್ಯಕ್ಷ ಕೆ.ಎಸ್. ಮಂಜುನಾಥ್ ಪಾಲ್ಗೊಳ್ಳಲಿದ್ದಾರೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಬಿ. ವಿನ್ಸೆಂಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಲೆ ಹೆಚ್ಚಳ ವಿರೋಧಿಸಿ ಬಿಜೆಪಿ ಜನಾಕ್ರೋಶ

ಮಡಿಕೇರಿ,ಏ.9: ನಿತ್ಯೋಪಯೋಗಿ ವಸ್ತುಗಳ ಬೆಲೆ ಹೆಚ್ಚಳ, ಮುಸ್ಲಿಂ ಓಲೈಕೆ, ಪರಿಶಿಷ್ಟರಿಗೆ ಮೀಸಲಾದ ಹಣದ ಲೂಟಿ ಸೇರಿದಂತೆ ಕೊಡಗಿನ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣವನ್ನು ಮುಂದಿಟ್ಟುಕೊಂಡು ಬಿಜೆಪಿ ನಗರದಲ್ಲಿ ಇಂದು ಬೃಹತ್ 'ಜನಾಕ್ರೋಶ ಯಾತ್ರೆ' ನಡೆಯಿತು.

ನಗರದ ಮಾರುಕಟ್ಟೆ ಬಳಿಯ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ವಿಪಕ್ಷ ನಾಯಕ ಆರ್.ಅಶೋಕ್, ರಾಜ್ಯ ಬಿಜೆಪಿ ಮಾಜಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಎಂಎಲ್‌ಸಿ ಸುಜಾ ಕುಶಾಲಪ್ಪ, ಮಾಜಿ ಶಾಸಕ ಕೆ.ಜಿ.ಬೋಪಯ್ಯ, ಮಾಜಿ ಎಂಎಲ್‌ಸಿ ಎಸ್.ಜಿ.ಮೇದಪ್ಪ ವಿಶೇಷ ಪೂಜೆ ಸಲ್ಲಿಸಿ ಹಳೇ ಖಾಸಗಿ ಬಸ್ ನಿಲ್ದಾಣದವರೆಗೆ ಜನಾಕ್ರೋಶ ಯಾತ್ರೆ ಸಾಗಿ ಬಂತು. ವಿನಯ್ ಸೋಮಯ್ಯ ಸಾವಿನ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿ, ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆಗಳೊಂದಿಗೆ ಜಿಲ್ಲೆಯ ವಿವಿದೆಡೆಯಿಂದ ಆಗಮಿಸಿದ್ದ ಕಾರ್ಯಕರ್ತರು ಆಕ್ರೋಷ ವ್ಯಕ್ತಪಡಿಸಿದರು.

ಮುಸ್ಲಿಂ ತುಷ್ಟೀಕರಣ ವಿರೋಧಿಸುತ್ತೇವೆ: ನಗರದ ಹಳೇ ಖಾಸಗಿ ಬಸ್ ನಿಲ್ದಾಣದಲ್ಲಿ ನಡೆದ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದ ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಬಿಜೆಪಿ ಎಂದಿಗೂ ಮುಸ್ಲಿಂ ಸಮುದಾಯದ ವಿರೋಧಿಯಲ್ಲ. ಬದಲಾಗಿ ಕಾಂಗ್ರೆಸ್ ಸರ್ಕಾರ ತನ್ನ ಹಿತಕ್ಕೋಸ್ಕರ ಮುಸ್ಲಿಮರನ್ನು ಓಲೈಸುತ್ತಿರುವುದನ್ನು ಪಕ್ಷ ತೀವ್ರವಾಗಿ ವಿರೋಧಿಸುತ್ತದೆ ಎಂದು ಸ್ಪಷ್ಟಪಡಿಸಿದರು. ಮುಸ್ಲಿಂ ಹೆಣ್ಣು ಮಕ್ಕಳ ವಿದೇಶಿ ವ್ಯಾಸಂಗಕ್ಕೆ ರೂ.30 ಲಕ್ಷವನ್ನು ವಿವಾಹಕ್ಕೆ 50 ಸಾವಿರ ರೂ. ನೆರವನ್ನು ಸರ್ಕಾರ ಘೋಷಿಸಿದೆ. ಹಿಂದೂ ಸಮಾಜದಲ್ಲಿ ಬಡ ಹೆಣ್ಣು ಮಕ್ಕಳಿಲ್ಲವೆ? ಅವರೇನು ಅನ್ಯಾಯ ಮಾಡಿದ್ದಾರೆ? ಎಂದು ಪ್ರಶ್ನಿಸಿದರು.

ಹಿಂದೂಗಳ ಟಾರ್ಗೆಟ್ : ಹಿಂದೂಗಳನ್ನು ಒಡೆದು ತಮ್ಮ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನಕ್ಕೆ ಇಳಿದಿರುವ ರಾಜ್ಯದ ಸಿದ್ದರಾಮಯ್ಯ ನೇತೃತ್ವದ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಲು ಬಿಜೆಪಿ ಕಾರ್ಯಕರ್ತರು ಪಣತೊಡುವಂತೆ ವಿಧಾನ ಸಭೆಯ ವಿಪಕ್ಷ ನಾಯಕ ಆರ್.ಅಶೋಕ್ ಕರೆ ನೀಡಿದರು. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಬಳಿಕ ಹಿಂದೂಗಳ ಕಗ್ಗೊಲೆಗಳು ನಡೆಯುತ್ತಿರುವುದಾಗಿ ಆರೋಪಿಸಿದ ಅವರು, 'ಹಿಂದೂಗಳ ಟಾರ್ಗೆಟ್' ಮಾಡುವ ಪ್ರವೃತ್ತಿ ಹೆಚ್ಚು ದಿನ ನಡೆಯಲಾರದು ಎಂದು ಕಿಡಿ ಕಾರಿದರು.

ತುಘಲಕ್ ಸರ್ಕಾರ ತೊಲಗಲಿ: ರಾಜ್ಯ ಬಿಜೆಪಿ ಮಾಜಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಾತನಾಡಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 2 ವರ್ಷಗಳ ಅವಧಿಯಲ್ಲಿ ಹಿಂದೂ ಕಾರ್ಯಕರ್ತರ ಹತ್ಯೆ, ಗೋ ಹತ್ಯೆ ಪ್ರಕಣಗಳು ಹೆಚ್ಚಾಗಿದೆ. ಮತ್ತೊಂದೆಡೆ ಬೆಲೆ ಹೆಚ್ಚಳದಿಂದ ಜನರ ಹೊಟ್ಟೆಯ ಮೇಲೆ ಹೊಡೆಯುವ ಕೆಲಸವಾಗುತ್ತಿದೆ ಎಂದು ಆರೋಪಿಸಿದರು.

ಜೈಲಿಗೆ ಹಾಕುವ ಕೆಲಸ ಮಾಡುತ್ತೇವೆ : ಮಾಜಿ ಸಚಿವ ಶ್ರೀರಾಮುಲು ಮಾತನಾಡಿ, ವಿನಯ್ ಕುಮಾರ್ ಅವರ ಸಾವಿಗೆ ನ್ಯಾಯವನ್ನು ಪಡೆದುಕೊಂಡೇ ತೀರುತ್ತೇವೆ. ಮುಂದಿನ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬಂದೇ ಬರುತ್ತದೆ ಆಗ ಆತ್ಮಹತ್ಯೆಗೆ ಕಾರಣರಾದವರು ಪಾತಾಳದಲ್ಲಿ ಬಚ್ಚಿಟ್ಟುಕೊಂಡಿದ್ದರು ಅವರನ್ನು ಹಿಡಿದು ಜೈಲಿಗೆ ಹಾಕುವ ಕೆಲಸ ಮಾಡಿಯೇ ತೀರುವುದಾಗಿ ಶ್ರೀರಾಮುಲು ಗುಡುಗಿದರು.

ದೂರಿನಲ್ಲಿ ಹೆಸರು ಸೇರಿಸಿ: ವಿನಯ್ ಸೋಮಯ್ಯ ಆತ್ಮಹತ್ಯಾ ಪ್ರಕರಣದಲ್ಲಿ ಅವರು ಡೆತ್ ನೋಟ್‌ನಲ್ಲಿ ಸೂಚಿಸಿರುವಂತೆ ಜಿಲ್ಲೆಯ ಶಾಸಕರನ್ನು ಪ್ರಕರಣದಲ್ಲಿ ಸೇರಿಸಬೇಕೆಂದು ಸಂಸದ ಯದುವೀರ್ ಒತ್ತಾಯಿಸಿದರು. ರಾಜ್ಯದಲ್ಲಿ ಅಲ್ಪಸಂಖ್ಯಾತರ, ತುಷ್ಟೀಕರಣ, ಎಸ್‌ಸಿ ಎಸ್‌ಟಿ ಅಭ್ಯುದಯಕ್ಕಾಗಿ ಮೀಸಲಿಟ್ಟ ಹಣದ ದುರ್ಬಳಕೆ, ನೂತನ ವಿವಿಗಳನ್ನು ಮುಚ್ಚುವ ತೀರ್ಮಾನಗಳ ಬಗ್ಗೆ ಬೇಸರ ವ್ಯಕ್ತಪಡಿಸಿದರು.

ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಉದಯ ಕುಮಾರ್ ಶೆಟ್ಟಿ, ರಾಜ್ಯ ಮಹಿಳಾ ಮೋರ್ಚಾ ಪ್ರಮುಖರಾದ ರೀನಾ ಪ್ರಕಾಶ್, ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ, ಮೈಸೂರು ಶಾಸಕ ಶ್ರೀವತ್ಸ, ಮಾಜಿ ಶಾಸಕ ಪ್ರೀತಂ ಗೌಡ ವೇದಿಕೆಯಲ್ಲಿದ್ದರು. ಬಿಜೆಪಿ ಪ್ರಮುಖರಾದ ಶಾಂತೆಯಂಡ ರವಿ ಕುಶಾಲಪ್ಪ, ಬಿ.ಬಿ.ಭಾರತೀಶ್, ರಾಬಿನ್ ದೇವಯ್ಯ, ನಾಗೇಶ್ ಕುಂದಲ್ಪಾಡಿ, ಕಾಂತಿ ಸತೀಶ್, ಅನಿತಾ ಪೂವಯ್ಯ, ಕಾಂಗೀರ ಸತೀಶ್, ಮಹೇಶ್ ಜೈನಿ, ಬಿ.ಕೆ.ಜಗದೀಶ್, ವಿ.ಕೆ.ಲೋಕೇಶ್, ಉಮೇಶ್ ಸುಬ್ರಮಣಿ, ಅಪ್ರು ರವೀಂದ್ರ, ಸುವಿನ್ ಗಣಪತಿ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.



ನಿತ್ಯೋಪಯೋಗಿ ವಸ್ತುಗಳ ಬೆಲೆ ಹೆಚ್ಚಳ ವಿರೋಧಿಸಿ ಮಡಿಕೇರಿಯಲ್ಲಿ ಬಿಜೆಪಿ ಜನಾಕ್ರೋಶ ಯಾತ್ರೆ ನಡೆಸಿತು.

ಬೀದಿಗೆ ಬಿದ್ದ ಪತ್ರಿಕಾ ವಿತರಕನ ಬದುಕು!

ಅದೊಂದು ಹಿರಿಜೀವ ಪತ್ರಿಕಾ ವಿತರಣೆಯನ್ನೇ ತನ್ನ ಕಾಯಕವನ್ನಾಗಿ ಮಾಡಿಕೊಂಡು ಬದುಕು ದೂಡುತ್ತಿರುವ ಸಂದರ್ಭದಲ್ಲಿ ನಂಬಿಕೊಂಡಿದ್ದ ವಿನಾಯಕನನ್ನು. ಪ್ರತಿ ದಿನ ಬೆಳಗ್ಗೆನೇ ದೇವಸ್ಥಾನಕ್ಕೆ ಪ್ರದಕ್ಷಿಣೆ ಬಂದು ದೀರ್ಘ ನಮಸ್ಕಾರ ಹಾಕಿ ಆಸರೆಯಾಗಿರುವ ಸೈಕಲ್‌ನಲ್ಲಿ ಓದುಗರ ಮನೆಗೆ ಪತ್ರಿಕೆ ಹಾಕುವುದು ಈ ವ್ಯಕ್ತಿಯ ದೈನಂದಿನ ಕೆಲಸ.

ಕುಶಾಲನಗರದ ಪ್ರಕಾಶ್ ಎಲ್ಲರಿಗೂ ಪ್ರಕಾಶಣ್ಣ ಎಂದೇ ಪರಿಚಿತ. ಬೆಳಗ್ಗೆ 5 ಗಂಟೆಗೆ ಬಂದು ದೇವಸ್ಥಾನಕ್ಕೆ ಹೊಂದಿಕೊಂಡಂತಿರುವ ಮಳಿಗೆಯಲ್ಲಿ ಇಟ್ಟಿರುವ ಪೇಪರ್‌ಗಳ ಬಂಡಲ್‌ಗಳನ್ನು ಬಿಚ್ಚಿ ಅವನ್ನು ವಿಂಗಡಿಸಿ ಸೈಕಲ್‌ನ ಹಿಂದೆ ಮುಂದೆ ಇಟ್ಟುಕೊಂಡು ಮನೆ ಮತ್ತು ಅಂಗಡಿಗಳಿಗೆ ಹಾಕುವುದು ಮತ್ತೆ ತನ್ನ ಮಳಿಗೆಗೆ ಬಂದು ವಿಶ್ರಾಂತಿ ಹೋಗುವುದೇ ಇವರ ದಿನಚರಿ. ಈ ಮಳಿಗೆಗೂ ಇವರಿಗೂ ಏಳು ದಶಕಗಳ ಬಾಂಧವ್ಯ. ಅಂದಿನಿಂದಲೂ ಈ ಮಳಿಗೆಯಿಂದಲೇ ತಮ್ಮ ಬದುಕನ್ನು ಕಾಣುತ್ತಾ ನೆಮ್ಮದಿಯಿಂದ ಇದ್ದವರು. ಆದರೆ ಈಗ ಇವರ ಬದುಕಿಗೆ ಸಂಚಕಾರ ಬಂದೊದಗಿದೆ. ಈ ಇಳಿ ವಯಸ್ಸಿನಲ್ಲಿ ಮುಂದಿನ ಜೀವನ ಹೇಗಪ್ಪಾ ಎಂದು ಚಿಂತಿಸುವಂತಾಗಿದೆ.

ಗಣಪತಿ ದೇವಾಲಯದ ಸಮಿತಿ ಅಭಿವೃದ್ಧಿ ಕಾರ್ಯದ ನೆಪದಲ್ಲಿ ಸಂಪೂರ್ಣ ಕಟ್ಟಡವನ್ನು ಒಡೆದು ಹಾಕುತ್ತಿದೆ. ಇದರಿಂದ ಪ್ರಕಾಶ್‌ರ ಕಾಯಕಕ್ಕೆ ಸಂಕಷ್ಟವಾಗಿದೆ. ಪೇಪರ್‌ಗಳನ್ನು ಇಟ್ಟುಕೊಳ್ಳಲು ವಿಶ್ರಾಂತಿ ತೆಗೆದುಕೊಳ್ಳಲು ಆಸರೆಯೇ ಇಲ್ಲ. ಬೇಸಿಗೆಯ ಬಿರುಬಿಸಿಲಲ್ಲಿ ಈ ವ್ಯಕ್ತಿ ಹೇಗೆ ಕೆಲಸ ಮಾಡಬಹುದು ಎಂಬ ಅರಿವೂ ಇಲ್ಲದೆ ದೇವಸ್ಥಾನದ ಮಳಿಗೆಗಳನ್ನು ತೆರವುಗೊಳಿಸಿದ್ದಾರೆ.

ರಸ್ತೆ ಬದಿಯೇ ಆಸರೆ : ಮಳಿಗೆ ತೆರವಾಗಿದ್ದರಿಂದ ಪ್ರಕಾಶ್ ಪ್ರತಿ ದಿನ ಕೊರೆವ ಚಳಿಯಲ್ಲಿ ರಸ್ತೆಬದಿಯಲ್ಲೇ ಕುಳಿತು ಮಂಜಿನ ಹನಿಗಳ ನಡುವೆ ಪೇಪರ್ ಬಂಡಲ್ ಬಿಚ್ಚಬೇಕಾಗಿದೆ. ಮಧ್ಯಾಹ್ನ ವಿಶ್ರಾಂತಿಯನ್ನೂ ಅದೇ ಜಾಗದಲ್ಲಿ ಕೂದಲಿಲ್ಲದ ಬೊಕ್ಕ ತಲೆಗೆ ಸೂರ್ಯನ ತಾಪ ಬೀಳುವಂತಾಗಿದೆ. ಪಾಪ ಈ ವ್ಯಕ್ತಿ ಛತ್ರಿ ತೆಗೆದುಕೊಳ್ಳಲು ಶಕ್ಯವಿಲ್ಲದೆ ಪೇಪರನ್ನೇ ತಲೆ ಮೇಲಿಟ್ಟುಕೊಂಡು ಬಿಸಿಲಿಗೆ ತಡೆಯೊಡ್ಡುವಂತಾಗಿದೆ.

ಪ್ರಕಾಶ್ 15 ವರ್ಷದವನಿದ್ದಾಗಲೇ ಕೆಲಸವನ್ನು ಅರಸುತ್ತಿದ್ದಾಗ ಅಸರೆಯಾಗಿ ಬಂದಿದ್ದು, ಮಾಜಿ ಮುಖ್ಯಮಂತ್ರಿ ಗುಂಡೂರಾವ್. ಅವರು ಮಡಿಕೇರಿಯ ಜನಮಾನಸದ ಹೆಮ್ಮೆಯ ದಿನಪತ್ರಿಕೆ ಶಕ್ತಿ ಪತ್ರಿಕೆಗೆ ಬರೆಯುತ್ತಿದ್ದರಿಂದ ಅದರ ಪ್ರಭಾವದ ಮೇಲೆ ತನಗೆ ಏಜೆನ್ಸಿಯನ್ನು ಕೊಡಿಸಿದ್ದರೆಂದು ಈಗಲೂ ಸ್ಮರಿಸಿಕೊಳ್ಳುತ್ತಾರೆ. ಅವರು ಇಲ್ಲಿಗೆ ಬಂದಾಗಲೆಲ್ಲಾ ಜ್ಞಾಪಿಸಿಕೊಂಡು ನನ್ನನ್ನು ಕರೆಸಿ ಮಾತನಾಡಿಸುತ್ತಿದ್ದ ಸಹೃದಯಿ ಇಂಥವರು ಈಗೆಲ್ಲಿ ಸಿಗುತ್ತಾರೆ ಎಂದು ಅಲ್ಲಿನ ದಿನಮಾನಸವನ್ನು ಮೆಲುಕುಹಾಕಿದ್ದಾರೆ.

ಒಮ್ಮೆ ತನ್ನ ಮಳಿಗೆಯ ಮುಂದೆ ಅಶ್ವಿನಿ ಖಾಸಗಿ ಬಸ್ ನಲ್ಲಿ ಬಂದ ಬಂಡಲನ್ನು ಇಳಿಸುವಾಗ ಆಯತಪ್ಪಿ ಬಲಗಾಲಿನ ಮೇಲೆ ಬಿದ್ದ ಪರಿಣಾಮ ಈಗಲೂ ಕಾಲನ್ನು ಮಡಿಚಲಾಗದೆ ಪರಿತಪಿಸುತ್ತಿದ್ದೇನೆ ಈಗಂತೂ ರಸ್ತೆಬದಿ ಕೂರಲು ಆಗುತ್ತಿಲ್ಲ ಅಂಥ ದಯನೀಯ ಸ್ಥಿತಿ ಬಂದಿದೆ ಎಂದು ಮರುಗುತ್ತಾರೆ ಆದರೆ ತುತ್ತಿನ ಚೀಲಕ್ಕಾಗಿ ದುಡಿಯಬೇಕಾಗಿದೆ.

ಗಮನ ಹರಿಸಲಿ : ಪಟ್ಟಣದ ಪುರಸಭೆ ಅಧಿಕಾರಸ್ಥ ಪ್ರತಿನಿಧಿಗಳು, ಸ್ವಯಂಸೇವಾ ಸಂಸ್ಥೆಗಳು ಈ ಶ್ರಮಜೀವಿ ಪ್ರಕಾಶ್‌ಗೆ ಮಳಿಗೆಯೊಂದನ್ನು ಮಂಜೂರು ಮಾಡಿಸಲು ಸಾಧ್ಯವಿಲ್ಲವೆ? ಇವರ ದುಃಸ್ಥಿತಿ ರಾಜಕಾರಣಿಗಳ ಕಣ್ಣಿಗೆ ಬಿದ್ದಿಲ್ಲವೆ ಇಲ್ಲವೆ ಕಣ್ಣಿದ್ದೂ ಕುರುಡರಂತೆ ಇದ್ದಾರೆಯೆ? ದೇವಸ್ಥಾನದ ಆಡಳಿತ ಮಡಳಿಯವರು ಇವರ ಬಗ್ಗೆ ಏಕೆ ಗಮನಹರಿಸುತ್ತಿಲ್ಲ ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.



ಶ್ರಮಜೀವಿ ಪ್ರಕಾಶ್

ಮುತ್ತಂಡ ಹಾಕಿ ಇಂದಿನ ಪಂದ್ಯಾವಳಿ

ಮೈದಾನ–1: ಬೆಳಿಗ್ಗೆ 9 ಗಂಟೆಗೆ ಮದ್ರೀರ–ಜಮ್ಮಡ, 10 ಗಂಟೆಗೆ ಪಳಂಗಂಡ–ಚಪ್ಪಂಡ, 11 ಗಂಟೆಗೆ ಮಾಚಿಮಾಡ–ಮೇಚಿಯಂಡ, ಮಧ್ಯಾಹ್ನ 12 ಗಂಟೆಗೆ ಕೂತಂಡ–ಮಂಡೀರ(ನೆಲಜಿ), 1 ಗಂಟೆಗೆ ಬೊಳ್ಳಂಡ–ಕೇಳಪಂಡ, 2 ಗಂಟೆಗೆ ವಾಟೇರಿರ–ಬಾಚಿನಾಡಂಡ, 3 ಗಂಟೆಗೆ ಬಡ್ಡೀರ–ಕೇಚೇಟಿರ(ಕಡಗದಾಳು)

ಮೈದಾನ–2 : ಬೆಳಿಗ್ಗೆ 9.30 ಗಂಟೆಗೆ ಮಂಡೇಪಂಡ–ಮಾಚಂಡ, 10.30 ಗಂಟೆಗೆ ಮಂದನೆರವಂಡ–ಮಂಡೇಡ, 11.30ಕ್ಕೆ ಕಾಂಡೇರ–ಮೂಕಳಮಾಡ, 1 ಗಂಟೆಗೆ ಚೆರುಮಾಡಂಡ–ಚೌರೀರ (ಹೊದವಾಡ), 2 ಗಂಟೆಗೆ ಮುರುವಂಡ–ಚೆರಿಯಪಂಡ, 3 ಗಂಟೆಗೆ ಅಜ್ಜಿನಂಡ–ಬೈರೆಟೀರ

ಮೈದಾನ–3 : 9 ಗಂಟೆಗೆ ಅಣ್ಣಾಡಿಯಂಡ–ದಾಸಂಡ, 10 ಗಂಟೆಗೆ ಪರದಂಡ–ಬೊಪ್ಪಂಡ, 11 ಗಂಟೆಗೆ ಮುಡೆಯ್ಯಾಳಂಡ–ಚೌರೀರ (ಹೊದ್ದೂರು), 1 ಗಂಟೆಗೆ ಪಾಡೆಯಂಡ–ಕರ್ತಚ್ಚಿರ, 2 ಗಂಟೆಗೆ ಮೈಂದಪಂಡ–ಬಟ್ಟೀರ, 3 ಗಂಟೆಗೆ ಮಲ್ಲಮಾಡ–ಆಪಾಡಂಡ ತಂಡಗಳ ನಡುವೆ ಪೈಪೋಟಿ ನಡೆಯಲಿದೆ.



ಚೆಂಗುಲಂಡ ಮತ್ತು ಮಾತಂಡ ತಂಡಗಳ ನಡುವಿನ ಪೈಟೋಟಿ.

ಗುಡುಗು–ಸಿಡಿಲು; ಜೀವ ಹಾನಿ ತಡೆಯಲು ಜಿಲ್ಲಾಧಿಕಾರಿ ಸಲಹೆ



ಚಾಮರಾಜನಗರ,ಏ.9 – ಗುಡುಗು–ಸಿಡಿಲು ಬಡಿತದಿಂದ ಆಗುವ ಪ್ರಾಣಹಾನಿಯನ್ನು ತಡೆಯಲು ಸಾರ್ವಜನಿಕರು ಸಲಹೆ ಸೂಚನೆಗಳನ್ನು ಪಾಲಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದ್ದಾರೆ.

ಹೊರಗೆ ಹೋಗುವಾಗ ಮೊಬೈಲ್‌ನಲ್ಲಿ ಸಂದೇಶಗಳನ್ನು ಗಮನಿಸಬೇಕು. ಪ್ರತಿಕೂಲ ಹವಾಮಾನದ ಸಮಯದಲ್ಲಿ ವಿಶೇಷವಾಗಿ ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡಲು, ಜಾನುವಾರುಗಳನ್ನು ಮೇಯಿಸಲು, ಮನೆಯಿಂದ ಹೊರಗೆ ಹೋಗಬಾರದು. ಗುಡುಗು–ಸಿಡಿಲಿನ ಸಂದರ್ಭದಲ್ಲಿ ಲೋಹದ ತಗಡನ್ನು ಹೊದಿಸಿರುವ ಮನೆಗಳು ಸುರಕ್ಷಿತವಲ್ಲ. ಇಂಥ ಸಮಯದಲ್ಲಿ ಸುರಕ್ಷಿತವಾದ ಕಟ್ಟಡಗಳಲ್ಲಿ ಆಶ್ರಯ ಪಡೆಯಬೇಕು.

ವಿದ್ಯುತ್ ಉಪಕರಣ ಹಾಗೂ ವಿದ್ಯುತ್ ಸರಬರಾಜು ಮಾರ್ಗ, ದೂರವಾಣಿ ಸಂಪರ್ಕ, ಮೊಬೈಲ್ ಟವರ್, ಪವನ ವಿದ್ಯುತ್ ಗೋಪುರ ಹಾಗೂ ರೈಲು ಹಳಿಗಳಿಂದ ದೂರವಿರಬೇಕು. ವಾಹನ ಚಾಲನೆಯಲ್ಲಿದ್ದರೆ ತಕ್ಷಣವೇ ವಾಹನ ನಿಲ್ಲಿಸಿ ವಾಹನದಲ್ಲಿಯೇ ಆಶ್ರಯ ಪಡೆಯಬೇಕು. ಗುಡುಗು ಸಿಡಿಲಿನ ಸಮಯದಲ್ಲಿ ಗುಂಪಿನಲ್ಲಿದ್ದರೆ ಅಪಾಯವನ್ನು ಕಡಿಮೆ ಮಾಡಲು ಸಾಕಷ್ಟು ಅಂತರವನ್ನು ಕಾಯ್ದುಕೊಳ್ಳಬೇಕು.

ಹೊರಾಂಗಣದಲ್ಲಿ ಕೆಲಸ ಮಾಡುತ್ತಿದ್ದರೆ ಮತ್ತು ಸುರಕ್ಷಿತ ಸ್ಥಳದಲ್ಲಿ ಆಶ್ರಯ ಪಡೆಯಲು ಸಾಕಷ್ಟು ಸಮಯವಿಲ್ಲದಿದ್ದರೆ 2 ಕಾಲುಗಳನ್ನು ಜೋಡಿಸಿ ಮಂಡಿಯೂರಿ ಕುಳಿತುಕೊಂಡು ತಲೆಯನ್ನು ಬಗ್ಗಿಸಿ ಕಿವಿಗಳನ್ನು ಮುಚ್ಚಿಕೊಳ್ಳಬೇಕು. ವಿದ್ಯುತ್ ಅಥವಾ ಟೆಲಿಫೋನ್ ಕಂಬಗಳು ಅಥವಾ ಮರಗಳ ಕೆಳಗೆ ಆಶ್ರಯ ಪಡೆಯಬಾರದು. ಇವು ಸಿಡಿಲನ್ನು ಆಕರ್ಷಿಸುತ್ತದೆ. ಅರಣ್ಯ ಪ್ರದೇಶದಲ್ಲಿದ್ದರೆ ಸಣ್ಣ/ಚಿಕ್ಕ ಮರಗಳ ಕೆಳಗೆ ಆಶ್ರಯ ಪಡೆಯಬೇಕು. ಲೋಹದ ವಸ್ತುಗಳನ್ನು ಬಳಸಬಾರದು ಮತ್ತು ದ್ವಿಚಕ್ರ ವಾಹನಗಳು, ವಿದ್ಯುತ್ ಅಥವಾ ದೂರವಾಣಿ ಕಂಬಗಳು, ತಂತಿ ಬೇಲಿ, ಯಂತ್ರಗಳು ಇತ್ಯಾದಿಗಳಿಂದ ದೂರವಿರಬೇಕು. ಮೊಬೈಲ್‌ಗಳನ್ನು ಬಳಸಬಾರದು.

ಕಬ್ಬಿಣದ ಸರಳುಗಳಿಂದ ಕೂಡಿದ ಛತ್ರಿಗಳನ್ನು ಬಳಸಬಾರದು. ಕಿಟಕಿ, ಬಾಗಿಲುಗಳನ್ನು ಮುಚ್ಚಿ ಬೆಂಕಿ ಮತ್ತು ವಿದ್ಯುತ್ ಶಕ್ತಿ ಸಂಪರ್ಕದಿಂದ ದೂರವಿರಬೇಕು. ಮಕ್ಕಳು, ವಯೋವೃದ್ಧರು ಹಾಗೂ ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಲ್ಲಿ ಇರುವಂತೆ ಗಮನಹರಿಸಬೇಕು. ಹಾರುವ ಮತ್ತು ಅಪಘಾತಕ್ಕೆ ಕಾರಣವಾಗಬಹುದಾದ ಮರದ ಕಟ್ಟಿಗೆ ಅಥವಾ ಇತರ ಯಾವುದೇ ಅವಶೇಷಗಳನ್ನು ತೆಗೆದುಹಾಕಬೇಕು.

ಸಿಡಿಲು ಸಂದರ್ಭದಲ್ಲಿ ಕಟ್ಟಡದ ಕೊಳಾಯಿ ಮತ್ತು ಲೋಹದ ಕೊಳವೆಗಳ ಮೂಲಕ ಹರಿಯುವ ಸಾಧ್ಯತೆ ಇರುವುದರಿಂದ ಸಿಡಿಲು ಉಂಟಾಗುವ ಸಂದರ್ಭದಲ್ಲಿ ಸ್ನಾನ ಅಥವಾ ಶವರ್ ತೆಗೆದುಕೊಳ್ಳಬಾರದು. ಪಾತ್ರೆಗಳನ್ನು ತೊಳೆಯಬಾರದು. ಮೋಟಾರ್ ಸೈಕಲ್ ಅಥವಾ ಇನ್ನಿತರೆ ಯಾವುದೇ ತೆರೆದ ವಾಹನಗಳ ಸಂಚಾರ ಮಾಡಬಾರದು. ಆಟದ ಮೈದಾನ, ಉದ್ಯಾನವನಗಳು ಈಜುಕೊಳ ಮತ್ತು ಕಡಲ ತೀರಗಳಿಗೆ ಹೋಗುವುದನ್ನು ತಪ್ಪಿಸಬೇಕೆಂದು ಶಿಲ್ಪಾನಾಗ್ ಪತ್ರಿಕಾಹೇಳಿಕೆಯಲ್ಲಿ ಹೇಳಿದ್ದಾರೆ.

ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಮಲೆಯಾಳಂ ಚಿತ್ರದ ಚಿತ್ರೀಕರಣ

ಶೂಟಿಂಗ್ ವಿರೋಧಿಸಿ ರೈತ ಸಂಘ ಪ್ರತಿಭಟನೆ



ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಮಲೆಯಾಳಂ ಚಿತ್ರದ ಶೂಟಿಂಗ್ ನಡೆಯುತ್ತಿರುವುದು.

ಗುಂಡ್ಲುಪೇಟೆ,ಏ–9–ಯಾವುದೇ ಸೂಕ್ತ ಬಂದೋಬಸ್ತ್ ಇಲ್ಲದೆ ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಮಲೆಯಾಳಂ ಚಿತ್ರದ ಶೂಟಿಂಗ್‌ಗೆ ಅರಣ್ಯ ಇಲಾಖೆ ಅನುಮತಿ ಕೊಟ್ಟಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಬೆಂಗಳೂರಿನ ಅರಣ್ಯ ಭವನದಿಂದ ಸಿನಿಮಾ ಚಿತ್ರೀಕರಣಕ್ಕೆ ಅನುಮತಿ ಪಡೆದ ಮಲೆಯಾಳಂ ಚಿತ್ರತಂಡದವರು ಮಂಗಳವಾರ ಸ್ಥಳೀಯ ಪೊಲೀಸರ ಅನುಮತಿಯನ್ನೂ ಪಡೆದುಕೊಳ್ಳದೆ ಮೂರು ಬಸ್ಸುಗಳನ್ನು ಬೆಟ್ಟದ ಮೇಲಕ್ಕೆ ಕೊಂಡೊಯ್ದರು. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿರುವ ಬೆಟ್ಟದ ಮೇಲಿರುವ ದೇವಾಲಯಕ್ಕೆ ಖಾಸಗಿ ವಾಹನಗಳನ್ನು ನಿರ್ಬಂಧಿಸಲಾಗಿದೆ. ದೇವಾಲಯಕ್ಕೆ ಹೋಗುವ ಸ್ಥಳೀಯ ಭಕ್ತರು ಮತ್ತು ಪ್ರವಾಸಿಗರು ತಮ್ಮ ವಾಹನಗಳನ್ನು ತಪ್ಪಲಿನಲ್ಲಿ ನಿಲ್ಲಿಸಿ ಸಾರಿಗೆ ಬಸ್ಸುಗಳಲ್ಲಿಯೇ ಹೋಗಿಬರುತ್ತಿದ್ದಾರೆ. ಆದರೆ ಮಲೆಯಾಳಂ ಚಿತ್ರದ ಚಿತ್ರೀಕರಣಕ್ಕೆ ಅರಣ್ಯ ಇಲಾಖೆ ಮೂರು ಬಸ್ಸುಗಳನ್ನು ಬಿಟ್ಟುಕೊಂಡಿದ್ದು ಸ್ಥಳೀಯರ ಹಾಗೂ ಭಕ್ತರ ಸಿಟ್ಟಿಗೆ ಕಾರಣವಾಗಿದೆ.

ಆದರೆ ಅರಣ್ಯ ಇಲಾಖೆ ಚಿತ್ರೀಕರಣದ ಬಗ್ಗೆ ಸ್ಥಳೀಯ ಪೊಲೀಸರಿಗೆ ಮಾಹಿತಿಯನ್ನೂ ನೀಡದೆ ಶೂಟಿಂಗ್ ವೇಳೆಯಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಮುನ್ನೆಚ್ಚರಿಕೆ ಕೈಗೊಳ್ಳದ ಪರಿಣಾಮ ಬೆಟ್ಟದ ಮೇಲೆ ನೂಕುನುಗ್ಗಲುಂಟಾಗಿತ್ತು. ಚಿತ್ರೀಕರಣದ ವಿಷಯ ತಿಳಿದು ಏಕಕಾಲದಲ್ಲಿ ಬೆಟ್ಟಕ್ಕೆ ಸಾವಿರಾರು ಜನರು ಆಗಮಿಸಿದ್ದರಿಂದ ಮತ್ತಷ್ಟು ಗೊಂದಲವುಂಟಾಯಿತು.

ದೇವಾಲಯದ ಎದುರು ಚಿತ್ರೀಕರಣಕ್ಕೆ ಬೃಹತ್ ರಿಫ್ಲೆಕ್ಟರುಗಳು ಹಾಗೂ ಅಬ್ಬರದ ಸಂಗೀತದ ಜತೆಗೆ ಜನರೇಟರ್ ಬಳಕೆ ಮಾಡಿದ್ದರಿಂದ ಪರಿಸರಸೂಕ್ಷ್ಮ ಅರಣ್ಯ ಪ್ರದೇಶದಲ್ಲಿ ಭಾರೀ ಗದ್ದಲವುಂಟಾಗಿತ್ತು. ಇದರಿಂದ ಬೆಟ್ಟಕ್ಕೆ ಆಗಮಿಸಿದ್ದ ಭಕ್ತರು ದೇವಾಲಯದಲ್ಲಿ ಸ್ವಾಮಿಯ ದರ್ಶನ ಪಡೆಯಲು ಪರದಾಡುವಂತಾಗಿತ್ತು.

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಸೂಕ್ಷ್ಮ ಪರಿಸರ ವಲಯದಲ್ಲಿರುವ ಹಿಮವದ್ ಗೋಪಾಲಸ್ವಾಮಿಬೆಟ್ಟದಲ್ಲಿ ಮಲೆಯಾಳಂ ಸಿನಿಮಾ ಶೂಟಿಂಗ್‌ಗೆ ಅವಕಾಶ ನೀಡಿದ್ದರ ವಿರುದ್ಧ ರೈತ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಹಿಮವದ್ ಗೋಪಾಲಸ್ವಾಮಿಬೆಟ್ಟದ ತಪ್ಪಲಿನ ಚೆಕ್ ಪೋಸ್ಟ್ ಬಳಿ ರೈತ ಸಂಘದ ಮುಖಂಡ ಮಾಡ್ರಳ್ಳಿ ಮಹದೇವಪ್ಪ ನೇತೃತ್ವದಲ್ಲಿ ಇಂದು ಪ್ರತಿಭಟನೆಯನ್ನು ನಡೆಸಿದ ಕಾರ್ಯಕರ್ತರು ಅರಣ್ಯ ಇಲಾಖೆಯ ವಿರುದ್ಧ ಘೋಷಣೆ ಕೂಗಿ ಮಲೆಯಾಳ ಸಿನಿಮಾದ ಶೂಟಿಂಗ್‌ಗಾಗಿ ಅರಣ್ಯ ಕಾಯಿದೆಯನ್ನು ಉಲ್ಲಂಘನೆ ಮಾಡಿರುವ ಅರಣ್ಯ ಇಲಾಖೆ ಅಧಿಕಾರಿಗಳನ್ನು ಅಮಾನತು ಪಡಿಸುವಂತೆ ಒತ್ತಾಯಿಸಿದರು.

ಶೂಟಿಂಗ್ ನಡೆಸಿರುವವರು ಅರಣ್ಯ ಇಲಾಖೆಗೆ 1 ಲಕ್ಷ ರೂಪಾಯಿ ಹಣ ಕಟ್ಟಿದ್ದಾರೆ ಎಂದು ಗೋಪಾಲಸ್ವಾಮಿ ಬೆಟ್ಟ ವಲಯದ ಆರ್‌ಎಫ್‌ಓ ಮಲ್ಲೇಶ್ ಹೇಳುತ್ತಿದ್ದು, ಅರಣ್ಯ ಭವನ ಅಥವಾ ಸರ್ಕಾರದಿಂದ ಬಂಡೀಪುರ ಕಚೇರಿಗೆ ಮೇಲ್ ಮೂಲಕ ಬಂದಿರುವ ಆದೇಶದ ಪ್ರತಿ ಕೇಳಿದರೆ ನೀಡಲು ನಿರಾಕರಿಸುತ್ತಿದ್ದಾರೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದ್ದರೂ ಜಿಲ್ಲಾಧಿಕಾರಿಯವರ ಅನುಮತಿ ಪಡೆದಿಲ್ಲ. ಈ ಬಗ್ಗೆ ದೂರು ನೀಡಿದರೆ ಕ್ರಮಕೈಗೊಳ್ಳುವುದಾಗಿ ಹೆಚ್ಚುವರಿ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ರೈತ ಸಂಘದ ತಾಲೂಕು ಅಧ್ಯಕ್ಷ ಹೊಸೂರು ಮಹೇಶ್, ಮುಖಂಡರಾದ ಹಾಲಹಳ್ಳಿ ಮಹೇಶ್, ವೃಷಭೇಂದ್ರ, ಕಬ್ಬಹಳ್ಳಿ ಪ್ರಕಾಶ್, ಮಲ್ಲು, ಬೆಟ್ಟದಮಾದಹಳ್ಳಿ ಲೋಕೇಶ್, ಬುದ್ದಿಯವರು, ಜಗದೀಶ್, ಪ್ರಭುಸ್ವಾಮಿ, ರಮೇಶ್ ಸೇರಿದಂತೆ ಹಲವರು ಇದ್ದರು.



ಸಿನಿಮಾ ಚಿತ್ರೀಕರಣಕ್ಕೆ ಅವಕಾಶ ನೀಡಿರುವ ಅಧಿಕಾರಿಗಳ ಅಮಾನತಿಗೆ ಒತ್ತಾಯಿಸಿ ರೈತಸಂಘದ ಕಾರ್ಯಕರ್ತರು ಬೆಟ್ಟದ ತಪ್ಪಲಿನಲ್ಲಿ ಪ್ರತಿಭಟನೆ ನಡೆಸಿದರು.

ವಿದ್ಯುತ್ ಕಂಬಕ್ಕೆ ಟಾಟಾ ಏಸ್ ಡಿಕ್ಕಿ ಚಾಲಕ ಸಾವು, ಮಕ್ಕಳಿಗೆ ಗಾಯ



ಚಾಮರಾಜನಗರ: ಟಾಟಾ ಏಸ್ ವಾಹನ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಚಾಲಕ ಸಾವನ್ನಪ್ಪಿ, ಮಕ್ಕಳಿಬ್ಬರು ಗಾಯವಾಗಿರುವ ಘಟನೆ ತಾಲೂಕಿನ ಮಾದಾಪುರ ಬಳಿ ನಡೆದಿದೆ.

ಬೆಂಗಳೂರಿನ ಕೆಂಗೇರಿಯ ನಿವಾಸಿ ಸುಬ್ರಹ್ಮಣ್ಯ(55) ಮೃತಪಟ್ಟ ವ್ಯಕ್ತಿ ಎಂದು ಗುರುತಿಸಲಾಗಿದ್ದು, ಈತನ ಮಕ್ಕಳಾದ ಧೃತಿ(12) ಹಾಗೂ ವರ್ಷಾ(4) ಗಾಯಗೊಂಡಿದ್ದಾರೆ. ಸುಬ್ರಹ್ಮಣ್ಯ ತನ್ನ ಇಬ್ಬರು ಮಕ್ಕಳೊಂದಿಗೆ ಟಾಟಾ ಏಸ್ ವಾಹನದಲ್ಲಿ ಸಂತೇಮರಹಳ್ಳಿ ಕಡೆಗೆ ತೆರಳುತ್ತಿದ್ದಾಗ ಮಾದಾಪುರ ಬಳಿ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ವಾಹನ ಚಾಲನೆ ಮಾಡುತ್ತಿದ್ದ ಸುಬ್ರಹ್ಮಣ್ಯ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಸಂಚಾರ ಠಾಣೆಯ ಪೊಲೀಸರು ಭೇಟಿ ನೀಡಿ ವಾಹನವನ್ನು ವಶಕ್ಕೆ ಪಡೆದುಕೊಂಡು, ಮೃತ ದೇಹವನ್ನು ಯಡಬೆಟ್ಟದ ಬಳಿ ಇರುವ ಸಿಮ್ಸ್ ಆಸ್ಪತ್ರೆಯ ಶವಗಾರಕ್ಕೆ ರವಾನಿಸಲಾಗಿದ್ದು, ಗಾಯಗೊಂಡ ಮಕ್ಕಳಿಗೆ ಚಿಕಿತ್ಸೆ ಕೊಡಿಸಿ ಅವರ ಸಂಬಂಧಿಕರಿಗೆ ಒಪ್ಪಿಸಲಾಗಿದೆ ಎಂದು ಠಾಣೆಯ ಪೊಲೀಸರು ಮಾಹಿತಿ ನೀಡಿದ್ದಾರೆ. ಈ ಸಂಬಂಧ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಂತವೇರಿ ಗೋಪಾಲಗೌಡರು ಆದರ್ಶ ರಾಜಕಾರಣಿ: ಬಿ.ಸೋಮಶೇಖರ್

ಚಾಮರಾಜನಗರ, ಏ.9–ಕರ್ನಾಟಕ ಏಕೀಕರಣದ ರೂವಾರಿ ಶಾಂತವೇರಿ ಗೋಪಾಲಗೌಡರು ಬಡವರು, ಶೋಷಿತರ ಗಟ್ಟಿಧ್ವನಿಯಾಗಿದ್ದು, ಅಪ್ಪಟ ದೇಶಭಕ್ತರಾಗಿ ಆದರ್ಶ ರಾಜಕಾರಣಿಯಾಗಿದ್ದರು ಎಂದು ಮಾಜಿ ಸಚಿವ ಬಿ.ಸೋಮಶೇಖರ್ ಹೇಳಿದ್ದಾರೆ.


ನಗರದ ರೋಟರಿ ಭವನದಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ಹಾಗೂ ರೋಟರಿ ಸಂಸ್ಥೆ ಸಹಕಾರದೊಂದಿಗೆ ಕರ್ನಾಟಕ ಸುವರ್ಣ ಸಂಭ್ರಮ ಮಹೋತ್ಸವ ಅಂಗವಾಗಿ ಕರ್ನಾಟಕ ಏಕೀಕರಣದ ರೂವಾರಿ ಶಾಂತವೇರಿ ಗೋಪಾಲಗೌಡ ಸ್ಮರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕಾಗೋಡು ಸತ್ಯಾಗ್ರಹ ದೇಶಾದ್ಯಂತ ಹೆಸರುವಾಸಿಯಾಯಿತು. ಗೇಣಿದಾರರ ಪರವಾಗಿ ಕೆಲಸ ಮಾಡಿದರು ಕ್ವಿಟ್ ಇಂಡಿಯಾ ಚಳವಳಿಯಲ್ಲೂ ಪ್ರಮುಖಪಾತ್ರ ವಹಿಸಿದ್ದರು ಎಂದರು.

ಶಾಂತವೇರಿ ಗೋಪಾಲಗೌಡರು ವಿಧಾನ ಸಭೆಯಲ್ಲಿ ಗರ್ಜಿಸುತ್ತಿದ್ದರೆ, ಮುಖ್ಯಮಂತ್ರಿಗಳು, ಸಚಿವರು ಹೆದರುತಿದ್ದರೆಂಬುದಕ್ಕೆ ಅವರೇ ಒಂದು ನಿದರ್ಶನ ಎಂದರು.

ವಿಧಾನಸಭೆಗೆ ಇಂದು ರಿಯಲ್ ಎಸ್ಟೇಟ್ ಮಾಡುವವರು, ದೊಡ್ಡದೊಡ್ಡ ಉದ್ಯಮಿಗಳು, ಸಾವಿರಾರು ಕೋಟಿ ಲೂಟಿಕೋರರು, ಮೋಸ ಮಾಡಿ ಸರ್ಕಾರಿ ಜಮೀನು ಕಬಳಿಸಿರುವವರು ಹಣ ಮಾಡಿರುವವರು ಚುನಾವಣೆಗಳಲ್ಲಿ ಹಣ ಚೆಲ್ಲಿ ಗೆದ್ದು ಬರುತ್ತಿದ್ದಾರೆ. ಇಂತಹ ವ್ಯವಸ್ಥೆಯಲ್ಲಿ ಪ್ರಾಮಾಣಿಕರು ಹೇಗೆ ಬರಲು ಸಾಧ್ಯ ಎಂದು ಅವರು ಪ್ರಶ್ನಿಸಿದರು.

ನಿಜಲಿಂಗಪ್ಪ, ಲಾಲ್ ಬಹುದ್ದೂರು ಶಾಸ್ತ್ರಿ ಅವರನ್ನು ಯಾವುದೇ ಜಾತಿ ಅಂಥಾ ನೋಡುತ್ತಿರಲಿಲ್ಲ. ಅವರು ಅಧಿಕಾರದಲ್ಲಿದ್ದಾಗ ಜಾತಿ ಪರ ಕೆಲಸ ಮಾಡಿದವರಲ್ಲ. ಅವರು ಮಾಡಿದಂತಹ ಕಾನೂನುಗಳು, ಯೋಜನೆಗಳು ರೈತರು, ಮಹಿಳೆಯರು ಬಡವರ ಪರವಾಗಿದ್ದವು ಎಂದರು.

ಹರವೆ ವಿರಕ್ತ ಮಠದ ಸರ್ಪಭೂಷಣ ಸ್ವಾಮೀಜಿ ದಿವ್ಯಸಾನಿಧ್ಯ ವಹಿಸಿದ್ದರು. ಮೈಸೂರು ಶಾಂತವೇರಿ ಗೋಪಾಲಗೌಡ ಸ್ಮಾರಕ ಆಸ್ಪತ್ರೆಯ ನರರೋಗ ವಿಭಾಗಗಳ ವ್ಯವಸ್ಥಾಪಕ ನಿರ್ದೇಶಕ ಡಾ.ಶುಶ್ರುತ್‌ಗೌಡ ಅಧ್ಯಕ್ಷತೆ ವಹಿಸಿದ್ದರು.



ಶಾಂತವೇರಿ ಗೋಪಾಲಗೌಡರ ಸ್ಮರಣೆ ಕಾರ್ಯಕ್ರಮವನ್ನು ಮಾಜಿ ಸಚಿವ ಬಿ.ಸೋಮಶೇಖರ್ ಉದ್ಘಾಟಿಸಿದರು.

ಕೇಂದ್ರ ಸರ್ಕಾರದ ವಿರುದ್ಧ ಜಿಲ್ಲಾ ಯುವ ಕಾಂಗ್ರೆಸ್ ಪ್ರತಿಭಟನೆ

ಚಾಮರಾಜನಗರ: ಪೆಟ್ರೋಲ್, ಡಿಸೇಲ್, ಎಲ್‌ಪಿಜಿ ಗ್ಯಾಸ್ ಬೆಲೆ ಏರಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಜಿಲ್ಲಾ ಯುವ ಕಾಂಗ್ರೆಸ್ ಪ್ರತಿಭಟನೆ ನಡೆಸಿತು.

ನಗರದ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗ ಯುವ ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷ ಸಿ.ಯೋಗೇಂದ್ರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಖಾಲಿ ಸಿಲಿಂಡರ್, ಸೈಕಲ್, ಸೌದೆ ಒಲೆಯನ್ನು ಹೊತ್ತುಕೊಂಡು ಭುವನೇಶ್ವರಿ ವೃತ್ತದವರೆಗೆ ಮೆರವಣಿಗೆ ನಡೆಸಿ, ಮಾನವ ಸರಪಳಿ ನಿರ್ಮಿಸಿ ರಸ್ತೆಯಲ್ಲೇ ಸೌದೆ ಒಲೆಯಲ್ಲಿ ಅಡುಗೆ ಮಾಡಿ, ಕೇಂದ್ರದ ವಿರುದ್ಧ ಘೋಷಣೆ ಕೂಗಿದರು.

ದೇಶದಲ್ಲಿ ನಿರುದ್ಯೋಗ್ಯ ಸಮಸ್ಯೆ ಹೆಚ್ಚಾಗಿದ್ದು, ಬಡವರು ಹಾಗೂ ಮಧ್ಯಮ ವರ್ಗದ ಜನರು ಜೀವನ ನಡೆಸುವುದು ಕಷ್ಟಕರವಾಗಿರುವಾಗ ಡಿಸೇಲ್, ಪೆಟ್ರೋಲ್ ಹಾಗೂ ಅಡುಗೆ ಅನಿಲದ ಬೆಲೆ ಏರಿಕೆ ಮಾಡಿರುವುದು ಖಂಡನೀಯವಾಗಿದೆ ಕೂಡಲೇ ಪೆಟ್ರೋಲ್, ಡಿಸೇಲ್ ಹಾಗೂ ಅಡುಗೆ ಅನಿಲದ ಬೆಲೆಯನ್ನು ಇಳಿಕೆ ಮಾಡಬೇಕು. ಇಲ್ಲದಿದ್ದರೆ ಮುಂದೆ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಯುವ ಕಾಂಗ್ರೆಸ್‌ನ ಜಿಲ್ಲಾ ಉಪಾಧ್ಯಕ್ಷ ಸೈಯದ್ ಮುಸಾಯಿಬ್, ಮುಖಂಡರಾದ ಫರ್ದನ್, ಗೀತಾ ಸಿದ್ದರಾಜು, ಚಂದನ್, ನಂಜುಂಡಶೆಟ್ಟಿ, ವಿಶ್ವ, ನಾಗೇಂದ್ರನಾಯಕ, ಗೌಡಹಳ್ಳಿ ರಾಜೇಶ್, ಅಕ್ಷಯ್ ಕುಮಾರ್, ಉಸ್ಮಾನ್, ಸಚಿನ್, ಮೋಹನ್‌ನಾಗು, ಶಶಾಂಕ್, ಮುತ್ತು, ಸ್ವಾಮಿ, ಅನಂತ್, ಸೈಯದ್ ತೋಸಿಫ್, ಲೋಹಿತ್, ವಿಜಯ್, ಅಜಯ್, ವಿಶ್ವ, ಶಿವರಾಜ್, ಪೃಥ್ವಿ, ವಿಶ್ವಾಸ್, ಮಾದೇಶ್, ನವೀನ್ ಇತರರು ಇದ್ದರು.



ಕೇಂದ್ರ ಸರ್ಕಾರದ ವಿರುದ್ಧ ಜಿಲ್ಲಾ ಯುವ ಕಾಂಗ್ರೆಸ್ ಪ್ರತಿಭಟನೆ ನಡೆಸಿತು.

ನಗರದಲ್ಲಿ ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಸಂತೇಮರಹಳ್ಳಿ ವ್ಯಾಪ್ತಿ ತುರ್ತು ನಿರ್ವಹಣೆ ಕಾಮಗಾರಿ ನಿಮಿತ್ತ ಏ.11ರಂದು ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ಹೊಂಗನೂರು, ಮಸಣಾಪುರ, ಕಳ್ಳೀಪುರ, ಗಂಗವಾಡಿ, ಇರಸವಾಡಿ, ಸುತ್ತೂರು, ಚಾಟಿಪುರ, ರೇಚಂಬಳ್ಳಿ, ಹೆಚ್.ಮೂಕಳ್ಳಿ, ಬೂದಂಬಳ್ಳಿ, ಬೂದಂಬಳ್ಳಿ ಮೋಳೆ, ಹೊಮ್ಮ, ಗೂಳಿಪುರ, ಜ್ಯೋತಿಗೌಡನಪುರ, ನಲ್ಲೂರು ಮೋಳೆ, ನಂಜರಾಜಪುರ, ಕುರುಬರಹುಂಡಿ, ಕರುಳುಮೋಳೆ, ಕಾಗಲವಾಡಿಮೋಳೆ, ಅಮ್ಮನಪುರ, ಕೋಟಂಬಳ್ಳಿ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
We are looking for a female technologist to join our skin & hair Clinic in J P Nagar, Mysore
Age: Below 30 years
Qualification: Graduate
Salary : Rs.20000+
Send your resume via Whatsapp to
8310091538

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು/ಹುಡುಗರು ಬೇಕಾಗಿದ್ದಾರೆ.
ಸಂಬಳ: 15,000/–
7899754149

1 1/2 ಎಕರೆ ಕೃಷಿ ಭೂಮಿ ಮಾರಾಟಕ್ಕಿದೆ
ಮೈಸೂರು–ಕೊಳ್ಳೇಗಾಲ ರಾಷ್ಟ್ರೀಯ ಹೆದ್ದಾರಿ ಪಕ್ಕ ಮಾಡ್ರಳ್ಳಿ ಗೇಟ್ ಹತ್ತಿರ ಮೈಸೂರಿನಿಂದ 45 ಕಿ.ಮೀ
ಸಂಪರ್ಕಿಸಿ:
9964787876
6363698564

ಬೇಕಾಗಿದ್ದಾರೆ
ಮಹಿಳಾ ಮನೆ ಕೆಲಸಗಾರರು ಬೇಕಾಗಿದ್ದಾರೆ
ಉಚಿತ ವಸತಿ, ಉಚಿತ ಊಟ
ಭಾಷೆ ಕನ್ನಡ
ಸ್ಥಳ: ಬೆಂಗಳೂರು
6364579371

WANTED
- Architects (B.Arch/D.Arch)
- Civil (BE./Dip.)
- Interior Designer

With Min. 1 year experience
Good Experience in Auto CADD & 3D Design
GANESH CONSTRUCTIONS
Hebbal, Mysore
Mob: +91 99162 50327

5 ದಿನ ಶಿರಡಿ ಪ್ರವಾಸ ರೈಲಿನಲ್ಲಿ ಸ್ಲೀಪರ್ ಕ್ಲಾಸ್
07–06–2025 (ಶನಿವಾರ) ಶಿರಡಿ, ಶನಿಸಿಂಗನಾಪುರ, ಭದ್ರ ಮಾರುತಿ, ಮಿನಿ ತಾಜ್‌ಮಹಲ್, ಎಲ್ಲೋರಾ, ಘೃಷ್ಣೇಶ್ವರ (ಜ್ಯೋತಿರ್ಲಿಂಗ), ಸಪ್ತ ಶೃಂಗಿ ಮಾತಾ. ಊಟ, ವಸತಿ ಸೇರಿ 4,800/–.
4 ದಿನ ಶಿರಡಿ ಪ್ರವಾಸ ರೈಲಿನಲ್ಲಿ: ಶಿರಡಿ, ಶನಿಸಿಂಗನಾಪುರ. ಊಟ, ವಸತಿ ಸೇರಿ ಒಬ್ಬರಿಗೆ ರೂ. 2,750/–
ಸಂಪರ್ಕಿಸಿ: ಗ್ಲೋಬಲ್ ಟೂರ್ಸ್
9686743337- 7022277007

ಶ್ರೀ ಬಾಲಾಜಿ ಟೂರಿಸ್ಟ್
22.5.25–10 ದಿನ: ಹೈದ್ರಾಬಾದ್, ರಾಮೋಜಿ ಫಿಲಂಸಿಟಿ ಭದ್ರಾಚಲಂ, ಸಿಂಹಾಚಲಂ, ಅನ್ನಾವರಂ, ಅಹೋಬಿಲಂ,
14.6.25–7 ದಿನ: ದೆಹಲಿ, ಕಾಶೀ, ಅಯೋಧ್ಯೆ, ಆಗ್ರಾ, ಮಥುರಾ, ಗಯಾ, ಬುದ್ಧಗಯಾ, ಬೃಂದಾವನ, ಪ್ರಯಾಗ್
5.9.25–14 ದಿನ: ಚಾರ್‌ಧಾಮ್ ವಿಶೇಷ ಯಾತ್ರ ದೆಹಲಿ, ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್ (ಸರ್ಕಾರದಿಂದ ರೂ.20,000/– ಸಬ್ಸಿಡಿ ದೊರೆಯುತ್ತದೆ)
4.10.25–12 ದಿನ: ಗುಜರಾತ್ ರಾಜಸ್ಥಾನ ಮಧ್ಯಪ್ರದೇಶ ಜೈಪುರ್, ದ್ವಾರಕ, 4ಜ್ಯೋತಿರ್ಲಿಂಗಗಳು, Statue of Unity
9945770486

SK CONSTRUCTION
ಮನೆ ಕಟ್ಟಿಸಬೇಕೇ, ಚಿಂತೆ ಬೇಡ ನಿಮ್ಮ ಕನಸಿನ ಮನೆ ನಿಮ್ಮ ಕೈಗೆಟಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Plan, 3D Elevation ಸಹಿತ ಕಟ್ಟಿಕೊಡುತ್ತೇವೆ.
All Engineering Service in one Roof
9620528490

WANTED
Teaching staff for reputed institution (Experience Preferred) for all subjects. Transport facilities available. Drop your resume through WhatsApp
8971577685
9980631121

FOR RENT IN SARASWATHIPURAM
- 2 Commercial Space, suitable for shops/ clinic/office, each measuring 375 sq feet for rent
- 1 BHK (Veg only) measuring approx. 500 sqft., for rent

Contact: 9449272469

WANTED
Tata ace Driver
Graphic Designer
Helper boys
94480 67939
97395 69260

ಸುವರ್ಣ ಯಾತ್ರ
9 ದಿನಗಳ ನೇಪಾಳ, ಅಯೋಧ್ಯ ಹಾಗೂ ಮುಕ್ತಿನಾಥ ಪ್ರವಾಸ 27–4–2025.
11 ದಿನಗಳ ಶಿಮ್ಲಾ, ಕುಲು ಹಾಗೂ ಮನಾಲಿ ಪ್ರವಾಸ 29–4–2025.
10 ದಿನಗಳು ಅಮರನಾಥ ಪ್ರವಾಸ 26–6–2025
9019462508
9008381022

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

SKANDA PROPERTIES
Construction starts from Rs. 1799* per sqft
(This Offer price valid till 30.04.2025)
Hurry Up!!! Book your Project !!!
Ph: 9379888558

2ನೇ ವಿವಾಹಕ್ಕಾಗಿ ಬ್ರಾಹ್ಮಣ ವರ ಬೇಕಾಗಿದೆ
ಬ್ರಾಹ್ಮಣ ವಿಧವೆ, ವಿಚ್ಛೇದಿತ ವಧುವಿನ ವಯಸ್ಸು 28, SSLC ಕಲಿತಿರುವ ವಯಸ್ಸು 34, PUC / ವಯಸ್ಸು 43, SSLC ವಯಸ್ಸು 52, SSLC ವಧುವಿಗೆ ವರ ಬೇಕಾಗಿದೆ.
(ಎರಡನೇ ವಿವಾಹಕ್ಕಾಗಿ ಸಂಪರ್ಕಿಸಿ)
ಮ್ಯಾರೇಜ್ ಬ್ಯೂರೋ
8792731562

ಛತ್ರ ಖಾಲಿ ಇದೆ
ದಿನಾಂಕ 22–06–2025ನೇ ಭಾನುವಾರದಂದು ಇಂದಿರಾ ವೆಂಕಟಲಿಂಗಯ್ಯ (D.V ಕನ್ವೆನ್ಷನ್ ಹಾಲ್) ಹಾಲಿನ ಡೈರಿಯ ಮುಂಭಾಗ (T.N ಪುರ ರಸ್ತೆ, ಸಿದ್ದಾರ್ಥನಗರ ಮೈಸೂರು ಶುಭಸಮಾರಂಭಗಳಿಗೆ ಲಭ್ಯವಿರುತ್ತದೆ.
9980853559

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

ಮಾರುತಿ ಟ್ಯೂಬ್ ವೆಲ್ಸ್ (ರಿ)
ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸಲಾಗಿದೆ ನೇರವಾಗಿ ಮಾಲೀಕರಿಂದ
ಬೋರ್‌ವೆಲ್ ಡ್ರಿಲ್ಲಿಂಗ್ @
ಸಿಟಿ - ₹75/- ಸೈಟ್ ಬೋರ್‌ವೆಲ್
ಗ್ರಾಮೀಣ - ₹85/- ಕೃಷಿ ಬೋರ್‌ವೆಲ್
• ಬ್ರೋಕರ್ ಇಲ್ಲ • ಕಮಿಷನ್ ಇಲ್ಲ
8184000444

R.V. CONSTRUCTIONS
Rate starts from Rs. 1690 per sq.ft.
No advance
Billing on stage by stage completion.
Office: 7975110915
D. Subbaiah Road, Mysore
Assist Major Bank Loans

Corner Site for Sale
30x40 East Facing Corner Site in Layout on Highway behind Airport. MUDA Khata and E-Khata Ready. Direct Owner
9342123373

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಕಂಕಣ ಭಾಗ್ಯ
ವಧು–ವರರಿಗೆ ಕೂಡಲೇ ಸಂಪರ್ಕಿಸಿ ಕುರುಬ, ಒಕ್ಕಲಿಗ, ಲಿಂಗಾಯತ್, ಈಡಿಗ, ಆಚಾರ್ಯ, ನಾಯಕ, SC, ನಮ್ಮಲ್ಲಿ ಎಲ್ಲಾ ಜಾತಿಯ ವಧು–ವರರು ಹಾಗೂ ವಿಧುರ–ವಿಧವೆಯರು ವಿಚ್ಛೇದಿತರು ಸಂಪರ್ಕಿಸಿ:
9071577131

JANAKART
(An e-commerce website)
www.janakart.com
Download JANAKART from both play stores.
More than 5000+ products available at best prices with best quality.

Teachers Wanted
Eligibility: Graduation or Post-Graduation with B.Ed. Walk-in interview date: 12th April 2025 at 10 am. Location: Wisdom School, Nanjangud. Interested candidates may contact us at
8748915593, 7676110063
or email their resume to ro@wisdomschool.in

ತಕ್ಷಣ ಬೇಕಾಗಿದ್ದಾರೆ
ಮೈಸೂರು ಮತ್ತು ಲೋಕಲ್‌ಗೆ ಕಂಟೈನರ್ ಗಾಡಿಗಳಿಗೆ ಟ್ರಕ್ ಡ್ರೈವರ್ಸ್ ಬೇಕಾಗಿದ್ದಾರೆ. ಪಿಎಫ್, ಇಎಸ್‌ಐ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9341623350

ಬೇಕಾಗಿದ್ದಾರೆ
ವಿಜಯನಗರ 4ನೇ ಹಂತ ಮೈಸೂರಿನಲ್ಲಿರುವ ಪ್ರತಿಷ್ಠಿತ ಶಾಲೆಗೆ ಅನುಭವಿ ಬಸ್ ಡ್ರೈವರ್‌ಗಳು ಮತ್ತು ಮಹಿಳಾ (Lady) ಅಟೆಂಡರ್‌ಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ಇಎಸ್‌ಐ, ಪಿಎಫ್ ಸೌಲಭ್ಯ ಇರುತ್ತದೆ.
ಸಂಪರ್ಕಿಸಿ:
Mob: 9483670193, 9036968179, 9902036338

WANTED
Wanted drivers to driving school. Two wheeler and four wheeler driving licence compulsory. Contact:
Mob: 8095188889

ಬೇಕಾಗಿದ್ದಾರೆ
ಹೋಟೆಲ್‌ವೊಂದಕ್ಕೆ ಕಿಚನ್ ವರ್ಕರ್ಸ್ & ಸಪ್ಲೈಯರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ:
9986669892, 6262610799

ಬೇಕಾಗಿದ್ದಾರೆ
1) ಕೊಳ್ಳೇಗಾಲ (JSS College)
2) ತೂಬಿನಕೆರೆ (ಮಂಡ್ಯ)
3) ವರುಣಾ(Tropical Resorts)
4) ವಿಜಯನಗರ (2nd/4th stage)

ಮೇಲ್ಕಂಡ ಸ್ಥಳಗಳಿಗೆ ವಿದ್ಯಾವಂತ ಸೆಕ್ಯೂರಿಟಿ ಗಾರ್ಡುಗಳ ಅವಶ್ಯಕತೆಯಿದೆ. ಕೆಲವು ಕಡೆ ಉಚಿತ ಊಟ/ವಸತಿಯಿದೆ.
9686422400
9242406261

ಟ್ರಾನ್ಸ್‌ಪೋರ್ಟ್ ಕಂಪನಿಗೆ ಲಾರಿ ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿ:
9845351200
9741139977

ಸೈಟು ಮಾರಾಟಕ್ಕಿದೆ
30x50 N/F,
KBL Silicon City Phase-2
BEML ಹತ್ತಿರ, KRS Road.
Mob: 9243536373

WANTED
Experienced boys for Camera Handling and Editing for Balaji Properties Real Estate Company in Vijayanagar 4th Stage. Contact:
Mob: 8904812796

ವಾಣಿಜ್ಯ ಕಟ್ಟಡ ಬಾಡಿಗೆಗೆ
ಮೈಸೂರು–ಮಡಿಕೇರಿ ಮುಖ್ಯ ರಸ್ತೆಯ ರಾಷ್ಟ್ರೀಯ ಹೆದ್ದಾರಿ 275ಕ್ಕೆ ಹೊಂದಿಕೊಂಡಂತೆ ಹುಣಸೂರು ತಾಲೂಕು ಕಂಪಾಲಪುರ ತಂಬಾಕು ಮಂಡಳಿ ಸಮೀಪದಲ್ಲಿ 1.5 ಎಕರೆ ಜಮೀನು ಮತ್ತು ಜಮೀನಿನಲ್ಲಿರುವ 80x65 ಅಳತೆಯ ಕಟ್ಟಡವಿದ್ದು ಹೋಟೆಲ್ ಮತ್ತಿತರ ವಾಣಿಜ್ಯ ವ್ಯವಹಾರ ನಡೆಸಲು ಹದಿನೈದು ವರ್ಷಗಳ ಅವಧಿಗೆ ಬಾಡಿಗೆಗೆ ನೀಡಲಾಗುವುದು ಆಸಕ್ತರು ಸಂಪರ್ಕಿಸಿ: ಮಾಲೀಕರು
9972167172, 9972916710

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಮನೆ ಬಾಡಿಗೆಗೆ ಇದೆ
TOLET ವಿಜಯನಗರ 4ನೇ ಹಂತ 3 ಫೇಸ್
20x30 ನಂ.637, (I,II, III 3 ಮನೆ) ಮಹಾರಾಣಿ ಕಾಲೇಜ್ ಹಿಂಭಾಗ, ಮೈಸೂರು
9900194232
ಪುಲಿಕೇಶಿ ರಸ್ತೆ, ತಿಲಕನಗರ, ಮಳಿಗೆ ಬಾಡಿಗೆಗೆ ಇದೆ

ಕಳೆದಿದೆ
ಮೈಸೂರು ಸಿಟಿ ಕೆಸರೆ, 1ನೇ ಹಂತ, 1ನೇ ಕ್ರಾಸ್, #38ನೇ ಪೂರ್ವ ಪಶ್ಚಿಮ 20'ಅಡಿ ದಕ್ಷಿಣೋತ್ತರ 30'ಅಡಿ ಮನೆಯ ಮಾದಮ್ಮ ಹೆಸರಿನ ಅಸಲು ಮಂಜೂರಾತಿ ಪತ್ರ ಮತ್ತು ಅಸಲು ಸ್ವಾಧೀನ ಪತ್ರ ಮತ್ತು ಲಕ್ಷ್ಮಮ್ಮ ಹೆಸರಿನ ಅಸಲು ವರ್ಗಾವಣೆ ಪತ್ರ, ಸುನಂದಮ್ಮ ಹೆಸರಿನ ಅಸಲು ಖಾತೆ ಪತ್ರ ದಿ.08–04–2025ರಂದು ಸಂಜೆ 6.45ರ ಸಮಯದಲ್ಲಿ ಜೆರಾಕ್ಸ್ ಮಾಡಿಸಲು ಕೆಸರೆ ಮುಖ್ಯ ರಸ್ತೆಯಲ್ಲಿ ಬರುತ್ತಿದ್ದ ವೇಳೆ ಕಳೆದುಹೋಗಿರುತ್ತದೆ.
ಸಿಕ್ಕಿದವರು ಸಂಪರ್ಕಿಸಿ: ಜಾಫರ್ ಶರೀಫ್
9945970625

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ Rs. 8,200 (24 CT)
Mob: 9108146123

SBIT TRAVELS
Group Tours
Kashi Yatra-6 Days
9, 12, 18, 23 May | 2, 6, 10, 20 June
Shimla Manali-6 Days
3, 10, 17, 25 May | 7, 15, 22, 29 June
9343524127
(Saraswathipuram, Mysuru)

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ದಿಂದ 20,000 ಸಂಪಾದಿಸಿ.
Mob: 9731891409

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

PRAKRUTHI PROPERTIES
FOR SALE
40x60 Commercial Site @ Ramakrishna Ngr& Srirampura
30x45 Commercial Property @ Jayanagar
20x30,25x35 House @Giridharshni lyt, Srirampura
40x60 Shardha Lyt (JP Nagar)
30x40, 40x60 Duplex House Near Hari Vidyalaya Bogadi
Sites also available Near RT Nagar, Bogadi in & around Mysore
95386 90359, 90359 90359

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSCL, PUC, ITI, Any Degree ಪಾಸ್/ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ + ಓಟಿ 15200-86000
7892046990

WANTED
BRAND NEW 3BHK OR 2BHK HOUSE FOR RENT OR LEASE IN MYSORE
8147706492

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಜೈ ಆಂಜನೇಯ ಬೋರ್‌ವೆಲ್ಸ್
(7A ನೋಂದಾಯಿಸಲಾಗಿದೆ) ®
ನಾವು ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ 6½" ಮತ್ತು 4¾" ಬೋರ್‌ವೆಲ್ ಕೊರೆಯುತ್ತೇವೆ
9900234477/9902361213
ಶ್ರೀರಾಮಪುರ ರಿಂಗ್ ರೋಡ್ ಸರ್ಕಲ್ ಮೈಸೂರು-570008

SITE FOR SALE
40x60 E/F
60 Feet Road
SUVARNA NAGAR ENTRANCE.
Mob: 8050821108

AFFIDAVIT
I, Sathar Ahamed, residing at No. 242A, Musleem Street, Periyapatna Town and Post-571107, Mysuru District, State and affirm on oath that, my wife's correct name is Shahidabanu as recorded in Aadhar (No. 4479 2340 0544) and Pan Card (No. TMCPS913B). But in my army service register and discharge book her name was wrongly entered as Syeda Shahida Bano and I sworn before the Notary on 5-4-2025 at Periyapatna.
Sd/- Sathar Ahamad

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು 18 ರಿಂದ 45. ಸಂಬಳ, ESI, PF ಕಳೆದು 17,500, 8 hrs duty, 3 shifts ಇರುತ್ತದೆ. ವಿದ್ಯಾರ್ಹತೆ ಬೇಕಿಲ್ಲ. ಹೆಚ್ಚಿನ ಮಾಹಿತಿಗಾಗಿ ಸ್ಥಳಕ್ಕೆ ಭೇಟಿ ನೀಡಿ. ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ, ಮೈಸೂರು.
Mob: 9986874574

ಮಹಿಳಾ ಆಯುರ್ವೇದ ಥೆರಪಿಸ್ಟ್ ಬೇಕಾಗಿದ್ದಾರೆ
ಅನುಭವ ಹಾಗೂ ಅನುಭವ ಇಲ್ಲದ ಹೊಸಬರಿಗೆ ತರಬೇತಿ ನೀಡಲಾಗುವುದು
ಸ್ಥಳ: ಮೈಸೂರು
ಆಯುರ್ವೇದ
9538118358

DOCUMENT LOST
I, Nayeem Pasha, No.932, 4th Cross, I Main, Near by Abu Akhil Masjid, Azeezsait Nagar, Mysore-570019, have Lost, orginal Intimation of allotment copy on 11/3/2025 at Mysuru
Finders please contact
8660141085

ಬೇಕಾಗಿದ್ದಾರೆ (JOB VACANCY)
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಅಗರಬತ್ತಿ (ಕ್ಯಾಂಡಲ್) ಕಂಪನಿಗೆ 18 ರಿಂದ 40 ವರ್ಷದ ಒಳಗಿನ 7th Std. ಮೇಲ್ಪಟ್ಟು ಓದಿರುವ ಪುರುಷರು ಮತ್ತು ಸ್ತ್ರೀಯರು ಕೆಲಸಕ್ಕೆ ಬೇಕಾಗಿದ್ದಾರೆ. 1st Shift and 2nd Shift‌ನಲ್ಲಿ ಕೆಲಸ ಇರುತ್ತದೆ. 1st Shift 7 am to 3 pm. 2nd Shift: 3 pm to 10 pm. ಸಂಬಳ: 13,773. ಲೋಕಲ್‌ನವರಿಗೆ vehicle ಸೌಲಭ್ಯವಿರುತ್ತದೆ. ಸಂಪರ್ಕಿಸಿ:
ಕೋಮಲ್ ಎಂಟರ್‌ಪ್ರೈಸಸ್
ಪ್ರಕಾಶ – **8971460235**
ರತ್ನಯ್ಯ – **9900889325**

SITE FOR SALE
MUDA Approved
20x30
Near Vidya Vikas College, Bannur Road.
8792207164, 6361799533

ಮನೆ ಮಾರಾಟಕ್ಕಿದೆ
17 ಚದರ ಮನೆ, ಸೈಟು 65 ಉದ್ದ 45 ಅಗಲ ಮಾರಾಟಕ್ಕಿದೆ. ಬೆಲೆ 12,000 ಪ್ರತಿ ಚದರಡಿಗೆ. ನೆಗೋಷಿಯಬಲ್. Door No. 153, 1st Main, Jayalakshmipuram, Mysore-12.
9535321312, 9342010159

ಮನೆ ಮಾರಾಟಕ್ಕೆ ಇದೆ
ಸಾತಗಳ್ಳಿ ಬಿ ಜೋನ್ (ವಿ.ಟಿ.ಯು ಕಾಲೇಜ್ ಹತ್ತಿರ) 30x40, ಒಟ್ಟು 15 ಚದರ.
ನಿವೇಶನ ಮಾರಾಟಕ್ಕೆ ಇದೆ. ಡೆಲ್ಲಿ ಪಬ್ಲಿಕ್ ಸ್ಕೂಲ್ ಹತ್ತಿರ (ಬನ್ನೂರು ರಸ್ತೆ). 30x40 ಪೂರ್ವ ದಿಕ್ಕು.
Mob: 9535830530

New House for Sale
MUDA Approved 20x30, GF & FF 100% Vaasthu. Sump 12,000 litress, full teak with spray polish, foundation 3 feet from road level. Rate Rs. 67,00,000. Negotiable. Srinidhi Enclave, Near Excel Public School.
Mob: 7975110915

ಬೇಕಾಗಿದ್ದಾರೆ
ನಮ್ಮ ಹೆಲ್ತ್ ಕೇರ್ ಸಂಸ್ಥೆಗೆ ಅನುಭವ ಇರುವ / ಇಲ್ಲದಿರುವ ಮಹಿಳೆಯರು, ಪುರುಷರು ಹೋಂ ನರ್ಸಿಂಗ್ ಕೆಲಸಕ್ಕೆ ತಕ್ಷಣವೇ ಸಂಪರ್ಕಿಸಿ ಊಟ ವಸತಿಯೊಂದಿಗೆ ಆಕರ್ಷಕ ಸಂಬಳ ಇರುತ್ತದೆ. ಅಗ್ರಹಾರ
9513203333
9035113222

ಬೇಕಾಗಿದ್ದಾರೆ
ಮಹೇಶ್ವರಿ ಬಾರ್ ಒಂದಕ್ಕೆ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
1. ಭಟ್ಟರು, 2) ಸಪ್ಲೆಯರ್ 3) ಕ್ಲೀನರ್ 4) ವೆಜ್‌ಭಟ್ಟರು
7892212200

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು SSLC Pass or Fail, JK Industrial Area ಹುಡುಗಿಯರು ಬೇಕಾಗಿದ್ದಾರೆ (Age limit 18 - 40). (JK ಸುತ್ತ ಮುತ್ತ ಏರಿಯದಲ್ಲಿರುವವರಿಗೆ – ಬಿ.ಎಂ. ಶ್ರೀನಗರ, ಕುಂಬಾರಕೊಪ್ಪಲು, ಮೇಟಗಳ್ಳಿ, ಬಸವನಗುಡಿ, ಸೂರ್ಯಬೇಕರಿ ಮತ್ತು ಮಂಟಿ). ಸಂಬಳ: 15,000. ಅನುಕೂಲತೆ: ESI, PF, Canteen ಸೌಲಭ್ಯವಿರುತ್ತದೆ. ಸಂಪರ್ಕಿಸಿ:
Mob: : 6362491336, 9353430078, 9845743950

ಹೊಸ ಮನೆ ಮಾರಾಟಕ್ಕಿದೆ
3 BHK, 30x40
EAST FACE
MUDA Approved
Near St. Joseph School, Yelwala, Mysore
Mob: 8217851695

SUNZONE SOLAR SYSTEM
Solar Water Heaters Built for Modern Living
20 ವರ್ಷಗಳ ವ್ಯಾರಂಟಿ
JUPITER SOLAR Solar Water Heater SALES & SERVICE
VM Double Road, Kuvempunagar, Mysuru
9845175443

ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರನ್ನು ರೋಗಿಗಳನ್ನು ಅವರ ಮನೆಯಲ್ಲೇ ನೋಡಿಕೊಳ್ಳಲು ಗಂಡಸರು/ಹೆಂಗಸರು ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಉತ್ತಮ ಸಂಬಳ ನೀಡಲಾಗುವುದು.
9880102700

ತಕ್ಷಣ ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು Driver cum Marketing ಮತ್ತು ಸೆಕ್ಯೂರಿಟಿ ಗಾರ್ಡುಗಳು ಹಾಗೂ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
8105249880
7795285485

Gurukrupa Handwriting Coaching Centre
Experience True Handwriting
HANDWRITING SUMMER CAMP
14th April Evening 4pm to 6pm
* Cursive *Brain GYM
* Print * Calligraphy
* Speed Writing
Venu: Saraswathipuram, Mysuru
9164442156

DATA ENTRY OPERATOR AND QUALITY ANALYST VACANCY 100+
VITAL RECORD PVT LTD
Address: #42, JCK INDUSTRIAL PARK, METAGALLI, MYSORE
8867064586

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರದ ಅಪೋಲೋ ಆಸ್ಪತ್ರೆ ಸುತ್ತ ಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : PUC & ಮೇಲ್ಪಟ್ಟು.
ಸಂಬಳ: 21000+W/o
ಊಟ ತಿಂಡಿ ಸೌಲಭ್ಯವಿರುತ್ತದೆ.
9620667819
8050313506

ತಕ್ಷಣ ಬೇಕಾಗಿದ್ದಾರೆ
ಗಂಗೋತ್ರಿ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು.
ಸಂಬಳ: 17500+W/o
16000+W/o (8hrs)
9880727819
9620777819

ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ವಿದ್ಯಾರ್ಹತೆ 7th, 10th PUC, Diploma any Degree Pass or Fail
ಸಂಬಳ: 15000 ರಿಂದ 30000ರವರೆಗೆ
ವಿ.ಸೂ: ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ Android Mobile ಹಾಗೂ Two wheeler ಇರಬೇಕು.
ಸಂಪರ್ಕಿಸಿ: ಭರತ್‌ಕುಮಾರ್
9880151303

ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಬೇಕಾಗಿದ್ದಾರೆ
ವಿಜಯನಗರ ಹೂಟಗಳ್ಳಿ ಹಾಗೂ ದೇವೇಗೌಡ ವೃತ್ತಗಳಲ್ಲಿ ಸೆಕ್ಯೂರಿಟಿ ಕೆಲಸ ನಿರ್ವಹಿಸಲು 40 ವರ್ಷದೊಳಗಿನವರು ಬೇಕಾಗಿದ್ದಾರೆ.
ಸಂಪರ್ಕಿಸಿ:
9900481819
9972945905

WE'RE HIRING
WANTED RECEPTIONIST
*Female Only *Any Degree
*Communication Skill
*Computer Knowledge
APPLY NOW
ROYAL TUSKER LUXURY SERVICE APARTMENTS
JP Nagar, Mysore
8310535059

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್
ಸಂಬಳ: 11,000/–ರಿಂದ 13000/– (12ಗಂಟೆಗೆ)
ವಯಸ್ಸು : 25 ರಿಂದ 55 ರವರೆಗೆ
ಸ್ಥಳ: ಸಿದ್ಧಾರ್ಥ ಲೇಔಟ್, ಆಲನಹಳ್ಳಿ, ಹೆಬ್ಬಾಳ್, ದೇವರಾಜ ಮೊಹಲ್ಲಾ, ಉತ್ತನಹಳ್ಳಿ, ಉದ್ಬೂರು.
7483638113
0821-4256244

ಮಹಿಳಾ ಅಡಿಗೆಯವರು ಬೇಕಾಗಿದ್ದಾರೆ
ಪಿಜಿಯಲ್ಲಿ ಅಡಿಗೆ ಮಾಡಲು ಹಾಗೂ ಸಹಾಯಕ ಮಹಿಳೆ ಬೇಕಾಗಿದ್ದಾರೆ.
8970132554

ಕಳೆದಿದೆ
ಜೆ.ಬಿ.ಪ್ರೇಮ್‌ಕುಮಾರ್ ರವರಿಗೆ ಸೇರಿದ ಮೈಸೂರು ತಾಲ್ಲೂಕು ಇಲವಾಲ KHB ನಿವೇಶನದ ಕ್ರಯಪತ್ರ ದಾಖಲಾತಿ ಕಳೆದುಹೋಗಿದೆ.
ನಂ. 2091/ODD, Block 3
LIG00086814
ಸಿಕ್ಕಿದವರು ಸಂಪರ್ಕಿಸಿ:
7019957508

ಮನೆ ಭೋಗ್ಯಕ್ಕಿದೆ
ಆರ್.ಸಿ.ಸಿ.ಮನೆ (ಸಣ್ಣ ಕುಟುಂಬಕ್ಕೆ) ಆದ್ಯತೆ 2ನೇ ಮಹಡಿ 4ನೇ ಮೇನ್ ಚಾಮುಂಡಿಪುರಂ (ಅಪೂರ್ವ ಹೋಟೆಲ್ ಎದುರು), ಮೈಸೂರು
8971220695

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಸಚಿವ ಮಹದೇವಪ್ಪ ಒಳ ಮೀಸಲಾತಿ ವಿರೋಧಿಸಿಲ್ಲ

ರಾಜಕೀಯ ಲಾಭಕ್ಕಾಗಿ ಮಾದಿಗರನ್ನು ಬಳಸಿಕೊಳ್ಳುತ್ತಿರುವ ಭಾಸ್ಕರ ಪ್ರಸಾದ್ ಕ್ಷಮೆಯಾಚಿಸಲಿ: ಎಂ.ಪರಶಿವಮೂರ್ತಿ

ತಿ.ನರಸೀಪುರ, ಏ.9– ರಾಜ್ಯ ಸರ್ಕಾರ ಜಾತಿ, ಜನಸಂಖ್ಯಾವಾರು ಒಳ ಮೀಸಲಾತಿಗೆ ಮುಂದಾಗಿರುವ ವೇಳೆ ಭಾಸ್ಕರ್ ಪ್ರಸಾದ್ ಎಂಬಾತ ಹೋರಾಟವನ್ನೇ ಹೈಜಾಕ್ ಮಾಡಿ ತನ್ನ ರಾಜಕೀಯ ಲಾಭಕ್ಕಾಗಿ ಮಾದಿಗ ಸಮಾಜದ ಮುಗ್ಧತೆ ಬಂಡವಾಳ ಮಾಡಿಕೊಂಡು ನಾಯಕನಾಗಲು ಹೊರಟಿದ್ದಾನೆ ಎಂದು ಸೋಸಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಎಂ.ಪರಶಿವಮೂರ್ತಿ ಆರೋಪಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ದಲಿತ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ರಥಯಾತ್ರೆ ಮೂಲಕ ಮಾದಿಗರ ಜಾಗೃತಿ ಹೆಸರಲ್ಲಿ ಬಲಗೈ ಸಮಾಜದ ನಾಯಕರಾದ ಡಾ.ಜಿ.ಪರಮೇಶ್ವರ್, ಡಾ.ಹೆಚ್.ಸಿ.ಮಹದೇವಪ್ಪ, ನರೇಂದ್ರಸ್ವಾಮಿ ಹಾಗೂ ಪ್ರಿಯಾಂಕ ಖರ್ಗೆ ಅವರನ್ನು ಮಾದಿಗ ಸಮಾಜದ ಶತ್ರುಗಳೆಂದು ಬಿಂಬಿಸಲು ಕೀಳುಮಟ್ಟದ ಪದ ಬಳಸಿರುವುದು ನೀಚತನದ ಪರಮಾವಧಿ ಎಂದು ಆಕ್ರೋಶ ವ್ಯಕ್ತಪಡಿಸಿದರು.


ಹೋರಾಟಗಾರ ಭಾಸ್ಕರ್ ಪ್ರಸಾದ್ ಉದ್ದೇಶ ಪೂರ್ವಕವಾಗಿ ನಮ್ಮ ಸಮುದಾಯದ ಸಚಿವರನ್ನು ಮಾದಿಗ ಸಮಾಜದ ವಿರೋಧಿಗಳೆಂದು ಬಿಂಬಿಸಲು ಹೊರಟಿದ್ದೀರಿ. ನೀವು ಎಷ್ಟು ವರ್ಷಗಳಿಂದ ಮಾದಿಗ ಸಮುದಾಯದ ಪರವಾಗಿ ಹೋರಾಟದಲ್ಲಿ ತೊಡಗಿಕೊಂಡಿದ್ದೀರಿ. ಒಳ ಮೀಸಲಾತಿ ಜಾರಿಗಾಗಿ ಎಷ್ಟು ವರ್ಷ ಹೋರಾಟ ಮಾಡಿದ್ದೀರಾ. ಇಂದು ನಿಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ರಾಜ್ಯಾದ್ಯಂತ ಎಡ–ಬಲ ಸಮುದಾಯದವರ ನಡುವೆ ಕಂದಕ ಸೃಷ್ಟಿಸಲು ಹೊರಟಿದ್ದೀರಾ. ನಾವು ಕ್ಷೇತ್ರದಲ್ಲಿ ಹೊಂದಾಣಿಕೆಯಿಂದ ಸಹೋದರರಂತೆ ಇದ್ದೇವೆ. ಇದೀಗ ಮಾದಿಗರ ಜಾಗೃತಿ ರಥಯಾತ್ರೆಯಲ್ಲಿ ಆಗಮಿಸಿ ಕ್ಷೇತ್ರದ ಪ್ರಭಾವಿ ಸಚಿವರ ವಿರುದ್ಧ ಕೀಳು ಮಟ್ಟದ ಮಾತುಗಳನ್ನಾಡಿದ್ದೀರಿ. ಹೀಗಾಗಿ ಮೊದಲು ನಾಲಿಗೆ ಬಿಗಿ ಹಿಡಿದು ಮಾತನಾಡಿ. ರಾಜ್ಯಾದ್ಯಂತ ಹೋರಾಟ ಮಾಡುತ್ತಿರುವ ನೀವು ಕಾನೂನಾತ್ಮಕವಾಗಿ ಹೋರಾಟ ಮಾಡಿ. ಅದನ್ನು ಬಿಟ್ಟು ಜನಸಾಮಾನ್ಯರ ನಡುವೆ ಜಾತಿಯ ವಿಷ ಬೀಜ ಬಿತ್ತುವ ಕೆಲಸಕ್ಕೆ ಮುಂದಾಗಬೇಡಿ. ಇದರಿಂದಾಗುವ ಪರಿಣಾಮಕ್ಕೆ ನೀವೇ ಹೊಣೆಯಾಗುತ್ತೀರಾ ಎಂದು ಎಚ್ಚರಿಸಿದರು.

ಸಚಿವ ಹೆಚ್.ಸಿ.ಮಹದೇವಪ್ಪ ಒಳ ಮೀಸಲಾತಿಗೆ ವಿರೋಧ ವ್ಯಕ್ತಪಡಿಸಿಲ್ಲ. ಸಚಿವರು ಎಡ–ಬಲ ಸಮುದಾಯ ಎಂಬ ಭೇದ ಮಾಡದೇ ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದಾರೆ. ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ತಂದು ಅಭಿವೃದ್ಧಿ ಪಡಿಸಿದ್ದಾರೆ. ಅವರ ಬಗ್ಗೆ ಕೀಳಾಗಿ ಮಾತನಾಡುವ ನಿಮ್ಮ ಹೇಳಿಕೆ ಖಂಡನೀಯ ಎಂದರು.

ಎಸ್‌ಸಿ /ಎಸ್‌ಟಿ ಹಿತರಕ್ಷಣಾ ಸಮಿತಿ ಸದಸ್ಯ ಮಹದೇವಸ್ವಾಮಿ ಮಾತನಾಡಿ, ಸಚಿವ ಡಾ.ಹೆಚ್.ಸಿ.ಮಹದೇವಪ್ಪರ ಬಗ್ಗೆ ಹೋರಾಟಗಾರ ಭಾಸ್ಕರ್ ಪ್ರಸಾದ್ ನೀಡಿರುವ ಹೇಳಿಕೆ ಖಂಡನೀಯ. 40 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ ಮಹದೇವಪ್ಪನವರು ಯಾವುದೇ ಭೇದ ಭಾವ ಮಾಡಿಲ್ಲ. ರಾಜ್ಯದ ಎಲ್ಲಾ ಜನಾಂಗದ ಏಳಿಗೆಗೆ ಶ್ರಮಿಸುತ್ತಿರುವ ನಾಯಕರಾಗಿದ್ದಾರೆ. ಅವರ ಬಗ್ಗೆ ಆಡಿರುವ ಹೇಳಿಕೆಯನ್ನು ಭಾಸ್ಕರ್ ಪ್ರಸಾದ್ ವಾಪಸ್ ಪಡೆದು ಕ್ಷಮೆಯಾಚಿಸಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ಬಲಗೈ ಸಮಾಜ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ತಾಪಂ ಮಾಜಿ ಸದಸ್ಯ ರಾಮಲಿಂಗು ಮಾತನಾಡಿ, ಉತ್ತರ ಭಾರತದಲ್ಲಿ ಮೀರಾಕುಮಾರ್‌ಗೆ ಕಾಂಗ್ರೆಸ್ ಸರ್ಕಾರ, ದಕ್ಷಿಣ ಭಾರತದಲ್ಲಿ ಎನ್.ರಾಚಯ್ಯ, ಟಿ.ಎನ್.ನರಸಿಂಹಮೂರ್ತಿ, ಮಂಜುನಾಥ್, ಧರ್ಮಸೇನ, ಡಾ.ತಿಮ್ಮಯ್ಯ ಅವರಿಗೆ ಸಿಎಂ ಸಿದ್ದರಾಮಯ್ಯ ಹಾಗೂ ಡಾ.ಹೆಚ್.ಸಿ.ಮಹದೇವಪ್ಪ ಹೆಚ್ಚಿನ ಅವಕಾಶ ಕಲ್ಪಿಸಿದ್ದಾರೆ ಎಂಬ ಅರಿವಿಲ್ಲದೇ ಮನಬಂದಂತೆ ಮಾತನಾಡಿರುವ ಭಾಸ್ಕರ್ ಪ್ರಸಾದ್ ಅವರಿಗೆ ಮಾನಸಿಕ ಸೀಮಿತ ಇಲ್ಲ ಎಂದರು.

ಸಭೆಯಲ್ಲಿ ಉಕ್ಕಲಗೆರೆ ರಾಜು, ತಾಲೂಕು ಅಹಿಂದ ಒಕ್ಕೂಟದ ಅಧ್ಯಕ್ಷ ಸೋಸಲೆ ದೇವರಾಜ್, ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ಹೊನ್ನಯ್ಯ, ಪ್ರಸನ್ನ, ಹೆಮ್ಮಿಗೆ ನಾಗೇಶ್, ಕರೋಹಟ್ಟಿ ರಾಜು, ನಿಲಸೋಗೆ ಪ್ರದಿ, ನವಾಜ್ ಖಾನ್, ಸಿದ್ದಯ್ಯ, ಹ್ಯಾಕನೂರು ಹರೀಶ್, ಸುಂದರ್ ಉಪಸ್ಥಿತರಿದ್ದರು.


ಸಭೆಯಲ್ಲಿ ಸೋಸಲೆ ಪಿಎಸಿಎಸ್ ಮಾಜಿ ಅಧ್ಯಕ್ಷ ಎಂ.ಪರಶಿವಮೂರ್ತಿ ಮಾತನಾಡಿದರು.

> **ಈವರೆಗೆ ಸಚಿವರು ಎಡ–ಬಲ ಎಂಬ ಪದ ಬಳಸಿಲ್ಲ. ಎಲ್ಲರೂ ಸಹೋದರರಂತಿದ್ದೇವೆ. ಭಾಸ್ಕರ್ ಪ್ರಸಾದ್ ಮಹದೇಶ್ವರ ಬೆಟ್ಟದಿಂದ ಬೀದರ್‌ವರೆಗೆ ಹೋರಾಟ ಮಾಡುತ್ತಿದ್ದಾರೆ. ಹೋರಾಟ ಎಲ್ಲರ ಹಕ್ಕು ಮಾಡಲಿ. ಆದರೆ ಅವರು ಸಚಿವರ ಬಗ್ಗೆ ಮಾತನಾಡಿರುವುದು ನಮಗೆ ನೋವುಂಟು ಮಾಡಿದೆ. ಗೋವಿಂದ ಕಾರಜೋಳ, ಹೆಚ್.ಆಂಜನೇಯ ಹಾಗೂ ನಾರಾಯಣಸ್ವಾಮಿಯವರು ಒಳ ಮೀಸಲಾತಿ ಜಾರಿಗಾಗಿ ಕಾನೂನಾತ್ಮಕ ಹೋರಾಟ ಮಾಡುತ್ತಿದ್ದಾರೆ. ಆದರೆ ಎಲ್ಲೂ ಯಾರನ್ನು ನಿಂದನೆ ಮಾಡಿಲ್ಲ. ಅಸಲಿಗೆ ಈ ಭಾಸ್ಕರ್ ಪ್ರಸಾದ್ ಯಾರೆಂಬುದೇ ಗೊತ್ತಿಲ್ಲ. ಒಳ ಮೀಸಲಾತಿ ಹೋರಾಟದ ನೆಪ ಹೇಳಿ ಎರಡು ಕೋಮಿನ ನಡುವೆ ಜಾತಿ ವಿಷಬೀಜ ಬಿತ್ತಲು ಹೊರಟಿರುವ ಭಾಸ್ಕರ್ ಪ್ರಸಾದ್ ರನ್ನು ಕೂಡಲೇ ಬಂಧಿಸಬೇಕು. –ಕುಕ್ಕೂರು ಗಣೇಶ್, ತಾಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ.**

ಬಡವರಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬೆಳಕು


ವಿಶೇಷಚೇತನ ಸ್ವಾಮಿನಾಯಕರಿಗೆ ಮನೆ ಕೀ ಹಸ್ತಾಂತರಿಸಲಾಯಿತು.

ಹೆಚ್.ಡಿ.ಕೋಟೆ, ಏ.9– ಬಡ ಕುಟುಂಬಗಳಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬೆಳಕಾಗಿದೆ ಎಂದು ತಾಲೂಕು ಯೋಜನಾಧಿಕಾರಿ ಭಾಸ್ಕರ್ ತಿಳಿಸಿದರು.

ತಾಲೂಕಿನ ತೊರವಳ್ಳಿ ಗ್ರಾಮದಲ್ಲಿ ವಾತ್ಸಲ್ಯ ಯೋಜನೆಯಡಿ ನಿರ್ಮಿಸಿರುವ ಮನೆ ಕೀಯನ್ನು ವಿಶೇಷಚೇತನ ಸ್ವಾಮಿನಾಯಕ ಅವರಿಗೆ ಹಸ್ತಾಂತರಿಸಿ ಮಾತನಾಡಿದ ಅವರು, ವಿಶೇಷಚೇತನ ಸ್ವಾಮಿನಾಯಕ ತನ್ನ ತಾಯಿ ದೇವಮ್ಮನವರೊಂದಿಗೆ ಗುಡಿಸಲಿನಲ್ಲಿ ವಾಸವಾಗಿದ್ದರು. ಮಳೆ ಬಂದರೆ ತೊಂದರೆಯಾಗುತ್ತಿತ್ತು. ಹೀಗಾಗಿ ವಾತ್ಸಲ್ಯ ಯೋಜನೆಯಡಿ 1.20ಲಕ್ಷ ರೂ. ವೆಚ್ಚದಲ್ಲಿ ಮನೆ ನಿರ್ಮಿಸಿ ಕೊಡಲಾಗಿದೆ. ಇದೇ ರೀತಿ ರಾಜ್ಯದಲ್ಲಿ 750ಕ್ಕೂ ಹೆಚ್ಚು ಮತ್ತು ತಾಲೂಕಿನಲ್ಲಿ 4 ಮನೆ ನಿರ್ಮಿಸಿ ಕೊಡಲಾಗಿದೆ. ಅಲ್ಲದೇ 170 ಮಂದಿ ಅಶಕ್ತರಿಗೆ ಮಾಸಾಶನ ನೀಡಲಾಗುತ್ತಿದೆ ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಕನ್ನಡ ಪ್ರಮೋದ ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ವಿದ್ಯಾರ್ಥಿಗಳಿಗೆ ಸಹಾಯಧನ, ಗ್ರಾಮಗಳಲ್ಲಿ ದೇವಸ್ಥಾನ ಮತ್ತು ಸಮುದಾಯ ಭವನಗಳಿಗೆ ನೆರವು, ಡೈರಿ ಕಟ್ಟಡ ನಿರ್ಮಾಣಕ್ಕೆ ಅನುದಾನ ಸೇರಿದಂತೆ ಸಾಕಷ್ಟು ಸಮಾಜ ಸೇವಾ ಕಾರ್ಯ ಕೈಗೊಳ್ಳಲಾಗಿದೆ. ಯುವಕರು ದುಶ್ಚಟಕ್ಕೆ ಬಲಿಯಾಗದಂತೆ ಮದ್ಯವರ್ಜನ ಶಿಬಿರಗಳು, ಶಾಲಾ ಕಾಲೇಜುಗಳಲ್ಲಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ಜೆ.ಪಿ.ಶಿವರಾಜಪ್ಪ, ಜ್ಞಾನವಿಕಾಸ ಸಮನ್ವಯಾಧಿಕಾರಿ ಮಲ್ಲಮ್ಮ, ಮೇಲ್ವಿಚಾರಕರಾದ ಮಂಗಳಮ್ಮ, ಜಯಮ್ಮ, ಗ್ರಾಪಂ ಸದಸ್ಯೆ ಚಿಕ್ಕಮ್ಮ, ಮಾಜಿ ಸದಸ್ಯ ಚನ್ನನಾಯಕ, ಯಜಮಾನ ಚನ್ನನಾಯಕ, ಗ್ರಾಮಸ್ಥರಾದ ಸಂಜೀವ ಶೆಟ್ಟಿ, ಮಹೇಶ್, ಸೋಮಣ್ಣ ಇದ್ದರು.


ಇಟ್ನ ಗ್ರಾಪಂಗೆ ಚನ್ನನಾಯಕ ಅಧ್ಯಕ್ಷ


ಇಟ್ನ ಗ್ರಾಪಂ ಅಧ್ಯಕ್ಷರಾಗಿ ಎಸ್.ಚನ್ನನಾಯಕ ಆಯ್ಕೆಯಾಗಿದ್ದಾರೆ.

ಸರಗೂರು, ಏ.9– ತಾಲೂಕಿನ ಇಟ್ನ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಎಸ್.ಚನ್ನ ನಾಯಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗ್ರಾಪಂ ಆವರಣದಲ್ಲಿ ಬುಧವಾರ ನಡೆದ ಚುನಾವಣೆಯಲ್ಲಿ ಎಸ್.ಚನ್ನನಾಯಕ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ಹಿರಿಯ ಸಹಾಯಕ ತೋಟಗಾರಿಕೆ ಇಲಾಖೆ ನಿರ್ದೇಶಕಿ ನೇತ್ರಾವತಿ ಘೋಷಿಸಿದರು. ಈ ವೇಳೆ ಪಿಡಿಓ ಚಿನ್ನಸ್ವಾಮಿ, ಸಿಬ್ಬಂದಿ ವೀರರಾಜು, ಮಧು ಇದ್ದರು.

ಅಧ್ಯಕ್ಷ ಎಸ್.ಚನ್ನನಾಯಕ ಮಾತನಾಡಿ, ಗ್ರಾಪಂ ಅನುದಾನದಿಂದ ಗ್ರಾಮಗಳ ಅಭಿವೃದ್ಧಿಗೆ ಪೂರಕವಾದ ಕ್ರಿಯಾ ಯೋಜನೆ ರಚಿಸಿ ಶ್ರಮಿಸಲಾಗುವುದು ಎಂದರು. ಈ ವೇಳೆ ಉಪಾಧ್ಯಕ್ಷೆ ಗೌರಮ್ಮ, ಸದಸ್ಯರಾದ ಜಯರಾಮು, ಗೀತಾ, ಶಿವಮ್ಮ, ಆರ್.ಕಾಳಿಂಗನಾಯಕ, ಸವಿತಾ, ಮುಖಂಡರಾದ ವಿ.ಸಿದ್ದರಾಜು, ಎನ್.ಬಸವನಾಯಕ, ಬಿ.ಬಸವರಾಜು, ಚಾಮರಾಜು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಆದಿವಾಸಿ ಯುವಕನ ಬಂಧನ ಖಂಡಿಸಿ ಪ್ರತಿಭಟನೆ


ಆದಿವಾಸಿ ಯುವಕನ ಬಂಧನ ಖಂಡಿಸಿ ಪ್ರತಿಭಟನೆ ನಡೆಸಲಾಯಿತು

ಹುಣಸೂರು,ಏ.9–ಆದಿವಾಸಿ ಯುವಕನ ಬಂಧನ ಖಂಡಿಸಿ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವೀರನಹೊಸ ಹಳ್ಳಿ ಗೇಟ್ ಬಳಿ ನೂರಾರು ಆದಿವಾಸಿಗಳು ಬುಧವಾರ ರಾತ್ರಿ ಪ್ರತಿಭಟನೆ ನಡೆಸಿದರು.

ವೀರನಹೊಸಹಳ್ಳಿ ಗೇಟ್ ಬಳಿ ಜಮಾಯಿಸಿದ ಆದಿವಾಸಿಗಳು ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಹೊಟ್ಟೆಪಾಡಿಗಾಗಿ ಕೂಲಿ ಕೆಲಸಕ್ಕೆ ಕೊಡಗಿಗೆ ತೆರಳಿದ್ದ ಕಪ್ಪನಕಟ್ಟೆ ಹಾಡಿ ಆದಿವಾಸಿ ಯುವಕ ಸುರೇಶ್‌ನನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ. ಇದು ಖಂಡನೀಯ. ಸುರೇಶ್‌ನನ್ನು ನಮ್ಮೆದುರು ವಿಚಾರಣೆ ನಡೆಸಲಿ. ಆತ ತಪ್ಪು ಮಾಡಿದ್ದರೇ ನಾವೇ ಆತನನ್ನು ನಿಮ್ಮ ವಶಕ್ಕೆ ನೀಡುತ್ತೇವೆ ಎಂದ ಅವರು ಏನೂ ತಪ್ಪು ಮಾಡದ ಸುರೇಶ್‌ನನ್ನು ಬಂಧಿಸಿ ಯಾವುದೋ ಪ್ರಕರಣದಲ್ಲಿ ಸಿಲುಕಿಸಲು ಸಂಚು ರೂಪಿಸಿದ್ದೀರಿ. ಹೀಗಾಗಿ ಆತನನ್ನು ಸ್ಥಳಕ್ಕೆ ಕರೆಸುವವರೆಗೂ ಮುಷ್ಕರ ಹಿಂಪಡೆಯುವುದಿಲ್ಲ ಎಂದು ಅಹೋರಾತ್ರಿ ಧರಣಿ ಆರಂಭಿಸಿದ್ದಾರೆ.

ಈ ವೇಳೆ ಅರಣ್ಯಾಧಿಕಾರಿಗಳು ನಿಮ್ಮಲ್ಲಿ ಯಾರಾದರೂ ಐವರು ನಮ್ಮೊಂದಿಗೆ ಬನ್ನಿ, ಪೊಲೀಸರ ಸಮ್ಮುಖದಲ್ಲಿ ವಿಚಾರಣೆ ನಡೆಸುವುದಾಗಿ ತಿಳಿಸಿದರೂ, ಜಗ್ಗದ ಆದಿವಾಸಿಗಳು ಅಹೋರಾತ್ರಿ ಪ್ರತಿಭಟನೆಗೆ ಮುಂದಾಗಿದ್ದಾರೆ.

50 ವರ್ಷಗಳ ಬಳಿಕ

ಇಂದು, ನಾಳೆ ದೆಗ್ಗನಹಳ್ಳಿಯಲ್ಲಿ ಗ್ರಾಮದೇವತೆ ಹಬ್ಬ

ಕೆ.ಆರ್.ನಗರ, ಏ.9– ತಾಲೂಕಿನ ದೆಗ್ಗನಹಳ್ಳಿ ಗ್ರಾಮದಲ್ಲಿ 50 ವರ್ಷಗಳ ಬಳಿಕ ಏ.10, 11ರಂದು ಗ್ರಾಮದೇವತೆಗಳಾದ ಕರಿಯಮ್ಮ, ಕಂತಮ್ಮ, ದೊಡ್ಡಮ್ಮ ದೇವರುಗಳ ಹಬ್ಬವನ್ನು ವಿಜೃಂಭಣೆಯಿಂದ ನಡೆಯಲಿದೆ ಎಂದು ಗ್ರಾಮದ ಮುಖಂಡರು ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗ್ರಾಮದ ಮುಖಂಡರಾದ ಎಸ್.ಸಿದ್ದೇಗೌಡ, ಡಿ.ಎಸ್.ವರದರಾಜು, ಡಿ.ಸಿ.ಚಂದ್ರಕುಮಾರ್, ಚಿಕ್ಕರಾಮೇಗೌಡ, ಪ್ರೇಮ್, ಮುಂದಿನ ಪೀಳಿಗೆಗೆ ಗ್ರಾಮದ ಸಂಸ್ಕೃತಿ ತಿಳಿಸುವ ಸಲುವಾಗಿ ಹಬ್ಬ ಆಚರಿಸುತ್ತಿದ್ದು, ಇದಕ್ಕೆ ಸರ್ವರೂ ಸಹಕಾರ ನೀಡಿದ್ದಾರೆ ಎಂದರು.

ಸಾಲಿಗ್ರಾಮ ತಾಲೂಕಿನ ಲಕ್ಷ್ಮಿಪುರದ ಬನ್ನಿಯಮ್ಮ ಕಾಳಮ್ಮ, ಕುಕ್ಕೂರಮ್ಮ, ಹೊಂಗನೂರಮ್ಮ, ಕೆ.ಆರ್.ನಗರ ತಾಲೂಕಿನ ಮಾರಗೌಡನಹಳ್ಳಿಯ ಬನ್ನಮ್ಮ, ಅಜ್ಜಮ್ಮ, ಹೊಂಗಸೂರಮ್ಮ, ಈರಪ್ಪ ಸ್ವಾಮಿ ಮತ್ತು ಕೆ.ಆರ್.ಪೇಟೆ ತಾಲೂಕಿನ ಐಪನಹಳ್ಳಿ ಗ್ರಾಮದ ಕೊಗಲೂರಮ್ಮ, ದೆಗ್ಗನಹಳ್ಳಿ ಗ್ರಾಮದ ಮಾಸ್ತಮ್ಮ ತಾಯಿ ದೇವರುಗಳ ದಾಳಪೂಜೆಯನ್ನು ದೇವರ ಹೊಲದಲ್ಲಿ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.


ಗ್ರಾಮದ ಮುಖಂಡರು ಆಹ್ವಾನ ಪತ್ರಿಕೆ ಪ್ರದರ್ಶಿಸಿದರು.

ಏ.10 ರಂದು ಸಂಜೆ 7 ಗಂಟೆಗೆ ಎಲ್ಲಾ ದೇವರುಗಳ ಪೂಜೆಯನ್ನು ಹೊಲದಲ್ಲಿ ಮಾಡಿದ ನಂತರ ಪೂಜಾ ಕುಣಿತ, ದೇವರ ಕುಣಿತದೊಂದಿಗೆ ದೆಗ್ಗನಹಳ್ಳಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಏ.11ರಂದು ಬಸವನ ಮೇಲೆ ಮಜ್ಜನ ನಡೆದ ನಂತರ ಸಾಮೂಹಿಕ ಅನ್ನಸಂತರ್ಪಣೆ ಏರ್ಪಡಿಸಲಾಗಿದ್ದು, ದೇವರ ಭಕ್ತರು ಮತ್ತು ಅಕ್ಕಪಕ್ಕ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಕೋರಿದರು. 50 ವರ್ಷಗಳ ನಂತರ ನಡೆಯುತ್ತಿರುವ ಈ ಹಬ್ಬಕ್ಕೆ ಶಾಸಕ ಡಿ.ರವಿಶಂಕರ್, ಎಂಎಲ್‌ಸಿ ಡಾ.ಯತೀಂದ್ರ, ಹೆಚ್.ವಿಶ್ವನಾಥ್, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಸೇರಿದಂತೆ ಹಲವು ಮುಖಂಡರನ್ನು ಆಹ್ವಾನಿಸಲಾಗಿದ್ದು, ಧಾರ್ಮಿಕ ಸಭೆ ನಡೆಯಲಿದೆ ಎಂದರು.

ವಿಜೃಂಭಣೆಯ ಶ್ರೀಅಗಸ್ತ್ಯೇಶ್ವರಸ್ವಾಮಿ ಮಹಾರಥೋತ್ಸವ

ತಿ.ನರಸೀಪುರ, ಏ.9– ಕುಂಭಮೇಳ ಹಾಗೂ ತ್ರಿವೇಣಿ ಸಂಗಮ ಖ್ಯಾತಿಯ ತಿರುಮಕೂಡಲಿನ ಶ್ರೀ ಪೂರ್ಣ ಮಂಗಳ ಕಾಮಾಕ್ಷಾಂಭ ಸಮೇತ ಶ್ರೀಅಗಸ್ತ್ಯೇಶ್ವರ ಸ್ವಾಮಿಯವರ ಮಹಾರಥೋತ್ಸವ ನೂರಾರು ಭಕ್ತರ ಹರ್ಷೋದ್ಗಾರದ ನಡುವೆ ಬುಧವಾರ ವಿಜೃಂಭಣೆಯಿಂದ ನೆರವೇರಿತು.

ಶ್ರೀಅಗಸ್ತ್ಯೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಮಧ್ಯಾಹ್ನ 12.30ಕ್ಕೆ ರಾಜಸ್ವ ನಿರೀಕ್ಷಕ ಮಹೇಂದ್ರ ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಈ ವೇಳೆ ನೆರೆದಿದ್ದ ಭಕ್ತರು ಭಕ್ತಿ ಭಾವದಿಂದ ರಥ ಎಳೆದರು. ದೇವಾಲಯದ ಮುಂಭಾಗದಿಂದ ಆರಂಭಗೊಂಡ ರಥೋತ್ಸವ ತಿರುಮಕೂಡಲಿನ ಮುಖ್ಯ ಬೀದಿಯಲ್ಲಿ ಸಂಚರಿಸಿ ಗಣೇಶನ ದೇವಸ್ಥಾನ ಎದುರು ಯಾವುದೇ ಅಡೆತಡೆ ಇಲ್ಲದೇ ಬಂದು ಸ್ವಸ್ಥಾನ ಸೇರಿತು.

ಮುಖ್ಯ ರಥದೊಂದಿಗೆ ಚಂದ್ರಮೌಳೇಶ್ವರ, ಪಾರ್ವತಮ್ಮ, ವಿಘ್ನೇಶ್ವರ ಹಾಗೂ ಸುಬ್ರಹ್ಮಣ್ಯಸ್ವಾಮಿಯ ರಥಗಳನ್ನು ಎಳೆಯಲಾಯಿತು. ಭಕ್ತರು ರಥಕ್ಕೆ ಪೂಜೆ ಸಲ್ಲಿಸುವ ಜೊತೆಗೆ ಹಣ್ಣು ಜವನ ಎಸೆದು ಭಕ್ತಿ ಮೆರೆದರು. ದೇವಸ್ಥಾನ ಕಾಮಗಾರಿ ಹಾಗೂ ರಥ ಶಿಥಿಲಗೊಂಡಿದ್ದ ಹಿನ್ನೆಲೆಯಲ್ಲಿ ಕಳೆದ 8 ವರ್ಷಗಳಿಂದ ರಥೋತ್ಸವ ನಡೆದಿರಲಿಲ್ಲ. ದೇವಸ್ಥಾನದ ಕಾಮಗಾರಿ ಮುಗಿದು ಸಂಪ್ರೋಕ್ಷಣೆಯಾದ ಹಿನ್ನೆಲೆಯಲ್ಲಿ ರಥವನ್ನು ದುರಸ್ತಿಪಡಿಸಿ ರಥೋತ್ಸವ ಹಮ್ಮಿಕೊಳ್ಳಲಾಗಿತ್ತು. ಇದೇ ವೇಳೆ ಭಕ್ತರಿಗೆ ಪ್ರಸಾದ ಸೇರಿದಂತೆ ನೀರು, ಮಜ್ಜಿಗೆ, ಪಾನಕ ವಿತರಿಸಲಾಯಿತು.


ಶ್ರೀಅಗಸ್ತ್ಯೇಶ್ವರಸ್ವಾಮಿಯ ಮಹಾರಥೋತ್ಸವ ನೆರವೇರಿತು.

ರಥೋತ್ಸವ ಅಂಗವಾಗಿ ಬೆಳಗ್ಗೆಯಿಂದಲೇ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳು, ಅಭಿಷೇಕ, ಉತ್ಸವಗಳು ನೆರವೇರಿದವು. ಇದಕ್ಕೆ ಮೊದಲು ಮಧ್ಯಾಹ್ನ 12 ಗಂಟೆಗೆ ಅಮ್ಮನವರ ಉತ್ಸವ ಮೂರ್ತಿಯನ್ನು ಮೆರವಣಿಗೆಯಲ್ಲಿ ಕರೆತಂದು ರಥದ ಸುತ್ತ 3 ಪ್ರದಕ್ಷಿಣೆ ಹಾಕಿಸಿ ನಂತರ ರಥದಲ್ಲಿ ಪ್ರತಿಷ್ಠಾಪಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ದೇವಸ್ಥಾನದ ಪಾರುಪತ್ತೇದಾರ್ ಟಿ.ಎಸ್.ಚೇತನ್, ಮಾಜಿ ಪಾರುಪತ್ತೇದಾರ್ ಪವನ್ ಕುಮಾರ್, ಆಗಮಿಕರಾದ ಕುಮಾರ್ ದೀಕ್ಷಿತ್, ಒಕ್ಕಲಿಗ ಮುಖಂಡ ಪಿ.ಸ್ವಾಮಿನಾಥನ್, ಈಶ್ವರ, ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಟಿ.ಸಿ.ಫಣೀಶ್ ಕುಮಾರ್, ಒಕ್ಕಲಿಗ ಜನಾಂಗದ ಯಜಮಾನ ಚಂದ್ರೇಗೌಡ, ನಾಯಕ ಜನಾಂಗದ ಯಜಮಾನ ನಟರಾಜು, ಆರ್.ಚೇತನ್, ವೆಂಕಟೇಶ್, ಪೆಟ್ರೋಲ್ ಬಂಕ್ ಚಂದ್ರು, ಖಾಸಗಿ ಬಸ್ ಏಜೆಂಟ್ ಸಂಘದ ಅಧ್ಯಕ್ಷ ಶ್ರೀನಿವಾಸ್, ಬಸ್ ಮಾಲೀಕರಾದ ರಮೇಶ, ನಾಗರಾಜು, ಗ್ರಾಪಂ ಮಾಜಿ ಮಾಜಿ ಉಪಾಧ್ಯಕ್ಷ ಪುಟ್ಟು, ಈಶ್ವರ್, ಎಸ್‌ಎಸ್ ಪೈಂಟ್ ಗುರುದತ್, ತಿರುಮಕೂಡಲು ರಾಮ, ಲಕ್ಷ್ಮಣ ಹಾಜರಿದ್ದರು.

ಐಪಿಎಲ್ ಹಂಗಾಮ

ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ ಗುಜರಾತ್ ಟೈಟಾನ್ಸ್



ಅಹಮದಾಬಾದ್, ಏ.9– ಸಾಯಿ ಸುದರ್ಶನ್ ಅವರ ಅರ್ಧಶತಕ ಹಾಗೂ ಸಂಘಟಿತ ಬೌಲಿಂಗ್ ದಾಳಿ ನೆರವಿನಿಂದ ಗುಜರಾತ್ ಟೈಟಾನ್ಸ್, ರಾಜಸ್ಥಾನ್ ರಾಯಲ್ಸ್ ವಿರುದ್ಧ 58 ರನ್‌ಗಳ ಜಯ ಸಾಧಿಸಿದೆ.

ಆ ಮೂಲಕ ಗುಜರಾತ್ ಟೂರ್ನಿಯಲ್ಲಿ ಆಡಿರುವ 5 ಪಂದ್ಯಗಳ ಪೈಕಿ 1 ರಲ್ಲಿ ಸೋತು 4 ರಲ್ಲಿ ಗೆಲುವು ಸಾಧಿಸಿ 8 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದರೆ, ರಾಜಸ್ಥಾನ್ 2 ಗೆಲುವು, 3 ಸೋಲಿನೊಂದಿಗೆ 7ನೇ ಸ್ಥಾನದಲ್ಲಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟಾನ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 217 ರನ್ ಗಳಿಸಿತು. 218 ರನ್ ಗುರಿ ಬೆನ್ನತ್ತಿದ ರಾಜಸ್ಥಾನ್ 19.2 ಓವರ್‌ಗಳಲ್ಲಿ 159 ರನ್‌ಗಳಿಗೆ ಆಲೌಟಾಯಿತು.

ತಂಡದ ಪರ ನಾಯಕ ಸಂಜು ಸ್ಯಾಮ್ಸನ್ 28 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಒಳಗೊಂಡ 41 ರನ್, ರಿಯಾನ್ ಪರಾಗ್ 14 ಎಸೆತಗಳಲ್ಲಿ 3 ಸಿಕ್ಸರ್, 1 ಬೌಂಡರಿ ಒಳಗೊಂಡ 26 ರನ್ ಗಳಿಸಿದರು. ಶಿಮ್ರಾನ್ ಹೆಟ್ಮೆಯರ್ 32 ಎಸೆತಗಳಲ್ಲಿ 3 ಸಿಕ್ಸರ್, 4 ಬೌಂಡರಿ ಒಳಗೊಂಡ ಬಿರುಸಿನ 52 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗಲಿಲ್ಲ. ಗುಜರಾತ್ ಪರ ಕನ್ನಡಿಗ ಪ್ರಸಿದ್ಧ್ ಕೃಷ್ಣ 3, ರಶೀದ್ ಖಾನ್, ಸಾಯಿ ಕಿಶೋರ್ ತಲಾ 2, ಮೊಹಮ್ಮದ್ ಸಿರಾಜ್, ಅರ್ಷದ್ ಖಾನ್, ಕುಲ್ವಂತ್ ಖೆಜ್ರೋಲಿಯಾ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟಾನ್ಸ್ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಶುಭ್‌ಮನ್ ಗಿಲ್ 2 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ 2ನೇ ವಿಕೆಟ್‌ಗೆ ಜೊತೆಯಾದ ಸಾಯಿ ಸುದರ್ಶನ್ ಹಾಗೂ ಜೋಸ್ ಬಟ್ಲರ್ 80 ರನ್‌ಗಳ ಜೊತೆಯಾಟ ವಾಡುವ ಮೂಲಕ ಚೇತರಿಕೆ ನೀಡಿದರು. ಆದರೆ 36 ರನ್ ಗಳಿಸಿ ಬಟ್ಲರ್ ಔಟಾದರು. ನಂತರ ಬಂದ ಶಾರುಖ್ ಖಾನ್ ಸಹ 36 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಅರ್ಧಶತಕ ಸಿಡಿಸಿ ಶತಕದತ್ತ ಮುನ್ನುಗ್ಗುತ್ತಿದ್ದ ಸಾಯಿ ಸುದರ್ಶನ್ 53 ಎಸೆತಗಳಲ್ಲಿ 8 ಬೌಂಡರಿ, 3 ಸಿಕ್ಸರ್ ಒಳಗೊಂಡ 82 ರನ್ ಗಳಿಸಿ ಔಟಾದರು. ಉಳಿದಂತೆ ರಾಹುಲ್ ತೆವಾಟಿಯಾ ತಲಾ 2 ಸಿಕ್ಸರ್, ಬೌಂಡರಿ ಒಳಗೊಂಡ 24, ರಶೀದ್ ಖಾನ್ 4 ಎಸೆತಗಳಲ್ಲಿ ತಲಾ ಒಂದು ಸಿಕ್ಸರ್, ಬೌಂಡರಿ ಒಳಗೊಂಡ 12 ರನ್ ಗಳಿಸಿದರು. ರಾಜಸ್ಥಾನ್ ಪರ ತುಷಾರ್ ದೇಶಪಾಂಡೆ, ಮಹೀಶ್ ತೀಕ್ಷಣ ತಲಾ 2, ಜೋಫ್ರಾ ಆರ್ಚರ್, ಸಂದೀಪ್ ಶರ್ಮಾ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಸಾಯಿ ಸುದರ್ಶನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯ

ರಾಯಲ್ ಚಾಲೆಂಜರ್ಸ್ ಬೆಂಗಳೂರು
V/S
ಡೆಲ್ಲಿ ಕ್ಯಾಪಿಟಲ್ಸ್
ಸಮಯ: ಸಂಜೆ 7.30
ಸ್ಥಳ : ಎಂ.ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	5	4	1	0	8
ಡೆಲ್ಲಿ	3	3	0	0	6
ಬೆಂಗಳೂರು	4	3	1	0	6
ಪಂಜಾಬ್	4	3	1	0	6
ಲಕ್ನೋ	5	3	2	0	6
ಕೋಲ್ಕತ್ತಾ	5	2	3	0	4
ರಾಜಸ್ಥಾನ್	5	2	3	0	4
ಮುಂಬೈ	5	1	4	0	2
ಚೆನ್ನೈ	5	1	4	0	2
ಹೈದರಾಬಾದ್	5	1	4	0	2

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವೀರ ಧೀರ ಶೂರನ್–2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ ಚಿತ್ರಮಂದಿರ	(ದೂ: 2422871)
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಿಸ್ ಟೀಚರ್ (ಹಿಂ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ಜಾಟ್ (ತೆ)	4 ಪ್ರದರ್ಶನಗಳು
ಸಂಗಂ	
ವಾಮನ (ಕ)	4 ಪ್ರದರ್ಶನಗಳು
ಲಿಡೋ	
ನಿಮ್ಮೇ ಕಥೆ (ಕ–2), ಬೆಂಕಿಯ ಬಲೆ (ಕ–2)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 2	ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.
ಸ್ಕ್ರೀನ್ 4	ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.
ಸ್ಕ್ರೀನ್ 2	ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪಿಎಂ ಪೋಷಣ್ ಅನುಷ್ಠಾನದಲ್ಲಿ ವ್ಯಾಪಕ ಲೋಪದೋಷ

• ರಾಜ್ಯದ 800 ಶಾಲೆಗಳಿಗೆ ತಜ್ಞರ ತಂಡ ಭೇಟಿ; 12 ದೋಷಗಳ ಪಟ್ಟಿ ಸರ್ಕಾರಕ್ಕೆ ಸಲ್ಲಿಕೆ • ಯೋಜನೆ ಅನುಷ್ಠಾನಕ್ಕೆ ನಿಯೋಜಿತ ಸಿಬ್ಬಂದಿಗೆ ತರಬೇತಿ ಇಲ್ಲ • ಅನುದಾನಗಳ ಸಮರ್ಪಕ ವಿನಿಯೋಗದ ಲೆಕ್ಕ-ಪತ್ರವೇ ಇಲ್ಲ



ಸಂಗ್ರಹ ಚಿತ್ರ

ಮೈಸೂರು, ಏ.9(ಎಸ್‌ಪಿಎನ್)– 2023–24ನೇ ಸಾಲಿನ ಪಿಎಂ ಪೋಷಣ್ (ಮಧ್ಯಾಹ್ನ ಉಪಾಹಾರ ಯೋಜನೆ) ಕಾರ್ಯಕ್ರಮದಲ್ಲಿ ರಾಜ್ಯದ ಸುಮಾರು 800 ಶಾಲೆಗಳಿಗೆ ತಜ್ಞರ ಪರಿಶೀಲನಾ ತಂಡ ಭೇಟಿ ನೀಡಿದ ಸಂದರ್ಭದಲ್ಲಿ ಕಂಡುಬಂದ 12 ಅಂಶಗಳ ಲೋಪ ದೋಷಗಳ ಪಟ್ಟಿಯನ್ನು ಶಾಲಾ ಶಿಕ್ಷಣ ಇಲಾಖೆಗೆ ಫೆ.17ರಂದು ಸಲ್ಲಿಸಿದೆ.

ಪಿಎಂ ಪೋಷಣ್(ಮಧ್ಯಾಹ್ನ ಉಪಾಹಾರ ಯೋಜನೆ) ಯೋಜನೆಯ ಭಾಗವಾದ ಕ್ಷೀರ ಭಾಗ್ಯ ಯೋಜನೆ ಮತ್ತು ಪೂರಕ ಪೌಷ್ಟಿಕ ಆಹಾರ ವಿತರಣೆ ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ ಪರಿಣಾಮಕಾರಿ ಅನುಷ್ಠಾನ ಕುರಿತಂತೆ ಮೌಲ್ಯಮಾಪನ ಮಾಡಲು ಸಾಮಾಜಿಕ ಪರಿಶೋಧನಾ ತಂಡ ರಚಿಸಿ ಪರಿಶೀಲನೆ ನಡೆಸಲಾಗಿತ್ತು.

ಈ ಪರಿಶೀಲನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಬೆಂಗಳೂರಿನ ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ನೀಡಿದ ಸೂಚನೆ ಮೇರೆಗೆ ರಾಜ್ಯದ ಆಯ್ದ 800 ಶಾಲೆಗಳಿಗೆ 4 ದಿನಗಳ ಕಾಲ ತಜ್ಞರ ತಂಡ ಭೇಟಿ ನೀಡಿ, ಕೇಂದ್ರ ಸರ್ಕಾರದ ಶಿಕ್ಷಣ ಮಂತ್ರಾಲಯದ ಪಿಎಂ ಪೋಷಣ್ ವಿಭಾಗದಿಂದ ನೀಡಿರುವ ಮಾರ್ಗಸೂಚಿಯಂತೆ ಮೌಲ್ಯಮಾಪನ ಚಟುವಟಿಕೆ ಕೈಗೊಂಡು, ಉದ್ದೇಶಿತ ಮಾಹಿತಿ ದತ್ತಾಂಶಗಳನ್ನು ಸಿದ್ಧಪಡಿಸಿ ಫೆ.17ರಂದು ಶಾಲಾ ಶಿಕ್ಷಣ ಇಲಾಖೆಗೆ ಸಲ್ಲಿಸಿದೆ.

ಲೋಪದೋಷಗಳ ಪಟ್ಟಿ: ಸೋಷಿಯಲ್ ಆಡಿಟ್ ತಂಡ ಭೇಟಿ ನೀಡಿದ ರಾಜ್ಯದ ಆಯ್ದ 720 ಶಾಲಾ ಆವರಣದಲ್ಲಿ ಬಿಸಿಯೂಟ ಯೋಜನೆಗೆ ಬೆಂಬಲವಾಗಿ ಶಾಲಾ ಪೌಷ್ಟಿಕ ವನ, ಕೈತೋಟ ನಿರ್ಮಾಣವಾಗಿಲ್ಲ. 154 ಶಾಲೆಗಳಲ್ಲಿ ಬಿಸಿಯೂಟ ಯೋಜನೆ ಕುರಿತು ವಿದ್ಯಾರ್ಥಿಗಳಿಗೆ ಸಾಕಷ್ಟು ಮಾಹಿತಿ ಇರುವುದಿಲ್ಲ. 242 ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರಿನ ಲಭ್ಯತೆ ಸಾಕಷ್ಟು ಪ್ರಮಾಣದಲ್ಲಿ ಇರುವುದಿಲ್ಲ. 716 ಶಾಲೆಗಳಲ್ಲಿ ಬಿಸಿಯೂಟ ಯೋಜನೆಗೆ ಪಡಿತರ ಸ್ವೀಕರಿಸಿದ ದಾಸ್ತಾನು ಸಂಗ್ರಹದಲ್ಲಿ ಲೆಕ್ಕ ದಾಖಲೆಗಿಂತ ಕಡಿಮೆ ಪ್ರಮಾಣದ ಆಹಾರ ದಾಸ್ತಾನು ಕಂಡು ಬಂದಿರುತ್ತದೆ.

> 2023–24ನೇ ಸಾಲಿನ ಪಿಎಂ ಪೋಷಣ್ ಯೋಜನೆಯಡಿ ಸೋಷಿಯಲ್ ಆಡಿಟ್ ನಡೆಸಲು ತಜ್ಞರ ತಂಡ ಭೇಟಿ ನೀಡಿದ ಶಾಲೆಗಳ ವಿವರ ಇಂತಿದೆ. ಮೈಸೂರು ಜಿಲ್ಲೆ 28, ಮಂಡ್ಯ 27, ಕೊಡಗು 12, ಚಾಮರಾಜನಗರ 17, ಹಾಸನ 27 ಸೇರಿದಂತೆ ರಾಜ್ಯಾದ್ಯಂತ ಸುಮಾರು 800 ಶಾಲೆಗಳಿಗೆ ಭೇಟಿ ನೀಡಿ, ಮಧ್ಯಾಹ್ನ ಬಿಸಿಯೂಟ ಯೋಜನೆಯ ಸೋಷಿಯಲ್ ಆಡಿಟ್ ನಡೆಸಿ ಸಿದ್ಧಪಡಿಸಿದ ವರದಿ ಶಾಲಾ ಶಿಕ್ಷಣ ಇಲಾಖೆಗೆ ಸಲ್ಲಿಕೆಯಾಗಿದೆ.

ಅಲ್ಲದೆ, 259 ಶಾಲೆಗಳಿಗೆ ಪೂರೈಕೆಯಾಗುವ ಆಹಾರ ಪದಾರ್ಥಗಳನ್ನು ಸಂಗ್ರಹಣೆ ಮಾಡಲು ಪ್ರತ್ಯೇಕ ಆಹಾರ ಉಗ್ರಾಣ ಇರುವುದಿಲ್ಲ.

102 ಶಾಲೆಗಳಲ್ಲಿ ಪಿಎಂ ಪೋಷಣ್ ಕಾರ್ಯಕ್ರಮದಡಿ ಅಡುಗೆ ಕೇಂದ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳು ಸಾಕಷ್ಟು ತರಬೇತಿ ಹೊಂದಿಲ್ಲ. 55 ಶಾಲೆಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆ, ಕ್ಷೀರ ಭಾಗ್ಯ ಮತ್ತು ಪೂರಕ ಪೌಷ್ಟಿಕ ಆಹಾರ ವಿತರಣೆಗೆ ಬಿಡುಗಡೆಗೊಳಿಸಿದ ಅನುದಾನದ ಖರ್ಚು–ವೆಚ್ಚಗಳಿಗೆ ಸಂಬಂಧಿಸಿದ ಲೆಕ್ಕ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಿರುವುದಿಲ್ಲ.

51 ಶಾಲೆಗಳಲ್ಲಿ ವಿದ್ಯಾರ್ಥಿಗೆ ಪ್ರತಿನಿತ್ಯ ನಿಗದಿಪಡಿಸಿರುವ ಪರಿವರ್ತನಾ ವೆಚ್ಚಕ್ಕೆ ಅನುಗುಣವಾಗಿ ಆಹಾರ ಧಾನ್ಯಗಳಾದ ಅಕ್ಕಿ, ಗೋಧಿ, ತೊಗರಿಬೇಳೆ, ಅಡುಗೆ ಎಣ್ಣೆ ತರಕಾರಿಗಳನ್ನು ನಿಗದಿತ ಪ್ರಮಾಣದಲ್ಲಿ ಸಮರ್ಪಕವಾಗಿ ಬಳಕೆ ಮಾಡುತ್ತಿಲ್ಲ. 60 ಪ್ರತಿನಿತ್ಯ ಶಾಲೆಗಳಲ್ಲಿ ಮಕ್ಕಳಿಗೆ ಸಿದ್ಧಪಡಿಸಿದ ಬಿಸಿಯೂಟ ಪೂರ್ವದಲ್ಲಿ ಮುಖ್ಯ ಶಿಕ್ಷಕ, ಮುಖ್ಯ ಅಡುಗೆಯವರು ಅಥವಾ ಒಬ್ಬ ಶಿಕ್ಷಕರಾದರೂ ಆಹಾರ ಶುಚಿ–ರುಚಿ ಪರೀಕ್ಷಿಸದೇ ಇರುವುದು ಹಾಗೂ ಶುಚಿ–ರುಚಿ ಅಭಿಪ್ರಾಯ ನಮೂದಿಸದೇ ನಿರ್ಲಕ್ಷಿಸುತ್ತಿರುವುದು ಕಂಡುಬಂದಿದೆ. 101 ಆಹಾರ ಧಾನ್ಯಗಳನ್ನು ಸುರಕ್ಷಿತವಾಗಿ ಸಂರಕ್ಷಣೆ ಮಾಡದೆ ಹಾಗೂ ಸಂಗ್ರಹಿಸಿದ ಆಹಾರ ಪದಾರ್ಥಗಳ ಬಳಕೆಯಲ್ಲಿ ಎಫ್‌ಐಎಫ್‌ಓ, ಎಫ್‌ಇಎಫ್‌ಓ ಪದ್ಧತಿಯನ್ನು ಅನುಸರಿಸದೇ ಇರುವುದು ಕಂಡುಬಂದಿದೆ.

130 ಬೆಂಕಿ ಅವಘಡಗಳು ಸಂಭವಿಸಿದಾಗ ತಡೆಗಟ್ಟಲು ತುರ್ತು ಆರೋಗ್ಯ ವ್ಯವಸ್ಥೆಯನ್ನು ಹಾಗೂ ಅಗ್ನಿನಂದಕ ಉಪಕರಣವನ್ನು ಅಡುಗೆ ಕೇಂದ್ರದಲ್ಲಿ ಸುಸ್ಥಿತಿಯಲ್ಲಿ ಇಟ್ಟು ನಿರ್ವಹಿಸದೇ ಇರುವುದು ಕಂಡುಬಂದಿದೆ. 199 ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬಿಸಿಯೂಟ ಸ್ವೀಕರಿಸಲು ಸ್ಟೀಲ್ ತಟ್ಟೆಗಳು ಮತ್ತು ಲೋಟಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿರುವುದಿಲ್ಲ.

ಜಿಪಂ ಪಿಎಂ ಪೋಷಣ್ ವಿಭಾಗದ ಶಿಕ್ಷಣಾಧಿಕಾರಿಯು ಜಿಪಂ ಹಂತದಲ್ಲಿ 2024–25ನೇ ಸಾಲಿನ ಸೋಷಿಯಲ್ ಆಡಿಟ್‌ಗಾಗಿ ಐದು ತಂಡಗಳನ್ನು ರಚಿಸಿ ಸಿಇಓಗಳ ಅನುಮೋದನೆ ಪಡೆದು ಜ್ಞಾಪನಾದೇಶದೊಂದಿಗೆ ಕಾರ್ಯ ನಿರ್ವಹಿಸುವ ತಂಡಗಳ ವಿವರ ಇಂತಿವೆ.

2024–25ನೇ ಸಾಲಿನ ಪರಿಶೀಲನೆಗೆ ಐದು ತಜ್ಞರ ತಂಡ ರಚನೆ: ಮೈಸೂರು ಜಿಲ್ಲೆಯಲ್ಲಿ ಪಿಎಂ ಪೋಷಣ್ ಯೋಜನೆಯ 2024–25ನೇ ಸೋಷಿಯಲ್ ಆಡಿಟ್ ನಡೆಸಲು ಜಿಲ್ಲೆಯಲ್ಲಿ ಐದು ತಂಡಗಳನ್ನು ರಚಿಸಲಾಗಿದೆ. **ಮೊದಲನೇ ತಂಡದಲ್ಲಿ** ಶಾಲಾ ಶಿಕ್ಷಣ ಇಲಾಖೆ ಡಿಡಿಪಿಐ(ಆಡಳಿತ), ಪಿಎಂ ಪೋಷಣ್ ಸಹಾಯಕ ನಿರ್ದೇಶಕರು, ಸಂಬಂಧಿಸಿದ ಕ್ಲಸ್ಟರ್‌ನ ಸಿಆರ್‌ಪಿ, **ಎರಡನೇ ತಂಡದಲ್ಲಿ** ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್)ಯ ಡಿಡಿಪಿಐ (ಅಭಿವೃದ್ಧಿ), ಕ್ಷೇತ್ರ ಸಂಪನ್ಮೂಲ ಸಮನ್ವಯ(ಬಿಆರ್‌ಸಿ) ಅಧಿಕಾರಿ, ಸಂಬಂಧಿಸಿದ ಕ್ಲಸ್ಟರ್ ಸಿಆರ್‌ಪಿ, **ಮೂರನೇ ತಂಡದಲ್ಲಿ** ಕ್ಷೇತ್ರಶಿಕ್ಷಣಾಧಿಕಾರಿ(ಬಿಇಓ), ಪಿಎಂ ಪೋಷಣ್ ವಿಭಾಗದ ಸಹಾಯಕ ನಿರ್ದೇಶಕರು, ಸಂಬಂಧಿಸಿದ ಕ್ಲಸ್ಟರ್ ಸಿಆರ್‌ಪಿ, **ನಾಲ್ಕನೇ ತಂಡದಲ್ಲಿ** ಡಯಟ್ ಹಿರಿಯ ಉಪನ್ಯಾಸಕರು, ಉಪನ್ಯಾಸಕರು, ಸಂಬಂಧಿಸಿದ ಕ್ಲಸ್ಟರ್‌ನ ಸಿಆರ್‌ಪಿ, **ಐದನೆ ತಂಡದಲ್ಲಿ** ಜಿಪಂ ಕಚೇರಿಯ ಪಿಎಂ ಪೋಷಣ್ ಶಿಕ್ಷಣಾಧಿಕಾರಿ, ಡಯಟ್ ಉಪನ್ಯಾಸಕ, ಸಂಬಂಧಿಸಿದ ಕ್ಲಸ್ಟರ್ ಸಿಆರ್‌ಪಿ ಇರಲಿದ್ದಾರೆ. ಜಿಲ್ಲಾ ಹಂತದ ಕಾರ್ಯತಂಡಗಳು ಶಾಲೆಗಳಿಗೆ ಭೇಟಿ ನೀಡಲು ಅಗತ್ಯವಿರುವ ಶಾಲಾ ಪಟ್ಟಿಗಳನ್ನು ಕಳುಹಿಸಿದೆ.

> 2024–25ನೇ ಸಾಲಿನಲ್ಲಿ ಪಿಎಂ ಪೋಷಣ್ ಯೋಜನೆಯ ಸೋಷಿಯಲ್ ಆಡಿಟ್ ಮಾಡಲು ಜಿಲ್ಲಾ ಹಂತದಲ್ಲಿ ರಚಿಸಿರುವ ತಂಡಗಳು ಕಾಲಮಿತಿಯಲ್ಲಿ ಶಾಲೆಗಳಿಗೆ ಭೇಟಿ ನೀಡಿ ಶಾಲಾ ಶಿಕ್ಷಣ ಇಲಾಖೆಗೆ ವರದಿ ಸಲ್ಲಿಸಬೇಕು
> - ಎಂ.ಕೂರ್ಮಾರಾವ್, ನಿರ್ದೇಶಕರು
> ಶಾಲಾ ಶಿಕ್ಷಣ ಇಲಾಖೆ(ಪಿಎಂ ಪೋಷಣ್ ವಿಭಾಗ)

> ಪಿಎಂ ಪೋಷಣ್ ಯೋಜನೆಯ 2024–25ನೇ ಸಾಲಿನ ಸೋಷಿಯಲ್ ಆಡಿಟ್ ಮಾಡಲು ಜಿಲ್ಲಾ ಪೋಷಣ್ ವಿಭಾಗದ ಶಿಕ್ಷಣಾಧಿಕಾರಿಗಳ ನೇತೃತ್ವದ ಐದು ತಂಡಗಳನ್ನು ರಚಿಸಲಾಗಿದೆ. ಇದರಲ್ಲಿ ಒಂದು ತಂಡ ಆಯ್ದ ಹಲವು ಶಾಲೆಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದೆ. ಇದರಲ್ಲಿ ಕೆಲ ಶಾಲೆಯಲ್ಲಿ ಮಾತ್ರ ಬಿಸಿಯೂಟ ಯೋಜನೆಯಲ್ಲಿ ಲೋಪ ಕಂಡುಬಂದಿದೆ. ಉಳಿದ ಶಾಲೆಗಳಲ್ಲಿ ಯಾವುದೇ ಲೋಪ ಕಂಡುಬಂದಿಲ್ಲ ಎಂದು ವರದಿ ನೀಡಿದೆ.
> - ಎಸ್.ಯುಕೇಶ್ ಕುಮಾರ್, ಸಿಇಓ, ಜಿಲ್ಲಾ ಪಂಚಾಯತ್, ಮೈಸೂರು

ಒಳಮೀಸಲಾತಿಗಾಗಿ ನಡೆಯುವ ಸಮೀಕ್ಷೆಯಲ್ಲಿ 'ಮಾದಿಗ' ಎಂದು ಉಲ್ಲೇಖಿಸುವುದನ್ನು ಸಮುದಾಯದ ಯಾರೂ ಮರೆಯಬಾರದು

ಸಮುದಾಯ ಮುಖಂಡರೂ ಆದ ಹಿರಿಯ ವಕೀಲ ಎಸ್.ಅರುಣ್‌ಕುಮಾರ್



ಮೈಸೂರು,ಏ.9(ಪಿಎಂ)– ಪರಿಶಿಷ್ಟ ಜಾತಿಗಳ ಒಳಮೀಸಲಾತಿಗಾಗಿ ನಡೆಯುವ ಸಮೀಕ್ಷೆಯಲ್ಲಿ 'ಮಾದಿಗ' ಎಂದು ಉಲ್ಲೇಖಿಸುವುದನ್ನು ಸಮುದಾಯದ ಯಾರೂ ಮರೆಯಬಾರದು. ಇದು ಅತ್ಯಂತ ಪ್ರಮುಖವಾದುದು ಎಂದು ಮಾದಿಗ ಸಮುದಾಯ ಮುಖಂಡರೂ ಆದ ಹಿರಿಯ ವಕೀಲ ಎಸ್.ಅರುಣ್ ಕುಮಾರ್ ಹೇಳಿದರು.

ಒಳಮೀಸಲಾತಿ ಶೀಘ್ರ ಜಾರಿಗೆ ಆಗ್ರಹಿಸಿ ರಾಜ್ಯಾದ್ಯಂತ ಸಂಚರಿಸಲಿರುವ 'ಕ್ರಾಂತಿಕಾರಿ ರಥಯಾತ್ರೆ' ಮೈಸೂರು ತಾಲೂಕಿನ ಸಿದ್ದನಹುಂಡಿ ಗ್ರಾಮಕ್ಕೆ ಮಂಗಳವಾರ ಸಂಜೆ ಆಗಮಿಸಿದ ಸಂದರ್ಭದಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸುವ ಸಂಬಂಧ ರಾಜ್ಯ ಸರ್ಕಾರ ಸಮೀಕ್ಷೆಗೆ ಚಾಲನೆ ನೀಡಿದೆ. ಪರಿಶಿಷ್ಟ ಜಾತಿಯ 101 ಸಮುದಾಯಗಳ ಜನಸಂಖ್ಯೆ ಆಧಾರದ ಮೇಲೆ ಸಮೀಕ್ಷೆ ನಡೆಯಲಿದೆ. ನಿಮಗೆ ಗೊತ್ತಿರಲಿ ಕರ್ನಾಟಕ ರಾಜ್ಯದಲ್ಲಿ ನಮ್ಮ ಮಾದಿಗ ಸಮುದಾಯದ ಜನಸಂಖ್ಯೆಯೇ ನಂಬರ್ 1 ಎಂದರು.

ಸಮುದಾಯದವರು ಅತ್ಯಂತ ಎಚ್ಚರಿಕೆಯಿಂದ ಈ ಸಮೀಕ್ಷೆಯಲ್ಲಿ ಭಾಗಿಯಾದರೆ ನಮಗೆ ಶೇ.6ರಷ್ಟು ಮಾತ್ರವಲ್ಲ, ಶೇ.8ಕ್ಕೂ ಅಧಿಕ ಮೀಸಲಾತಿ ದೊರೆಯಲಿದೆ. ಹೀಗಾಗಿ ಸಮೀಕ್ಷೆ ಸಂಬಂಧ ಹಳೇ ಮೈಸೂರು ಪ್ರಾಂತ್ಯದಲ್ಲಿ ಸಮುದಾಯಕ್ಕೆ ಜಾಗೃತಿ ಮೂಡಿಸಲಾಗುತ್ತಿದೆ. ಮಾದಿಗ ಸಮುದಾಯದ ಜಾತಿ ಪ್ರಮಾಣಪತ್ರದಲ್ಲಿ 'ಆದಿ ಕರ್ನಾಟಕ' ಹಾಗೂ 'ಆದಿದ್ರಾವಿಡ' ಎಂದು ಇದ್ದು, ಸಮೀಕ್ಷೆ ವೇಳೆ ಸಮುದಾಯದವರು 'ಮಾದಿಗ' ಎಂದು ಉಲ್ಲೇಖಿಸುವುದನ್ನು ಮರೆಯಬಾರದು ಎಂದು ತಿಳಿಸಿದರು.

ಸಮೀಕ್ಷೆ ನಡೆಸಲು ಬರುವವರನ್ನು ನೀವು ಯಾವ ಜಾತಿ ಎಂದು ಕೇಳುವುದು ಅಗತ್ಯ. ಏಕೆಂದರೆ ಈ ಸಮೀಕ್ಷೆ ನಡೆಸುವ ಸಿಬ್ಬಂದಿ ಯಾರೂ ಪರಿಶಿಷ್ಟ ಜಾತಿಯವರು ಆಗಿರಬಾರದು. ಏಕೆಂದರೆ ಹಿಂದಿನ ಸಮೀಕ್ಷೆಗಳಲ್ಲಿ ಪೆನ್ಸಿಲ್‌ನಲ್ಲಿ ಬರೆದುಕೊಂಡು ಬಳಿಕ ಪೆನ್ನಿನಲ್ಲಿ ತಿದ್ದುಪಡಿ ಮಾಡಿಕೊಂಡಿರುವ ಉದಾಹರಣೆಗಳಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಸಬೂಬು ಹೇಳಲು ಈ ಬಾರಿ ಬಿಡಬಾರದು. ಸಮೀಕ್ಷೆಯ ಅವಕಾಶವನ್ನು ಸಮುದಾಯದವರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಇಂದು ಜಿಲ್ಲಾಡಳಿತದಿಂದ ಭಗವಾನ್ ಮಹಾವೀರರ ಜಯಂತಿ ಆಚರಣೆ



ಮೈಸೂರು,ಏ.9(ಪಿಎಂ)– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಏ.10ರಂದು ಭಗವಾನ್ ಮಹಾವೀರ ಜಯಂತಿ ಆಯೋಜಿಸಲಾಗಿದೆ.

ಮೈಸೂರಿನ ಕಲಾಮಂದಿರದಲ್ಲಿ ಸಂಜೆ 5.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಘನ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಜಯಂತಿ ಉದ್ಘಾಟಿಸಲಿದ್ದಾರೆ.

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್ ಪಾಲ್ಗೊಳ್ಳಲಿದ್ದು, ಅತಿಥಿಗಳಾಗಿ ಶಾಸಕರು, ವಿಧಾನಪರಿಷತ್ ಸದಸ್ಯರು, ನಿಗಮ–ಮಂಡಳಿ ಹಾಗೂ ಪ್ರಾಧಿಕಾರಗಳ ಅಧ್ಯಕ್ಷರು ಭಾಗವಹಿಸಲಿದ್ದಾರೆ. ಪ್ರೊ.ಎಸ್.ಶಿವರಾಜಪ್ಪ ಮುಖ್ಯ ಭಾಷಣ ಮಾಡಲಿದ್ದಾರೆ. ಇದಕ್ಕೂ ಮುನ್ನ ಸಂಜೆ 4.30ಕ್ಕೆ ಡಾ.ಸ್ನೇಹಶ್ರೀ ನಿರ್ಮಲ್‌ಕುಮಾರ್ ಮತ್ತು ತಂಡದಿಂದ ಗೀತ ಗಾಯನ ಕಾರ್ಯಕ್ರಮ ನಡೆಯಲಿದೆ.

ರಾಜ್ಯದ 15 ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರಿ ಮಳೆ

ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ಚಂಡಮಾರುತ ಸೃಷ್ಟಿಯಾಗಿರುವುದರಿಂದಾಗಿ ಇಂದಿನಿಂದ ಏ.17ವರೆಗೆ ಬೆಂಗಳೂರು ಸೇರಿ 15 ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಳೆಯಾಗಲಿದೆ. ಬೆಳಗಾವಿ, ಧಾರವಾಡ, ಹಾವೇರಿ, ಗದಗ, ಬಾಗಲಕೋಟೆ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಸಾಮಾನ್ಯ ಮಳೆಯಾಗಲಿದೆ ಎಂದು ಐಎಂಡಿ ವರದಿ ಹೇಳಿದೆ.

ಭ್ರಷ್ಟಾಚಾರದಲ್ಲಿ ಕರ್ನಾಟಕವೇ ನಂಬರ್ ಒನ್

• ಕಾಂಗ್ರೆಸ್ ಶಾಸಕ ಬಸವರಾಜ ರಾಯರೆಡ್ಡಿಯಿಂದಲೇ ಘೋಷಣೆ • ಎಐಸಿಸಿ ಅಧಿವೇಶನದ ವೇಳೆ ಸಿದ್ದರಾಮಯ್ಯ ಸರ್ಕಾರಕ್ಕೆ ಭಾರೀ ಮುಜುಗರ



ಕೊಪ್ಪಳ, ಏ.9– ಗುಜರಾತಿನ ಅಹಮದಾಬಾದ್‌ನಲ್ಲಿ ಎರಡು ದಿನಗಳ ಎಐಸಿಸಿ ಅಧಿವೇಶನ ನಿನ್ನೆ (ಏ.8) ಆರಂಭವಾಗಿದೆ. ಅದರಲ್ಲಿ ಭಾಗವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಆದಿಯಾಗಿ ಹಲವು ಸಚಿವರು, ಪ್ರಮುಖರು ತೆರಳಿದ್ದಾರೆ. ಈ ವೇಳೆಯೇ, ಸಿಎಂ ಸಿದ್ದರಾಮಯ್ಯ ಆಪ್ತ ಶಾಸಕ ಬಸವರಾಜ ರಾಯರೆಡ್ಡಿ ಅವರು ಭ್ರಷ್ಟಾಚಾರದಲ್ಲಿ ಕರ್ನಾಟಕವೇ ನಂಬರ್ ಒನ್ ಎಂದು ಹೇಳಿಕೆ ನೀಡುವ ಮೂಲಕ ಕಾಂಗ್ರೆಸ್‌ಗೆ ತೀವ್ರ ಮುಜುಗರ ಉಂಟು ಮಾಡಿದ್ದಾರೆ.

ಜಿಲ್ಲಾ ಮಟ್ಟದ ಸಂವಾದದಲ್ಲಿ ಮಾತನಾಡುತ್ತಿದ್ದ ರಾಯರೆಡ್ಡಿ, ಎಲ್ಲೂ ಗುಣಮಟ್ಟದ ಕೆಲಸಗಳು ನಡೆಯುತ್ತಿಲ್ಲ. ಯಾಕೆಂದರೆ ನಮ್ಮ ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದೆ. ಹಿಂದೆ 50–60 ವರ್ಷವಾದರೂ ಸರ್ಕಾರೀ ಕಟ್ಟಡಗಳಿಗೆ ಏನೂ ಆಗುತ್ತಿರಲಿಲ್ಲ. ಈಗೆಲ್ಲಾ ಹತ್ತೇ ವರ್ಷದಲ್ಲಿ ಬಿದ್ದು ಹೋಗುತ್ತಿವೆ ಎಂದು ಬಸವರಾಜ ರಾಯರೆಡ್ಡಿ ಹೇಳಿದ್ದಾರೆ.

ಪ್ರಮುಖವಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಭ್ರಷ್ಟಾಚಾರ ವಿಪರೀತ ಎನಿಸುವಷ್ಟಾಗುತ್ತಿದೆ. ದೊಡ್ಡ ಮಟ್ಟದಲ್ಲಿ ಕರಪ್ಷನ್ ನಡೆಯುತ್ತಿದ್ದೆ. ಜನಪ್ರತಿನಿಧಿಗಳು ಸರಿಯಿದ್ದರೆ, ಅಧಿಕಾರಿಗಳು ಸರಿ ಇರುತ್ತಾರೆ. ಮುಖ್ಯಮಂತ್ರಿಗಳು ಏನೇ ಹೇಳಲಿ, ಭ್ರಷ್ಟಾಚಾರದ ಕುರಿತಂತೆ ನಾನು ನೀಡಿದ ಹೇಳಿಕೆಯಲ್ಲಿ ಬದಲಾವಣೆಯಿಲ್ಲ ಎಂದು ಬಸವರಾಜ ರಾಯರೆಡ್ಡಿ ಹೇಳಿದ್ದಾರೆ.

ಒಟ್ಟಾರೆಯಾಗಿ ರಾಯರೆಡ್ಡಿಯವರು ಹೇಳಿದ್ದರು ಕೂಡ, ಹಾಲೀ ಸರ್ಕಾರವನ್ನು ಸೇರಿ ಅವರು ಆರೋಪವನ್ನು ಮಾಡಿದ್ದಾರೆ. ಜೊತೆಗೆ, ಸಿಎಂ ಏನೇ ಹೇಳಿದರೂ ನನ್ನ ಅಭಿಪ್ರಾಯದಲ್ಲಿ ಬದಲಾವಣೆಯಿಲ್ಲ ಎಂದು ಹೇಳಿದ್ದಾರೆ. ಹಾಗಾಗಿ ಸಿದ್ದರಾಮಯ್ಯನವರ ಸರ್ಕಾರವನ್ನು ಸೇರಿ ಮಾಡಿದ ಆರೋಪ ಇದಾಗಿದೆ.

ರಾಜೀನಾಮೆಗೆ ಆಗ್ರಹ: ಬಿಲದಿಂದ ಒಂದೊಂದೆ ಹೆಗ್ಗಣಗಳು ಹೊರ ಬಂದ ರೀತಿ ಭಂಡ ಹಾಗೂ ಭ್ರಷ್ಟ ಸಿಎಂ ಸಿದ್ದರಾಮಯ್ಯ ಅವರ ಹಗರಣಗಳು ಒಂದೊಂದಾಗಿ ಹೊರ ಬರುತ್ತಿವೆ. ರಾಮಗಢ ಮಿನರಲ್ಸ್ ಸೇರಿ ಒಟ್ಟು 8 ಗಣಿಗಳಿಗೆ ಅನುಮತಿ ನೀಡಲು 'ಸಮಜಾವಾದಿ' ಸಿದ್ದರಾಮಯ್ಯ ಅವರು ಬರೋಬ್ಬರಿ 500 ಕೋಟಿ ಕಿಕ್ ಬ್ಯಾಕ್ ಪಡೆದಿದ್ದಾರೆ ಎಂಬ ದೂರು ದಾಖಲಾಗಿದೆ. ಸಿದ್ದರಾಮಯ್ಯ ಅವರ ಭ್ರಷ್ಟಾಚಾರದ ಪುಟಗಳು ದಿನಕ್ಕೊಂದರಂತೆ ಬಹಿರಂಗವಾಗುತ್ತಿದ್ದು, ಕೂಡಲೇ ಅವರು ರಾಜೀನಾಮೆ ನೀಡಬೇಕು ಎಂದು ಕರ್ನಾಟಕ ಬಿಜೆಪಿ ಐಟಿ ಸೆಲ್ ಟ್ವೀಟ್ (ಎಕ್ಸ್) ಮಾಡಿದೆ.

ರಾಯರೆಡ್ಡಿ ಸ್ಪಷ್ಟನೆ

ಬೆಂಗಳೂರು, ಏ.9– ಕೊಪ್ಪಳ ಜಿಲ್ಲಾ ಪರಿಷತ್ತಿನ ಸಭಾಂಗಣದಲ್ಲಿ ಕಲ್ಯಾಣ ಕರ್ನಾಟಕದಲ್ಲಿ ಕಳೆದ 20 ವರ್ಷಗಳ ಅಭಿವೃದ್ಧಿ ಬಗ್ಗೆ ಚರ್ಚೆ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಎಲ್ಲಾ ಸರ್ಕಾರದ ಅವಧಿಯಲ್ಲೂ ಭ್ರಷ್ಟಾಚಾರ ಇತ್ತು ಎಂದು ಹೇಳಿರುವುದಾಗಿ ಸ್ಪಷ್ಟನೆ ನೀಡಿದ್ದಾರೆ. ಸಿದ್ದರಾಮಯ್ಯ ಸರ್ಕಾರ ಅಥವಾ ನಮ್ಮ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ನಾನು ಹೇಳಿಲ್ಲ. ಭ್ರಷ್ಟಾಚಾರ ವ್ಯವಸ್ಥೆ ನಮ್ಮ ರಾಜ್ಯಕ್ಕೆ ಬಂದಿರುವುದನ್ನು ತಡೆಯಬೇಕು ಎಂದು ಹೇಳಿರುವುದಾಗಿ ಬಸವರಾಜ ರಾಯರೆಡ್ಡಿ ಸ್ಪಷ್ಟನೆ ನೀಡಿದ್ದಾರೆ.

ಕಾಂಗ್ರೆಸ್ ಶಾಸಕರೇ ತಮ್ಮ ಸರ್ಕಾರದ ಕರಾಳ ಮುಖವಾಡ ಬಿಚ್ಚಿಟ್ಟಿದ್ದಾರೆ!

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಟಾಂಗ್



ಬೆಂಗಳೂರು, ಏ.9– ಭ್ರಷ್ಟಾಚಾರದಲ್ಲಿ ದೇಶದಲ್ಲೇ ಕರ್ನಾಟಕ ನಂ.1 ಎಂದು ಹೇಳುವ ಮೂಲಕ ಈ ಸರ್ಕಾರದ ಕರಾಳ ಭ್ರಷ್ಟತೆಯ ಮುಖವಾಡವನ್ನು ಕಾಂಗ್ರೆಸ್ ಶಾಸಕರೇ ಬಯಲು ಮಾಡಿ ರಾಜ್ಯದ ಘನತೆ ಕುಗ್ಗಿದ ಸ್ವರೂಪವನ್ನು ಬಿಚ್ಚಿಟ್ಟಿದ್ದಾರೆ. ಆ ಮೂಲಕ ರಾಷ್ಟ್ರ ಮಟ್ಟದಲ್ಲಿ ರಾಜ್ಯ ನಿಮ್ಮ ಆಡಳಿತದಲ್ಲಿ ಸಂಪೂರ್ಣ ಭ್ರಷ್ಟತೆಯ ಕಪ್ಪು ಮಸಿ ಮೆತ್ತಿಕೊಂಡಿರುವುದನ್ನು ಅನಾವರಣ ಮಾಡಿ ಕರ್ನಾಟಕ ವಿಶ್ವಮಟ್ಟದಲ್ಲಿ ತಲೆತಗ್ಗಿಸುವ ಪರಿಸ್ಥಿತಿ ಇರುವುದನ್ನು ವಿವರಿಸಿದ್ದಾರೆಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಟಾಂಗ್ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯರ ಆರ್ಥಿಕ ಸಲಹೆಗಾರರೂ ಆಗಿರುವ ಶಾಸಕ ಬಸವರಾಜ ರಾಯರೆಡ್ಡಿ ಹೇಳಿಕೆ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ಸಿದ್ದರಾಮಯ್ಯ ಅವರೇ ಭ್ರಷ್ಟಾಚಾರ, ಲೂಟಿಕೋರತನ ಕಾಂಗ್ರೆಸ್ ಸರ್ಕಾರದ ಅವಿಭಾಜ್ಯ ಅಂಗ ಎಂಬುದನ್ನು ಸ್ವತಃ ನಿಮ್ಮ ಆರ್ಥಿಕ ಸಲಹೆಗಾರರೂ ಆಗಿರುವ ಶಾಸಕ ಬಸವರಾಜ ರಾಯರೆಡ್ಡಿ ಅವರೇ ಸ್ಪಷ್ಟವಾಗಿ ಬಹಿರಂಗಪಡಿಸಿದ್ದಾರೆ. ದೇಶದಲ್ಲೇ ಕರ್ನಾಟಕ ಭ್ರಷ್ಟಾಚಾರದಲ್ಲಿ ನಂ.1 ಎಂದು ಹೇಳುವ ಮೂಲಕ ಈ ಸರ್ಕಾರದ ಕರಾಳ ಭ್ರಷ್ಟತೆಯ ಮುಖವಾಡವನ್ನು ಬಯಲು ಮಾಡಿ ರಾಜ್ಯದ ಘನತೆ ಕುಗ್ಗಿದ ಸ್ವರೂಪವನ್ನು ಬಿಚ್ಚಿಟ್ಟಿದ್ದಾರೆ. ಆ ಮೂಲಕ ರಾಷ್ಟ್ರ ಮಟ್ಟದಲ್ಲಿ ರಾಜ್ಯ ನಿಮ್ಮ ಆಡಳಿತದಲ್ಲಿ ಸಂಪೂರ್ಣ ಭ್ರಷ್ಟತೆಯ ಕಪ್ಪು ಮಸಿ ಮೆತ್ತಿಕೊಂಡಿರುವುದನ್ನು ಅನಾವರಣ ಮಾಡಿ ಕರ್ನಾಟಕ ವಿಶ್ವಮಟ್ಟದಲ್ಲಿ ತಲೆ ತಗ್ಗಿಸುವ ಪರಿಸ್ಥಿತಿ ಇರುವುದನ್ನು ವಿವರಿಸಿದ್ದಾರೆಂದು ಹೇಳಿದ್ದಾರೆ. ಜನಪ್ರತಿನಿಧಿಗಳು ಹೇಗೆ ಇರುತ್ತಾರೋ ಅದರಂತೆಯೇ ಅಧಿಕಾರಿಗಳೂ ಇರುತ್ತಾರೆ, ಮುಖ್ಯಮಂತ್ರಿ ಏನೇ ಹೇಳಿದರೂ ಭ್ರಷ್ಟಾಚಾರದ ಕುರಿತು ನನ್ನ ವೈಯಕ್ತಿಕ ಅಭಿಪ್ರಾಯ ಇದೇ ಇರುತ್ತದೆ ಎಂದು ಹೇಳುವ ಮೂಲಕ 'ಯಥಾ ರಾಜ ತಥಾ ಮಂತ್ರಿಗಳು, ಅಧಿಕಾರಿಗಳು' ಎಂಬ ಮಾತು ನಿಮ್ಮ ಆಡಳಿತದಲ್ಲಿ ಅಕ್ಷರಶಃ ಅನ್ವಯಿಸುತ್ತಿದೆ ಎನ್ನುವುದನ್ನು ಹೇಳುವ ಮೂಲಕ ವಾಸ್ತವ ಸ್ಥಿತಿಯ ಮೇಲೆ ನೇರವಾಗಿ ಬೆಳಕು ಚೆಲ್ಲಿದ್ದಾರೆಂದು ಟೀಕಿಸಿದ್ದಾರೆ.

ಹಿಂದಿನ ನಮ್ಮ ಬೊಮ್ಮಾಯಿ ಅವರ ನೇತೃತ್ವದ ಬಿಜೆಪಿ ಸರ್ಕಾರವನ್ನು ಶೇ.40 ಸರ್ಕಾರ ಎಂಬ ಸುಳ್ಳು ಅಪಪ್ರಚಾರಗಳನ್ನು ನಡೆಸಿ ರಾಜ್ಯದ ಜನತೆಯನ್ನು ದಿಕ್ಕು ತಪ್ಪಿಸಿ ಜಗತ್ತಿನಲ್ಲಿ 'ನಾವೇ ಸತ್ಯವಂತರು' ಎಂದು ಡಂಗುರ ಸಾರಿ ಅಧಿಕಾರಕ್ಕೆ ಬಂದ ನಿಮ್ಮ ನೈಜ ಮುಖವಾಡ ಇದೀಗ ಕಳಚಿ ಬಿದ್ದಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಮಾನ್ಯ ಗೌರವಾನ್ವಿತ ಹೆಚ್ಚುವರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಾಮರಾಜನಗರ

ಒ.ಎಸ್.ನಂ : 130/2024

ವಾದಿ: ಅಪರ್ಣಾಂಭ ವಿರುದ್ಧ
ಪ್ರತಿವಾದಿಗಳು : ಪ್ರಭಾಮಣಿ ಮತ್ತು ಇತರರು,
ಪ್ರತಿವಾದಿ -5 ರವರು : ಕೆ.ರಾಮಚಂದ್ರ ಬಿನ್ ಕೃಷ್ಣಪ್ಪ , ವಯಸ್ಸು ಸುಮಾರು 48 ವರ್ಷ, ನಂ.382, 2ನೇ ಕ್ರಾಸ್, ವಿದ್ಯಾನಗರ, ನಜರಾಬಾದ್ ಮೊಹಲ್ಲಾ, ಮೈಸೂರು ಸಿಟಿ.

ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20ರ ಅಡಿ ನೀಡುತ್ತಿರುವ ನೋಟೀಸು

ಈ ದಾವೆಯ ವಾದಿಯು ಪ್ರತಿವಾದಿಗಳ ವಿರುದ್ಧ ದಾವಾ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ದಾವೆಯನ್ನು ಸಲ್ಲಿಸಿದ್ದು. ಸದರಿ ದಾವೆಯಲ್ಲಿ ಮೇಲ್ಕಂಡ 5 ನೇ ಪ್ರತಿವಾದಿಗೆ ಅನೇಕ ಬಾರಿ ನ್ಯಾಯಾಲಯದ ನೋಟಿಸ್/ಸಮನ್ಸ್ ಜಾರಿ ಮಾಡಿದರು ಸಹ ದುರುದ್ದೇಶಪೂರಕವಾಗಿ ನೋಟೀಸ್‌ನ್ನು ಸ್ವೀಕರಿಸುವುದಿಲ್ಲ. ಆದ ಕಾರಣ ಮೇಲ್ಕಂಡ 5ನೇ ಪ್ರತಿವಾದಿಯು ದಿನಾಂಕ: 12.6.2025 ರಂದು ಖುದ್ದಾಗಿ ಅಥವಾ ತಮ್ಮ ವಕೀಲರ ಮುಖಾಂತರ ಮೇಲ್ಕಂಡ ನ್ಯಾಯಾಲಯದಲ್ಲಿ ಬೆಳಗ್ಗೆ 11:00 ಗಂಟೆಗೆ ತಪ್ಪದೇ ಹಾಜರಾಗತಕ್ಕದ್ದು, ಇದಕ್ಕೆ ತಪ್ಪಿದ್ದಲ್ಲಿ ಘನ ನ್ಯಾಯಾಲಯವು ಮೇಲ್ಕಂಡ 5 ನೇ ಪ್ರತಿವಾದಿಯ ವಿರುದ್ಧ ಏಕ ಪಕ್ಷಿಯ ಎಂದು ತೀರ್ಮಾನಿಸಿ ಕಾನೂನಿನ ಪ್ರಕಾರ ಈ ಮೇಲ್ಕಂಡ ದಾವೆಯನ್ನು ಇತ್ಯರ್ಥ ಪಡಿಸಲಾಗುವುದು.

ನ್ಯಾಯಾಲಯದ ಮೊಹರಿನೊಂದಿಗೆ

ಸಹಿ/- ಶಿರಸ್ತೇದಾರರು
ಗೌರವಾನ್ವಿತ ಹೆಚ್ಚುವರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಾಮರಾಜನಗರ

ವಾದಿ ಪರ ವಕೀಲರು
ಸಹಿ/- ಶ್ರೀ ಕೆ.ಪಿ. ನಾಗರಾಜು , ವಕೀಲರು,
1ನೇ ಮಹಡಿ, ಸಿ.ಎನ್.ಎಸ್. ಬಿಲ್ಡಿಂಗ್
ಆಂಜನೇಯ ದೇವಸ್ಥಾನದ ಹಿಂಭಾಗ,
ಸಂತೇಮರಹಳ್ಳಿ ಸರ್ಕಲ್ ಹತ್ತಿರ, ಚಾ॥ ನಗರ
ದಿನಾಂಕ 08.04.2025

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ
ಕೊಡಗು ವಿಭಾಗ, ಮಡಿಕೇರಿ

ಅಲ್ಪಾವಧಿ ಟೆಂಡರ್ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂಖ್ಯೆ : 48/2024-25/89-93 ದಿನಾಂಕ: 09-04-2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4 ರನ್ವಯ ದ್ವಿ ಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿನ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ: 5054-ಜಿಲ್ಲಾ ಮುಖ್ಯ ರಸ್ತೆ ಸುಧಾರಣೆಯಡಿಯ 1 ಕಾಮಗಾರಿಗೆ (ಇಂಡೆಂಟ್ ಸಂಖ್ಯೆ:20105) ಒಟ್ಟು 1 ಕಾಮಗಾರಿಗಳಿಗೆ ಇ-ಸಂಗ್ರಹಣಾ ವೇದಿಕೆ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ ರೂ. 1250.20 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25-04-2025 ಸಂಜೆ 5.00 ಗಂಟೆಯಾಗಿರುತ್ತದೆ.

ಟೆಂಡರ್ ಸಂಪೂರ್ಣ ವಿವರಗಳನ್ನು ಇ-ಸಂಗ್ರಹಣಾ ವೇದಿಕೆ https://kp-pp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ- ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ
ಕೊಡಗು ವಿಭಾಗ, ಮಡಿಕೇರಿ.

ಮೈಸೂರು ವಿಶ್ವವಿದ್ಯಾನಿಲಯ
ಸ್ಥಾಪನೆ–1916
(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)
(ಎನ್‌ಐಆರ್‌ಎಫ್–2024: ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)
ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ, ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್ ಭವನ, ಮೈಸೂರು–570 005,

ಸಂಖ್ಯೆ: ಪವಿ.6.7/180/2011–12 ದಿನಾಂಕ: 28–03–2025

ಟೆಂಡರ್ ಪ್ರಕಟಣೆ

E-Procurement Portal ಮುಖಾಂತರ ಮಾತ್ರ
Web site: https,eproc.karnataka.govt.in

ಮಾನ್ಯ ಕುಲಪತಿಯವರ ಆದೇಶದ ಮೇರೆಗೆ, ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಮೌಲ್ಯಮಾಪನಗೊಂಡ ಹಳೆಯ ಉತ್ತರಪತ್ರಿಕೆಗಳನ್ನು ಯಾವ ಸ್ಥಿತಿಯಲ್ಲಿ ಇದೆಯೋ ಅದೇ ಸ್ಥಿತಿಯಲ್ಲಿಯೇ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ವಿಲೇವಾರಿ ಮಾಡಲು ಪೇಪರ್ ಮಿಲ್ಸ್ ಉದ್ದಿಮೆದಾರರು ಹಾಗೂ ಹಳೆಯ ಪೇಪರ್ ವ್ಯಾಪಾರಿಗಳಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ರನ್ನು ಸಲ್ಲಿಸಲು ಕೊನೆಯ ದಿ: 19.04.2025 ಸಂಜೆ 5.30 ಗಂಟೆಯ ವರೆಗೆ ಮತ್ತು ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ ದಿ: 21.04.2025 ರಂದು ಬೆಳಿಗ್ಗೆ 11.00 ಗಂಟೆಗೆ (ರಜಾ ದಿನಗಳನ್ನು ಹೊರತುಪಡಿಸಿ) ಕುಲಸಚಿವ (ಪರೀಕ್ಷಾಂಗ), ಇವರ ಸಮಕ್ಷಮದಲ್ಲಿ ಟೆಂಡರ್‌ನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ Web site: https;eproc.karnataka.govt.in ನ್ನು ವೀಕ್ಷಿಸುವುದು ಅಥವಾ ದೂರವಾಣಿ ಸಂಖ್ಯೆ: 0821–2419293, 2419220 ಅನ್ನು ಸಂಪರ್ಕಿಸುವುದು.

ಸಹಿ/– ಉಪಕುಲಸಚಿವರು (ಪರೀಕ್ಷಾಂಗ)

DIPR-DD-MYS/01/KSMCA-44/2025-26